ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Reg. No. BDR/054/2026-2027 Email: mallammanudi@gmail.com E-paper: www.mallammanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕರು: ರಮೇಶರೆಡ್ಡಿ | 9448 604450

Mallammanudi Regional News Paper | Editor: Ramesh Reddy | RNI NO:KARKAN/2011/48371

VOLUME - 13 ಸಂಪುಟ-13 | ISSUE - 89 ಸಂಚಿಕೆ- 89 | PAGE-8 ಪುಟ-8 | ಬುಧುವಾರ 14.05.2025 | RS.2/- ಬೆಲೆ 2/-

# ಪಾಕ್ ದಾಳಿ ನಡೆಸಿದರೆ ಭಾರತ ನುಗ್ಗಿ ಹೊಡೆಯುತ್ತದೆ:ಪ್ರಧಾನಿ ಮೋದಿ





ಮಲ್ಲಮ್ಮ ನುಡಿ ವಾರ್ತೆ ಆದ 'ಂಪುರ:ಮೇ.13:ಭಯೋತ್ಪಾದನೆ ವಿರುದ್ಧ ಭಾರತದ ಲಕ್ಷ್ಮಣ ರೇಖೆ ಸ್ಪಷ್ಟ, ಪಾಕಿಸ್ತಾನದಿಂದ ಮತ್ತೆ ದಾಳಿ ನಡೆದರೆ ಭಾರತ ನುಗ್ಗಿ ಹೊಡೆಯುತ್ತದೆಎಂದು ಪ್ರಧಾನಿ ಮೋದಿ ಮತ್ತೆ ನೇರಾನೇರ ಎಚ್ಚರಿಕೆ ನೀಡಿದ್ದಾರೆ.ಭಾರತ ಮತ್ತು ಪಾಕಿಸ್ತಾನ ನಡುವೆ ಕದನ ವಿರಾಮ ಘೋಷಣೆಯಾದ ಬಳಿಕ ಇಂದು ಮೋದಿ ಪಂಜಾಬ್‌ನ ಅದಮ್‌ಪುರ ವಾಯುನೆಲೆಗೆ ಭೇಟಿ ನೀಡಿ ಸೈನಿಕರೊಂದಿಗೆ ಸಂವಾದ ನಡೆಸಿದರು.ಭಯೋತ್ಪಾದನೆಯ ವಿರುದ್ಧ ಭಾರತದ ಲಕ್ಷ್ಮಣ ರೇಖೆ ಈಗ ಸ್ಪಷ್ಟವಾಗಿದೆ. ಒಂದು ವೇಳೆ ಪಾಕಿಸ್ತಾನ ಮತ್ತೊಂದು ದಾಳಿ ನಡೆಸಿದರೆ, ಭಾರತವು ತಕ್ಕ ಉತ್ತರ ನೀಡುತ್ತದೆ. 'ಆಪರೇಷನ್ ಸಿಂಧೂರ'ದಿಂದ ನೀವೆಲ್ಲ ಇತಿಹಾಸವನ್ನು ಸೃಷ್ಟಿಸಿದ್ದೀರಿ. ಪ್ರತಿಯೊಬ್ಬ ಭಾರತೀಯನೂ ನಿಮ್ಮ ಈ ಯಶಸ್ಸಿನಿಂದಾಗಿ ಹೆಮ್ಮೆಪಡುತ್ತಾರೆ. ನೀವು ಯಾವುದೇ ಗುರಿಯನ್ನು ತಲುಪಿದಾಗಲೂ ಕೇಳಿಬರುವುದು ಒಂದೇ ಅದು 'ಭಾರತ್ ಮಾತಾ ಕಿ ಜೈ', ಇದು ಕೇವಲ ಘೋಷ ವಾಕ್ಯವಲ್ಲ. ದೇಶಕ್ಕಾಗಿ ತಮ್ಮ ಪ್ರಾಣವನ್ನೇ ತ್ಯಾಗ ಮಾಡುವ ಸೈನಿಕರ ಧ್ವನಿ, ಭಾರತದ ನೆಲದ ಮೇಲೆ, ಕಾರ್ಯಾಚರಣೆಯ ವೇಳೆ ಇದು ಯಾವಾಗಲೂ ಪ್ರತಿಧ್ವನಿಸುತ್ತಿರುತ್ತದೆ. ಇಂದು ನಾನು ನಿಮ್ಮನ್ನು ನೋಡಲು ಇಲ್ಲಿಗೆ ಬಂದಿದ್ದೇನೆ. ನಿಮ್ಮಂತಹ ಧೈರ್ಯಶಾಲಿಗಳನ್ನು ಕಣ್ತುಂಬಿಕೊಳ್ಳುವುದೇ ನಮ್ಮೆಲ್ಲರಿಗೆ ಆಶೀರ್ವಾದ ಎಂದು ಹೇಳಿದರು.

ಆಪರೇಷನ್ ಸಿಂಧೂರ್ ಇದೊಂದು ಸಾಮಾನ್ಯ ಕಾರ್ಯಾಚರಣೆಯಲ್ಲ. ಇದು ಇಡೀ ದೇಶದ ನಿರ್ಣಯ ಹಾಗೂ ದೃಢ ನಿರ್ಧಾರದ ಬಗ್ಗೆ ತೋರಿಸುತ್ತದೆ. ನಮ್ಮ ಉದ್ದೇಶ ಸ್ಪಷ್ಟವಾಗಿದೆ, ಒಂದು ವೇಳೆ ಇನ್ನೊಂದು ದಾಳಿ ನಡೆದರೆ ಭಾರತ ಖಂಡಿತವಾಗಿ ಸೇಡು ತೀರಿಸಿಕೊಳ್ಳುತ್ತದೆ. ಭಾರತೀಯ ಸೇನೆ ಕೇವಲ ಉಗ್ರರು ನೆಲೆಗಳನ್ನು ನಾಶ ಮಾಡಿಲ್ಲ, ಅವರ ದುಷ್ಟ ಉದ್ದೇಶಗಳನ್ನು ಹೊಡೆದು ಹಾಕಿದ್ದಾರೆ ಎಂದರು.

ನಮ್ಮ ಉದ್ದೇಶ ಭಯೋತ್ಪಾದಕ ನೆಲೆಗಳು ಹಾಗೂ ಪಾಕಿಸ್ತಾನದೊಳಗಿನ ಭಯೋತ್ಪಾದಕರ ಮೇಲೆ ದಾಳಿ ಮಾಡುವುದು. ಆದರೆ ಪಾಕಿಸ್ತಾನ ನಾಗರಿಕ ವಿಮಾನಗಳನ್ನು ಗುರಾಣಿಯಾಗಿ ಬಳಸಿಕೊಂಡು ಹೇಯಕೃತ್ಯ ನಡೆಸಿತ್ತು. ಆದರೆ ನಾಗರಿಕ ವಿಮಾನಗಳಿಗೆ ಹಾನಿ ಮಾಡದೇ ನೀವು ನಿಮ್ಮ ಗುರಿಯನ್ನು ಸಾಧಿಸಿದ್ದೀರಿ ಎಂದು ನನಗೆ ಹೆಮ್ಮೆ ಇದೆ ಎಂದು ಹೇಳಿದರು.

ಅದಮ್‌ಪುರ ವಾಯುನೆಲೆಯನ್ನು ನಾವು ಧ್ವಂಸ ಮಾಡಿದ್ದೇವೆ. ಎಸ್ 400 ಕ್ಷಿಪಣಿ ವ್ಯವಸ್ಥೆಗೆ ಹಾನಿ ಮಾಡಿದ್ದೇವೆ ಎಂದು ಪಾಕಿಸ್ತಾನ ಹೇಳಿತ್ತು. ಆದರೆ ಇಂದು ಮೋದಿ ಅದಮ್‌ಪುರ ವಾಯುನೆಲೆಗೆ ಭೇಟಿ ನೀಡುವುದರ ಜೊತೆ ಹಿಂದುಗಡೆ ಎಸ್ 400 ಕ್ಷಿಪಣಿ ವ್ಯವಸ್ಥೆ ಮುಂದೆ ನಿಂತು ಭಾಷಣ ಮಾಡುವ ಮೂಲಕ ತಿರುಗೇಟು ನೀಡಿದ್ದಾರೆ

## ಭಾರತ-ಪಾಕ್ ಸಂಘರ್ಷ:ಪಾಕ್‌ನ 11 ಸೈನಿಕರ ಸಾವು,78 ಜನರಿಗೆ ಗಾಯ


ಮಲ್ಲಮ್ಮ ನುಡಿ ವಾರ್ತೆ ಇಸ್ಲಾಮಾಬಾದ್:ಮೇ.13: ಭಾರತದೊಂದಿಗಿನ ಇತ್ತೀಚಿನ ಮಿಲಿಟರಿ ಘರ್ಷಣೆಯಲ್ಲಿ 11 ಸೈನಿಕರು ಮೃತಪಟ್ಟು 78 ಜನರು ಗಾಯಗೊಂಡಿದ್ದಾರೆ ಎಂದು ಪಾಕಿಸ್ತಾನ ಮಂಗಳವಾರ ಘೋಷಿಸಿದೆ.

ಮೇ 6-7ರ ರಾತ್ರಿ ಭಾರತ ನಡೆಸಿದ ಅಪ್ರಚೋದಿತ ಮತ್ತು ಖಂಡನೀಯ ಹೇಯ ದಾಳಿಗಳಲ್ಲಿ 40 ನಾಗರಿಕರು ಮೃತಪಟ್ಟಿದ್ದಾರೆ,121 ಜನರು ಗಾಯಗೊಂಡಿದ್ದಾರೆ ಎಂದು ಭಾರತೀಯ ಸೇನೆ ಹೇಳಿಕೆಯಲ್ಲಿ ತಿಳಿಸಿದೆ. ನಾಲ್ಕು ದಿನಗಳ ತೀವ್ರ ಗಡಿಯಾಚೆಗಿನ ಡ್ರೋನ್ ಮತ್ತು ಕ್ಷಿಪಣಿ ದಾಳಿಯ ನಂತರ ಸಂಘರ್ಷವನ್ನು ಕೊನೆಗೊಳಿಸಲು ಭಾರತ ಮತ್ತು ಪಾಕಿಸ್ತಾನ ಶನಿವಾರ ಒಪ್ಪಂದಕ್ಕೆ ಬಂದವು. ಮಾತೃಭೂಮಿಯನ್ನು ರಕ್ಷಿಸುವಾಗ, ಪಾಕಿಸ್ತಾನದ ಸಶಸ್ತ್ರ ಪಡೆಗಳ 11 ಸಿಬ್ಬಂದಿ ಮೃತಪಟ್ಟು 78 ಜನರು ಗಾಯಗೊಂಡರು ಎಂದು ಪಾಕಿಸ್ತಾನ ಸೇನೆ ತಿಳಿಸಿದೆ. ಮೃತರಾದ ಪಾಕ್ ಸೇನೆಯ ಸಿಬ್ಬಂದಿಗಳಲ್ಲಿ ಪಾಕಿಸ್ತಾನ ವಾಯುಪಡೆಯ ಸ್ಕ್ವಾಡ್ರನ್ ಲೀಡರ್ ಉಸ್ಮಾನ್ ಯೂಸುಫ್, ಮುಖ್ಯ ತಂತ್ರಜ್ಞ ಔರಂಗಜೇಬ್, ಹಿರಿಯ ತಂತ್ರಜ್ಞ ನಜೀಬ್, ಕಾರ್ಪೊರಲ್ ತಂತ್ರಜ್ಞ ಫಾರೂಕ್ ಮತ್ತು ಹಿರಿಯ ತಂತ್ರಜ್ಞ ಮುಬಾಶಿರ್ ಸೇರಿದ್ದಾರೆ.

ದಾಳಿಯಲ್ಲಿ ಮೃತಪಟ್ಟ ಸೇನಾ ಸಿಬ್ಬಂದಿಗಳಲ್ಲಿ ನಾಯಕ್ ಅಬ್ದುಲ್ ರೆಹಮಾನ್, ಲ್ಯಾನ್ಸ್ ನಾಯಕ್ ದಿಲಾವರ್ ಖಾನ್, ಲ್ಯಾನ್ಸ್ ನಾಯಕ್ ಇಕ್ರಮುಲ್ಲಾ, ನಾಯಕ್ ವಕಾರ್ ಖಾಲಿದ್, ಸಿಪಾಯಿ ಮುಹಮ್ಮದ್ ಅದೀಲ್ ಅಕ್ಬರ್ ಮತ್ತು ಸಿಪಾಯಿ ನಿಸಾರ್ ಸೇರಿದ್ದಾರೆ ಎಂದು ಅದು ಹೇಳಿದೆ.ಪಾಕಿಸ್ತಾನ ಸಶಸ್ತ್ರಪಡೆಗಳು ಮರ್ಕಾ-ಎ-ಹಕ್' ಬ್ಯಾನರ್ ಅಡಿಯಲ್ಲಿ ಪ್ರತಿದಾಳಿ ನಡೆಸಿದ್ದಾರೆ, ಆಪರೇಷನ್ ಬನ್ಯಾನಮ್ ಮರ್ಸೂಸ್ ಮೂಲಕ ನಿಖರ ಮತ್ತು ತೀಕ್ಷ್ಣವಾದ ಪ್ರತೀಕಾರದ ದಾಳಿಗಳನ್ನು ನೀಡಿತು ಎಂದು ಹೇಳಿಕೆ ಬಿಡುಗಡೆ ಮಾಡಿ ತಿಳಿಸಿದೆ. ಪಾಕಿಸ್ತಾನದ ಸಶಸ್ತ್ರಪಡೆಗಳು, ಪಾಕಿಸ್ತಾನದ ಜನರೊಂದಿಗೆ, ಮೃತ ನಾಗರಿಕರು ಮತ್ತು ಮಿಲಿಟರಿ ಸಿಬ್ಬಂದಿಗೆ ಗೌರವ ಸಲ್ಲಿಸುತ್ತೇವೆ ಎಂದರು.

ಯಾವುದೇ ಅಸ್ಪಷ್ಟತೆ ಇರಬಾರದು: ಪಾಕಿಸ್ತಾನದ ಸಾರ್ವಭೌಮತ್ವ ಅಥವಾ ಪ್ರಾದೇಶಿಕ ಸಮಗ್ರತೆಯನ್ನು ಪ್ರಶ್ನಿಸುವ ಯಾವುದೇ ಪ್ರಯತ್ನವನ್ನು, ಮತ್ತೊಮ್ಮೆ, ತ್ವರಿತ, ನಿರ್ಣಾಯಕ ಪ್ರತಿಕ್ರಿಯೆಯೊಂದಿಗೆ ಎದುರಿಸಲಾಗುವುದು ಎಂದು ಪಾಕಿಸ್ತಾನ ಹೇಳಿದೆ.

## ಕದನ ವಿರಾಮ ಬಗ್ಗೆ ಪ್ರಧಾನಿ ಮೋದಿ ಸತ್ಯ ಹೇಳಲಿ: ಪ್ರಿಯಾಂಕ್ ಖರ್ಗೆ



ಕಲಬುರಗಿ:ಮೇ.13: ಭಾರತ-ಪಾಕಿಸ್ತಾನದ ನಡುವಿನ ಕದನ ವಿರಾಮದ ಕುರಿತು ದೇಶದ ಜನರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಸತ್ಯ ಹೇಳಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಐಟಿ-ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.ಕಲಬುರಗಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕದನ ವಿರಾಮ ಘೋಷಣೆ ಅಮೆರಿಕ ಮಾಡಿಸಿದೆಯೋ ಅಥವಾ ಖುದ್ದು ಮೋದಿಯವರೇ ಮಾಡಿದ್ದಾರೋ ಎಂಬುದನ್ನು

(2ನೇ ಪುಟ ನೋಡಿ)

## ಜಿಮ್ಸ್ ಆಸ್ಪತ್ರೆಯಲ್ಲಿ ಕೈಕೊಟ್ಟ ಲಿಫ್ಟ್: ಗೋಡೆ ಒಡೆದು ಸಿಕ್ಕಿಬಿದ್ದ ೯ ಜನರ ರಕ್ಷಣೆ



ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ: ಮೇ.13: ಗುಲಬರ್ಗಾ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಆಸ್ಪತ್ರೆಯಲ್ಲಿ ಸಾಕಷ್ಟು ಅನಾಹುತಗಳು ಮೇಲಿಂದ ಮೇಲೆ ಸಂಭವಿಸುತ್ತಿವೆ. ಮಂಗಳವಾರ ಜಿಮ್ಸ್ ಆಸ್ಪತ್ರೆಯ (ಜಯದೇವ ಆಸ್ಪತ್ರೆ ಹಳೆಯ) ಲಿಫ್ಟ್ ಕೈ-ಕೊಟ್ಟಿದ್ದರಿಂದ ಸುಮಾರು 9 ಜನ ಸಿಬ್ಬಂದಿಗಳು ಒಂದು ತಾಸು ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದರು. ನಂತರ ಗೋಡೆ ಒಡೆದು ಆ ಎಂಟು ಜನ ಸಿಬ್ಬಂದಿಗಳನ್ನು ರಕ್ಷಿಸಲಾಗಿದೆ.

ಜಿಮ್ಸ್ ಆಸ್ಪತ್ರೆಯ ಮೂರನೇ

(2ನೇ ಪುಟ ನೋಡಿ)

## ಶೋಪಿಯಾನ್‌ನಲ್ಲಿ ಭದ್ರತಾ ಪಡೆಯೊಂದಿಗೆ ಗುಂಡಿನ ಚಕಮಕಿ : ಮೂವರು ಉಗ್ರರ ಹತ್ಯೆ




ಮಲ್ಲಮ್ಮ ನುಡಿ ವಾರ್ತೆ ಶ್ರೀನಗರ:ಮೇ.13: ಜಮ್ಮು ಮತ್ತು ಕಾಶ್ಮೀರದ ಶೋಪಿಯಾನ್ ಜಿಲ್ಲೆಯ ಶುಕ್ರೂ ಕೆಲ್ಲರ್ ಅರಣ್ಯ ಪ್ರದೇಶದಲ್ಲಿ ಮಂಗಳವಾರ ಭದ್ರತಾ ಪಡೆಗಳೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಮೂವರು ಹತನಾಗಿದ್ದಾರೆ.

ಎನ್‌ಕೌಂಟರ್‌ನಲ್ಲಿ ಉನ್ನತ ಭಯೋತ್ಪಾದಕ ಕಮಾಂಡರ್ ಸೇರಿ ಮೂವರು ಉಗ್ರರು ಹತ್ಯೆಯಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪ್ರಸ್ತುತ ಕಾರ್ಡನ್ ಮತ್ತು ಶೋಧ ಕಾರ್ಯಾಚರಣೆ (ಸಿಎಎಸ್‌ಒ) ನಡೆಯುತ್ತಿರುವ ಸ್ಥಳದಲ್ಲಿ ಭಯೋತ್ಪಾದಕರು ಸಿಕ್ಕಿಬಿದ್ದಿದ್ದರು ಎಂದು ಭದ್ರತಾ ಪಡೆಗಳು ತಿಳಿಸಿವೆ.

ದಕ್ಷಿಣ ಕಾಶ್ಮೀರ ಜಿಲ್ಲೆಯ ಶುಕ್ರೂ ಕೆಲ್ಲರ್ ಪ್ರದೇಶದಲ್ಲಿ ಭಯೋತ್ಪಾದಕರು ಇರುವ ಬಗ್ಗೆ ನಿರ್ದಿಷ್ಟ ಮಾಹಿತಿಯ ಆಧಾರದ ಮೇಲೆ ಭದ್ರತಾ ಪಡೆಗಳು ಅಲ್ಲಿ ಸುತ್ತುವರಿದು ಶೋಧ ಕಾರ್ಯಾಚರಣೆ ಪ್ರಾರಂಭಿಸಿದವು. ಭಯೋತ್ಪಾದಕರು ಪ್ರತಿದಾಳಿ ನಡೆಸಿದರು. ಇದು ಪರಸ್ಪರರ ನಡುವೆ ಗುಂಡಿನ ಚಕಮಕಿಗೆ ಕಾರಣವಾಯಿತು.

ಏ.22 ರ ಪಹಲ್ಗಾಮ್ ಭಯೋತ್ಪಾದಕ ದಾಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆಂದು ಶಂಕಿಸಲಾಗಿರುವ ಮೂವರು ಪಾಕಿಸ್ತಾನಿ ಭಯೋತ್ಪಾದಕರಾದ ಆದಿಲ್ ಹುಸೇನ್ ಥೋಕರ್, ಅಲಿ ಭಾಯ್ ಮತ್ತು ಹಾಶಿಮ್ ಮೂಸಾ ಪೋಸ್ಟರ್‌ಗಳನ್ನು ಭದ್ರತಾ ಪಡೆಗಳು ಪೋಸ್ಟ್ ಮಾಡಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

## ಮೂರೇ ದಿನಕ್ಕೆ ಕದನ ವಿರಾಮ-ಯಾವ ಉದ್ದೇಶಕ್ಕೆ ಯುದ್ಧ ಸಾರಿದ್ದು ಸಚಿವ ಕೃಷ್ಣ ಭೈರೇಗೌಡ ಪ್ರಶ್ನೆ



ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ, ಮೇ.13- ಯುದ್ಧ ಪ್ರಾರಂಭಿಸಿ ಮೂರೇ ದಿನಕ್ಕೆ ಕದನ ವಿರಾಮ ಘೋಷಿಸುವುದಾಗಿದ್ದರೆ, ಯುದ್ಧ ಮಾಡುವ ಅವಶ್ಯಕತೆ ಇತ್ತೆ ಎಂದು ಕಂದಾಯ ಸಚಿವ ಕೃಷ್ಣಭೈರೇಗೌಡ ಪ್ರಶ್ನಿಸಿದ್ದಾರೆ. ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಾವ ಉದ್ದೇಶ ಇಟ್ಟುಕೊಂಡು ಯುದ್ಧ ಆರಂಭ ಮಾಡಿದ್ದೀರಿ, ಆ ಉದ್ದೇಶ ಈಡೇರಿತೋ ಇಲ್ಲವೋ ಎಂಬುದೇ ಜನರಿಗೆ ಅರ್ಥವಾಗಲಿಲ್ಲ. ಪಾಕಿಸ್ತಾನಕ್ಕೆ ತಕ್ಕ ಶಾಸ್ತಿ ಮಾಡುತ್ತೇವೆ ಎಂದು ಹೇಳಿ ಅಮೇರಿಕ ಹೇಳಿದ ತಕ್ಷಣ ಕದನ ವಿರಾಮ ಘೋಷಿಸಿದ್ದು, ದೇಶದ ಜನರಿಗೆ

(2ನೇ ಪುಟ ನೋಡಿ)

## ಸಿಡಿಲು ಬಡಿದು ಒಂದೇ ಕುಟುಂಬದ ಇಬ್ಬರು ಸಾವು

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ:ಮೇ.13: ಕುರಿ ಮೇಯಿಸಲು ಹೋದಾಗ ಸಿಡಿಲು ಬಡಿದು ಒಂದೇ ಕುಟುಂಬದ ಇಬ್ಬರು ದಾರುಣವಾಗಿ ಮೃತಪಟ್ಟು, ಓರ್ವ ಬಾಲಕ ಗಂಭೀರವಾಗಿ ಗಾಯಗೊಂಡಿರುವ ಘಟನೆ ಬಳ್ಳಾರಿ ಜಿಲ್ಲೆಯ ಸಿರಗುಪ್ಪ ತಾಲೂಕಿನ ರಾರಾವಿ ಗ್ರಾಮದಲ್ಲಿ ನಡೆದಿದೆ.

ರಾರಾವಿ ಗ್ರಾಮದ ಭೀರಪ್ಪ (45), ಸುನೀಲ್ (26) ಮೃತ ದುರ್ದೈವಿಗಳು ದ್ಸಿಡಿಲು ಬಡಿದ ಪರಿಣಾಮ ವಿನೋದ್ (14) ಗಂಭೀರ ಗಾಯಗೊಂಡಿದ್ದಾನೆ. ಒಂದೇ ಕುಟುಂಬದ ಭೀರಪ್ಪ, ಸುನೀಲ್ ಹಾಗೂ ವಿನೋದ್ ಕುರಿ ಮೇಯಿಸಲು ಹೋದಾಗ, ಮಳೆ ಬಂದಿದ್ದರಿಂದ ಮರದ ಆಶ್ರಯ ಪಡೆದಿದ್ದರು. ಮರದ ಕೆಳಗೆ ನಿಂತಾಗ ಸಿಡಿಲು ಬಡಿದು ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಗಂಭೀರ ಗಾಯಗೊಂಡಿರುವ ವಿನೋದ್‌ನನ್ನು ಹೆಚ್ಚಿನ ಚಿಕಿತ್ಸೆಗಾಗಿ ಬಳ್ಳಾರಿಯ ವಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನೆಯಿಂದ ಇಡೀ ರಾರಾವಿ ಗ್ರಾಮದಲ್ಲಿ ನೀರವ ಮೌನ ಆವರಿಸಿದೆ. ಮೃತರ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ. ಸಿರಗುಪ್ಪ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

## ಅಕ್ರಮ ಮದ್ಯ ಮಾರಾಟ ತಡೆಗೆ ಹೆಚ್ಚಿನ ಕ್ರಮ ವಹಿಸಲು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಸೂಚನೆ



ಮಲ್ಲಮ್ಮ ನುಡಿ ವಾರ್ತೆ ಬೀದರ: ಮೇ.13: ಜಿಲ್ಲೆಯಲ್ಲಿ ಅಕ್ರಮ ಅಬಕಾರಿ ಚಟುವಟಿಕೆಗಳನ್ನು ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಅಬಕಾರಿ ಇಲಾಖೆ ಅಧಿಕಾರಿಗಳು ಎಲ್ಲಾ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಇನ್ನಷ್ಟು ಕಾರ್ಯಕ್ಷಮತೆ ವಹಿಸಿ ಹೆಚ್ಚಿನ ಗುಣಮಟ್ಟದ ಪ್ರಕರಣಗಳನ್ನು ದಾಖಲಿಸುಂತೆ ಅಬಕಾರಿ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳಾದ ಶಿಲ್ಪಾ ಶರ್ಮಾ ಅವರು ನಿರ್ದೇಶನ ನೀಡಿದರು.

ಅವರು ಮಂಗಳವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕಳ್ಳಭಟ್ಟಿ ಸಾರಾಯಿ, ಸೇಂದಿ , ಅಕ್ರಮ ಮದ್ಯ ಮತ್ತು ಮಾದಕ ವಸ್ತುಗಳ ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಜಿಲ್ಲಾ ಮಟ್ಟದ ಸ್ಥಾಯಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ರೂಢಿಗತ ಆರೋಪಿಗಳ ವಿರುದ್ಧ ಭಾರತೀಯ ನಾಗರಿಕ ನ್ಯಾಯ ಸಂಹಿತೆ ಕಲಂ129 ರಂತೆ ಕ್ರಮ ವಹಿಸಲು ಅಬಕಾರಿ ಇಲಾಖೆಯ ಅಧಿಕಾರಿಗಳಿಗೆ ಸಹಕಾರ ನೀಡಲು ಜಿಲ್ಲೆಯ ಎಲ್ಲ ತಹಶೀಲ್ದಾರ್‌ಗಳಿಗೆ ಸೂಚಿಸಿದರು. ಹಾಗೆಯೇ ಪೋಲಿಸ್ ಅಧಿಕಾರಿಗಳು ಕಳ್ಳಭಟ್ಟಿ ಮತ್ತು ಸೇಂದಿ ದಾಸ್ತಾನು ಬಗ್ಗೆ ಮೊಕದ್ದಮೆಗಳನ್ನು ದಾಖಲಿಸುವಾಗ ಅಬಕಾರಿ ಕಾಯ್ದೆಯೊಂದಿಗೆ ಭಾರತೀಯ ನಾಗರಿಕ ನ್ಯಾಯ ಸಂಹಿತೆ ಕಲಂ 123 ರಡಿಯೂ

(2ನೇ ಪುಟ ನೋಡಿ)

## ದ್ವಿಚಕ್ರ ವಾಹನ-ಐಷರ್ ಟ್ರಕ್ ಮಧ್ಯೆ ಡಿಕ್ಕಿ: ಸಾವು

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಮೇ.13:ತಾಲ್ಲೂಕಿನ ಕಪಲಾಪೂರ ಕ್ರಾಸ್ ಬಳಿ ದ್ವಿಚಕ್ರ ವಾಹನ, ಐಷರ್ ಟ್ರಕ್ ಮಧ್ಯೆ ಮುಖಾಮುಖಿ ಡಿಕ್ಕಿ ಆದ ಪರಿಣಾಮ ದ್ವಿಚಕ್ರ ವಾಹನ ಸವಾರ ಸುಶೀಲ ತಾನಾಜಿ (25) ಸ್ಥಳದಲ್ಲಿ ಮೃತಪಟ್ಟಿದ್ದಾನೆ.

ಮೃತ ಯುವಕ ಖುದಾವಂದಪುರ ಗ್ರಾಮದ ನಿವಾಸಿಯಾಗಿದ್ದು, ಭಾಲ್ಕಿಯಿಂದ ಏಣಕೂರ ಗ್ರಾಮಕ್ಕೆ ತೆರಳುತ್ತಿದ್ದಾಗ ಹುಮನಾಬಾದ್ ಕಡೆಯಿಂದ ಭಾಲ್ಕಿ ಕಡೆಗೆ ಬರುತ್ತಿದ್ದ ಐಷರ್ ಟ್ರಕ್ ಗೆ ಡಿಕ್ಕಿಯಾದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾನೆ.

ಈ ಸಂಬಂಧ ಖಟಕ ಚಿಂಚೋಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಪಿಎಸ್ಐ ಸುದರ್ಶನ್ ರೆಡ್ಡಿ ತಿಳಿಸಿದ್ದಾರೆ.

## ಒಂದನೇ ಪುಟದಿಂದ

## ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಸೂಚನೆ

ಪ್ರಕರಣ ದಾಖಲಿಸುವಂತೆ ಪೊಲೀಸ್ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ತಹಶೀಲ್ದಾರ್‌ಗಳು ಕಳ್ಳಭಟ್ಟಿ, ಸೇಂದಿ ಮತ್ತು ಅಕ್ರಮ ಮದ್ಯ,ಮತ್ತು ಮಾದಕ ವಸ್ತುಗಳ ನಿರ್ಮೂಲನೆ ಬಗ್ಗೆ ತಾಲೂಕ ಮಟ್ಟದ ಸ್ಥಾಯಿ ಸಮಿತಿಯ ಸದಸ್ಯರುಗಳ ಸಭೆಯನ್ನು ಪ್ರತಿ ತಿಂಗಳು ನಡೆಸಿ ವಿವಿಧ ಇಲಾಖೆಗಳ ಸಾಧನೆಗಳ ಬಗ್ಗೆ ಪರಾಮರ್ಶಿಸಿ ಮಾಸಿಕ ವರದಿಯನ್ನು ಸಲ್ಲಿಸಲು ಜಿಲ್ಲೆಯ ಎಲ್ಲಾ ತಹಶೀಲ್ದಾರ್‌ಗಳಿಗೆ ಸೂಚಿಸಿದರು ಹಾಗೂ ಅಬಕಾರಿ ಪ್ರಕರಣಗಳಲ್ಲಿ ಮುಟ್ಟುಗೋಲು ಹಾಕಿಕೊಳ್ಳಲಾದ ವಾಹನಗಳನ್ನು ಇತರರಿಗೆ ಪರಭಾರೆ ಮಾಡದಂತೆ ಆರ್.ಟಿ.ಓ. ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು .

ಅಬಕಾರಿ ಮತ್ತು ಪೊಲೀಸ್ ಅಧಿಕಾರಿಗಳು ಮುಂಬರುವ ದಿನಗಳಲ್ಲಿ ಹೆಚ್ಚಿನ ಪ್ರಕರಣಗಳನ್ನು ದಾಖಲಿಸಿ ಕಳ್ಳಭಟ್ಟಿ, ಸೇಂದಿ, ನಕಲಿ ಮದ್ಯ ಮತ್ತು ಮಾದಕ ವಸ್ತುಗಳ ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಹೆಚ್ಚಿನ ಶ್ರಮವಹಿಸುವುದಾಗಿ ಜಿಲ್ಲಾಧಿಕಾರಿಗಳಿಗೆ ಆಶ್ವಾಸನೆ ನೀಡಿದರು.

ಈ ಸಭೆಯಲ್ಲಿ ಅಬಕಾರಿ, ಪೋಲಿಸ್, ಕಂದಾಯ, ಶಿಕ್ಷಣ, ಆಹಾರ ಸುರಕ್ಷಾ ಮತ್ತು ಔಷಧ ಆಡಳಿತ, ಅರಣ್ಯ, ಇಲಾಖೆಗಳ ಅಧಿಕಾರಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಸತ್ಯ ಹೇಳಲಿ: ಪ್ರಿಯಾಂಕ್ ಖರ್ಗೆ

ದೇಶದ ಜನರಿಗೆ ಸ್ಪಷ್ಟಪಡಿಸಬೇಕು ಎಂದರು.

ದೇಶದ ಜನರ ಮುಂದೆ ಈ ಸತ್ಯ ಮೋದಿ ಹೇಳಬೇಕು. ಅವರು ಕೇವಲ ಸೋಷಿಯಲ್ ಮೀಡಿಯಾ ಬಳಸಿಕೊಂಡು ಯುದ್ಧ ಮಾಡುತ್ತಿದ್ದಾರೆ. ಆದರೂ ಈ ಕಾರ್ಯಾಚರಣೆಯಲ್ಲಿ ಮೋದಿಯವರಿಗೆ ಕಾಂಗ್ರೆಸ್ ತನ್ನ ಸಂಪೂರ್ಣ ಬೆಂಬಲ ನೀಡಿದೆ. ಇಷ್ಟಾದರೂ ಪ್ರಧಾನಿ ಮೋದಿ ಸರ್ವ ಪಕ್ಷಗಳೊಂದಿಗೆ ಚರ್ಚಿಸುತ್ತಿಲ್ಲ. ಸಂಸತ್ ಅಧಿವೇಶನ ಕೂಡ ಕರೆಯುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ವಿದೇಶಿ ವ್ಯಾಪಾರ ನಿಲ್ಲಿಸುವ ಟ್ರಂಪ್ ಬೆದರಿಕೆಗೆ ಹೆದರಿ ನೀವು ಈ ನಿರ್ಣಯ ಕೈಗೊಂಡಿದ್ದೀರಾ? ಅತ್ತ ಪಾಕಿಸ್ತಾನ ಪ್ರಧಾನಿ ತಮ್ಮ ಸಂಸತ್ತಿನಲ್ಲಿ ಯುದ್ಧ ಗೆದ್ದಿದ್ದು ನಾವೇ ಎಂದು ಹೇಳಿಕೊಳ್ಳುತ್ತಿರುವುದರ ಹಿಂದಿನ ರಹಸ್ಯವೇನು ಎಂದು ಪ್ರಶ್ನಿಸಿದರು.

ಸೋಮವಾರ ಸಂಜೆ ಪ್ರಧಾನಿ ಅವರು ದೇಶ ಉದ್ದೇಶಿಸಿ ಮಾತನಾಡಿದ ವೇಳೆ ಕದನ ವಿರಾಮ ಘೋಷಣೆಯ ಹಿಂದಿನ ಸತ್ಯ ಕುರಿತು ಅವರು ಹೇಳಬೇಕಿತ್ತು. 56 ಇಂಚು ವಿಸ್ತಾರದ ಎದೆಯುಳ್ಳ ಪ್ರಧಾನಿ ಕೇವಲ ಕೆಂಪು ಕೋಟೆಯ ಮೇಲೆ ಮಾತನಾಡಲು ಮಾತ್ರ ಸೀಮಿತವಾಗಿದ್ದಾರೆ ಎಂದು ಲೇವಡಿ ಮಾಡಿದರು.

ಪಾಕಿಸ್ತಾನವನ್ನು ಈವರೆಗೆ ಭಾರತ ನಾಲ್ಕು ಬಾರಿ ಸೋಲಿಸಿದ್ದಾಗಿದೆ. ಆದರೆ ಈ ಬಾರಿ ವಿದೇಶಾಂಗ ನೀತಿಯಲ್ಲಿಯೇ ಭಾರತ ಸೋತಿದೆ. ಪಹಲ್ಗಾಮ್ ದಾಳಿ ನಡೆಸಿದ ನಾಲ್ವರು ಉಗ್ರರು ಈಗ ಎಲ್ಲಿದ್ದಾರೆ? ಅವರು ದೇಶದ ಒಳಗಡೆಯೇ ಇದ್ದಾರಾ? ಹೊರಗಡೆ ಹೋಗಿದ್ದಾರಾ, ಎಲ್ಲಿದ್ದಾರೆ? ಎಂಬುದನ್ನು ಹೇಳಲಿ. ಈ ಕುರಿತು ಕೂಡಲೇ ಸಂಸತ್ ಅಧಿವೇಶನ ಕರೆದು ಚರ್ಚಿಸಬೇಕು ಎಂದು ಆಗ್ರಹಿಸಿದರು.

## ಯುದ್ಧ ಸಾರಿದ್ದು ಸಚಿವ ಕೃಷ್ಣ ಭೈರೇಗೌಡ ಪ್ರಶ್ನೆ

ಅಚ್ಚರಿ ಮೂಡಿಸಿದೆ ಎಂದರು.

ಪಾಕಿಸ್ತಾನ ಇನ್ನೊಮ್ಮೆ ಇಂಥ ದುಸ್ಸಾಹಸಕ್ಕೆ ಕೈ ಹಾಕದಂತೆ ಮಾಡುವುದಾಗಿ ಹೇಳಿದ್ದ ಪ್ರಧಾನಿ ಮೋದಿ, ಯುದ್ಧ ಮಾಡಿ ಈಗ ಏನು ಸಾಧಿಸಿದ್ದೇವೆ ಎಂಬುದಕ್ಕೆ ಅವರೇ ಉತ್ತರಿಸಬೇಕು ಎಂದ ಕೃಷ್ಣ ಭೈರೇಗೌಡ, ಯುದ್ಧ ಸಾರುವುದಾಗಲಿ, ಕದನ ವಿರಾಮ ಮಾಡುವುದಾಗಲಿ ಅದನ್ನು ನಾವೇ ನಿರ್ಧರಿಸಬೇಕು. ಅಮೇರಿಕಾ ಅದನ್ನು ನಿರ್ವಹಿಸುವಂತೆ ಆಗಬಾರದು ಎಂದರು. ಅಮೇರಿಕಾದವರು ಹೇಳಿದರೆಂಬ ಕಾರಣಕ್ಕೆ ಕದನ ವಿರಾಮ ಘೋಷಣೆ ಮಾಡಿದರೆ ಇದು ದೇಶದ ಹಿತ ಕಾಯ್ದಂತೆ ಆಗುವುದಿಲ್ಲ ಎಂದು ಅವರು ಹೇಳಿದರು.

## ಗೋಡೆ ಒಡೆದು ಸಿಕ್ಕಿಬಿದ್ದ 9 ಜನರ ರಕ್ಷಣೆ

ಮಹಡಿಯ ಲಿಫ್ಟ್‌ನಲ್ಲಿ ತಾಂತ್ರಿಕ ದೋಷದಿಂದ 9 ಜನ ಸಿಬ್ಬಂದಿ ಸಿಲುಕಿ ಒಂದು ಗಂಟೆಗೂ ಹೆಚ್ಚು ಕಾಲ ತೀವ್ರ ಪರದಾಟ ಅನುಭವಿಸಿದರು. ಬೆಳಿಗ್ಗೆ 10 ಗಂಟೆ ಸುಮಾರಿಗೆ, ನೆಲ ಮಹಡಿಯಿಂದ 6ನೇ ಮಹಡಿಗೆ ತೆರಳಲು 9 ಜನ ಸಿಬ್ಬಂದಿಗಳು ಲಿಫ್ಟ್ ಹತ್ತಿದರು. ಆದಾಗ್ಯೂ, ಕೊಂಡೊಯ್ಯುತ್ತಿದ್ದ ಲಿಫ್ಟ್, ಮೂರನೇ ಮಹಡಿಯಲ್ಲಿ ತಾಂತ್ರಿಕ ದೋಷದಿಂದ ಸ್ಥಗಿತಗೊಂಡಿತು. ಆ ಲಿಫ್ಟ್ ಮೂರನೇ ಮಹಡಿಗೆ

ಸಂಪರ್ಕವಿಲ್ಲದ ಕಾರಣ, ಆ ಮಹಡಿಯ ಬಾಗಿಲಿಗೆ ಗೋಡೆ ನಿರ್ಮಿಸಲಾಗಿತ್ತು. ಇದರಿಂದ ಲಿಫ್ಟ್ ದ್ವಾರ ತೆರೆಯಲು ಸಾಧ್ಯವಾಗದೆ, ಸಿಬ್ಬಂದಿ ಗಾಳಿ ಮತ್ತು ಬೆಳಕಿಲ್ಲದ ವಾತಾವರಣದಲ್ಲಿ ತಾಸುಗಟ್ಟಲೇ ನಿಂತಲ್ಲೇ ನಿಂತು ಆತಂಕಪಡುವಂತಾಯಿತು.ಸಿಬ್ಬಂದಿ ಸಿಲುಕಿರುವ ಬಗ್ಗೆ ತಿಳಿದ ತಕ್ಷಣ ಆಸ್ಪತ್ರೆಯ ಅಧಿಕಾರಿಗಳು ಕಾರ್ಮಿಕರ ತಂಡವನ್ನು ಕರೆದು ರಕ್ಷಣಾ ಕಾರ್ಯ ಆರಂಭಿಸಿದರು. ಡ್ರಿಲ್ ಮಶಿನ್ ಬಳಸಿ

ಮೂರನೇ ಮಹಡಿಯ ಗೋಡೆಯನ್ನು ಒಡೆದು, ಲಿಫ್ಟ್ ದ್ವಾರವನ್ನು ಅನ್ ಲಾಕ್ ಮಾಡಲಾಯಿತು. ಸುಮಾರು 11 ಗಂಟೆಯ ಹೊತ್ತಿಗೆ, ಒಂದು ಗಂಟೆಯ ರಕ್ಷಣಾ ಕಾರ್ಯಾಚರಣೆಯ ಬಳಿಕ ಎಲ್ಲ 8 ಜನ ಸಿಬ್ಬಂದಿಯನ್ನು ಸುರಕ್ಷಿತವಾಗಿ ಹೊರತೆಗೆಯಲಾಯಿತು.ಒಂದು ಗಂಟೆಗೂ ಹೆಚ್ಚು ಕಾಲ ಲಿಫ್ಟಲ್ಲಿ ಸಿಲುಕಿದ್ದರಿಂದ ಸಿಬ್ಬಂದಿ ಆತಂಕ ಮತ್ತು ಉಸಿರಾಟದ ತೊಂದರೆಯನ್ನು ಎದುರಿಸಿದ್ದರು. ಹೊರಬಂದ ಬಳಿಕ ಎಲ್ಲರಿಗೂ ತಕ್ಷಣವೇ ವೈದ್ಯಕೀಯ ಉಪಚಾರ ನೀಡಲಾಯಿತು. ಆರೋಗ್ಯ ತಪಾಸಣೆಯ ನಂತರ, ಸಿಬ್ಬಂದಿಯನ್ನು ಕರ್ತವ್ಯಕ್ಕೆ ಮರಳಿ ಕಳುಹಿಸಲಾಗಿದೆ ಎಂದು ಜಿಮ್ಸ್ ಅಧಿಕಾರಿಗಳು ತಿಳಿಸಿದ್ದಾರೆ.ಘಟನೆಯಿಂದ ಜಿಮ್ಸ್ ಆಸ್ಪತ್ರೆಯ ಲಿಫ್ಟ್ ನಿರ್ವಹಣೆ ಮತ್ತು ತಾಂತ್ರಿಕ ಸೌಲಭ್ಯಗಳ ಕುರಿತು ಪ್ರಶ್ನೆಗಳು ಎದ್ದಿವೆ. ಮೂರನೇಮಹಡಿಗೆ ಲಿಫ್ಟ್ ಅಗತ್ಯವಿಲ್ಲದಿದ್ದರೂ ಗೋಡೆ ನಿರ್ಮಾಣದ ನಿರ್ಧಾರ ಮತ್ತು ಲಿಫ್ಟ್ ತಾಂತ್ರಿಕ ದೋಷವು ಘಟನೆಗೆ ಕಾರಣವಾಗಿದೆ.ಹೊರಬಂದ ಸಿಬ್ಬಂದಿ,

ಗಾಳಿಯೂ ಇಲ್ಲದ, ಬೆಳಕೂ ಇಲ್ಲದ ಲಿಫ್ಟಲ್ಲಿ ಸಿಲುಕಿದ್ದು ಭಯ, ಆತಂಕಗೊಂಡಿದ್ದೆವು. ರಕ್ಷಣೆ ಬಳಿಕ ನಿಟ್ಟುಸಿರು ಬಿಟ್ಟೆವು ಎಂದು ಹೇಳಿದರು. ಜಿಮ್ಸ್ ಆಸ್ಪತ್ರೆಯ ಅಧಿಕಾರಿಗಳು, ಇಂತಹ ಘಟನೆ ಮರುಕಳಿಸದಂತೆ ಎಲ್ಲ ಲಿಫ್ಟ್‌ಗಳ ತಪಾಸಣೆ ಮತ್ತು ನಿರ್ವಹಣೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದ್ದಾರೆ.ಲಿಫ್ಟ್ ಇತಿಹಾಸ: ಕೆಟ್ಟು ಹೋಗಿರುವ ಲಿಫ್ಟ್ ಇರುವ ಈ ಕಟ್ಟಡವನ್ನು ಈ ಹಿಂದೆ ಜಯದೇವ ಆಸ್ಪತ್ರೆಯವರು ಬಳಸುತ್ತಿದ್ದರು. ಹೀಗಾಗಿ ಜಿಮ್ಸ್ ಆಸ್ಪತ್ರೆಯ ರೋಗಿಗಳು ಹಾಗೂ ಸಿಬ್ಬಂದಿ ಬರಬಾರದು ಎಂಬುದಕ್ಕಾಗಿ

ಲಿಫ್ಟನ್ನು ಮೂರನೇ ಅಂತಸ್ತಿನಲ್ಲಿ ನಿಲ್ಲದಂತೆ ಮಾಡಲು ಗೋಡೆ ಕಟ್ಟಲಾಗಿತ್ತು. ದುರಂತ ಎಂದರೆ, ಅದೇ ಮೂರನೇ ಮಹಡಿಯ ವಾಲ್ ಡೋರ್ ಬಳಿಯೇ ಲಿಫ್ಟ್ ಕೆಟ್ಟು ನಿಂತಿದೆ. ಲಿಫ್ಟ್ ಕೆಟ್ಟು ನಿಂತಾಗ 10 ರಿಂದ 15 ನಿಮಿಷಗಳಲ್ಲಿ ದುರಸ್ತಿ ಆಗಬಹುದು ಎಂದು ಭಾವಿಸಿ ಸಿಬ್ಬಂದಿ ಹಾಗೆಯೇ ಅದರೊಳಗಡೆ

ನಿಂತಿದ್ದಾರೆ. ಆದರೆ, ಲಿಫ್ಟ್ ರಿಪೇರಿ ಆಗುವ ಸುಳಿವೇ ದೊರೆಯದೇ ಇದ್ದಾಗ 9 ಜನ ಸೇರಿ ಲಿಫ್ಟ್ ಬಾಗಿಲನ್ನು ಬಲವಂತದಿಂದ ಎಳೆದು ತೆಗೆದಿದ್ದಾರೆ. ಆದರೆ ಬಾಗಿಲು ತೆರೆಯುತ್ತಿದ್ದಂತೆಯೇ ಎದುರಿಗೆ ದೊಡ್ಡ ಗೋಡೆ ಕಾಣಿಸಿದೆ. ಬಳಿಕ ಎಲ್ಲ ಸಿಬ್ಬಂದಿ ಕಿರಚಾಟ ಆರಂಭಿಸಿದ್ದಾರೆ. ಅದಾದ ಒಂದೂವರೆ ಗಂಟೆ

ಬಳಿಕಡ್ರೀಲ್‌ಮಶಿನ್‌ನಿಂದಗೋಡೆಒಡೆದುಎಲ್ಲರನ್ನೂರಕ್ಷಿಸಲಾಗಿದೆ.ಅಲ್ಲದೇಲಿಫ್ಟಲ್ಲಿತಾಂತ್ರಿಕದೋಷವಾಗಿರುವುದರಿಂದ ತಕ್ಷಣವೇ ಎಚ್ಚತ್ತುಕೊಂಡು ಎಲರಮನ್ನು ಸುರಕ್ಷಿತವಾಗಿ ರಕ್ಷಣೆ ಮಾಡಿದ್ದೇವೆ ಎಂದು ಜಿಮ್ಸ್ ಆಸ್ಪತ್ರೆಯ ಮೆಡಿಕಲ್ ಸುಪರಿಡೆಂಟ್ ಡಾ. ಶಿವಕುಮಾರ್ ಅವರು ತಿಳಿಸಿದ್ದಾರೆ.ಸದ್ಯ ನಗರದಲ್ಲಿ ಒಂದೆಡೆ 41 ಡಿಗ್ರಿ ಸೆಲ್ಸಿಯಸ್ಗೂ ಅಧಿಕ ತಾಪಮಾನವಿದೆ. ಇಂತಹ ಸಂದರ್ಭದಲ್ಲಿ ಲೈಟ್ ಹಾಗೂ ಫ್ಯಾನ್ ಇಲ್ಲದೆ ಲಿಫ್ಟ್ ಒಳಗೆ

ಸಿಲುಕಿದವರ ಪರಿಸ್ಥಿತಿ ಶೋಚನೀಯವಾಗಿತ್ತು. ಇನ್ನಾದರೂ ಜಿಮ್ಸ್ ಅಧಿಕಾರಿಗಳು ಎಚ್ಚೆತ್ತು ಪುನಃ ಇಂತಹ ಘಟನೆಗಳಾಗದಂತೆ ಮುನ್ನೆಚ್ಚರಿಕೆ ವಹಿಸಬೇಕಿದೆ.ಕೆಲಸಗಾರರ ಹೇಳಿಕೆ: ಲಿಫ್ಟ್ ಕೆಟ್ಟು ಒಳಗೆ ಸುಮಾರು 8 ಜನರು ಸಿಕ್ಕಿ ಹಾಕಿಕೊಂಡಿದ್ದು, ಅವರನ್ನು ರಕ್ಷಿಸಲು ವೈದ್ಯಾಧಿಕಾರಿಗಳು ನಮಗೆ ಹೇಳಿದ್ದರಿಂದ ನಾವು ಡ್ರಿಲ್ ಮಶಿನ್ ಮೂಲಕ ಗೋಡೆಯನ್ನು ಕೊರೆದು ಸಿಬ್ಬಂದಿಗಳು ಹೊರಗೆ ಬರುವಂತೆ ನೋಡಿಕೊಂಡೆವು ಎಂದು ಗೋಡೆ ಕೊರೆದ ಕೆಲಸಗಾರ ಮಹೇಶ್ ಮಾಧ್ಯಮದವರಿಗೆ ಹೇಳಿದರು.ಗೋಡೆ ಕೊರೆದು ಲಿಫ್ಟ್‌ನಿಂದ ಹೊರಬಂದ ಸಿಬ್ಬಂದಿಗಳು ಸುಸ್ತಾಗಿದ್ದರು. ಮೈತುಂಬಾ ಬೆವರು ಬರುತ್ತಿತ್ತು. ಅವರು ತೀವ್ರ ಆತಂಕಕ್ಕೆ ಒಳಗಾಗಿದ್ದರು. ಆದಾಗ್ಯೂ, ಯಾರಿಗೂ ಯಾವುದೇ ರೀತಿಯಲ್ಲಿ ತೊಂದರೆ ಆಗದೇ

ಸುರಕ್ಷಿತವಾಗಿದ್ದರು ಎಂದು ಅವರು ಹೇಳಿದರು.

## ಮಹಿಳೆಯರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲಿ




ಮಲ್ಲಮ್ಮ ನುಡಿ ವಾರ್ತೆ

ಬೀದರ. ಮೇ. 13 : ಮಹಿಳೆಯರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಬೇಕು ಎಂದು ಭಾಲ್ಕಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಚಾರ್ಯೆಡಾ.ಹೇಮಾವತಿ ಪಾಟೀಲ ಸಲಹೆ ಮಾಡಿದರು. ನಗರದ ಓಡವಾಡದಲ್ಲಿ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ವಿಶೇಷ ಶಿಬಿರದ ಪ್ರಯುಕ್ತ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಶಿಸ್ತು,ದೃಢ ಸಂಕಲ್ಪ,ಸಮರ್ಪಣಾಭಾವಹಾಗೂ ಕಠಿಣಪರಿಶ್ರಮದಿಂದಜೀವನದಲ್ಲಿ ಯಶಸ್ಸು ಗಳಿಸಲು ಸಾಧ್ಯವಿದೆ ಎಂದು ತಿಳಿಸಿದರು. ಬ್ರಿಮ್ಸ್‌ನ ಒಬಿಜಿ ವಿಭಾಗದ ಡಾ. ಸಂಗೀತಾ ಹಲಮಂಡಗೆ ಮಾತನಾಡಿ, ದೇಹ ಸದೃಢವಾಗಿದ್ದರೆ ಮನಸ್ಸು ಆರೋಗ್ಯಕರವಾಗಿರುತ್ತದೆ ಎಂದು ಹೇಳಿದರು. ಮಹಿಳೆಯರು ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಸ್ವಚ್ಛತೆಗೆ ಪ್ರಾಮುಖ್ಯತೆ ಕೊಡಬೇಕು ಎಂದು ತಿಳಿಸಿದರು. ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥೆ ವಿಜಯಲಕ್ಷ್ಮಿ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿಗಳಾದ ಡಾ. ವಿದ್ಯಾ ಪಾಟೀಲ, ಶ್ರೀನಿವಾಸ್ ರೆಡ್ಡಿ, ಕನ್ನಡ ಪ್ರಾಧ್ಯಾಪಕಿ ವಿಜಯಕುಮಾರಿ ಉಪಸ್ಥಿತರಿದ್ದರು.

## ಕಾಮ್ರೆಡ್ ವಿಕ್ರಮ್‌ರಾವ್ ಅವರಿಗೆ ಕೆಯುಡಬ್ಲ್ಯೂಜೆ ನುಡಿನಮನ 14ಕ್ಕೆ

ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು:ಭಾರತೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟಕ್ಕೆ ಸುಧೀರ್ಘ ಅವಧಿಗೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಹಿರಿಯ ಪತ್ರಕರ್ತರು ಮತ್ತು ಕ್ರಿಯಾಶೀಲ ಸಂಘಟಕರಾಗಿದ್ದ ಕೆ.ವಿಕ್ರಮರಾವ್ ಅವರಿಗೆ ನುಡಿನಮನ ಕಾರ್ಯಕ್ರಮವನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದಿಂದ ಏರ್ಪಡಿಸಲಾಗಿದೆ.ದಿನಾಂಕ 14-05-2025 ರಂದು ಬೆಳಿಗ್ಗೆ 11-30 ಕ್ಕೆ ಕೆಜಿ ರಸ್ತೆ ಕಂದಾಯ ಭವನದ 3ನೇ ಮಹಡಿ ಕೆಯುಡಬ್ಲ್ಯೂಜೆ ಸಭಾಂಗಣದಲ್ಲಿ ನಡೆಯಲಿರುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೆಯುಡಬ್ಲ್ಯೂಜೆ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರು ವಹಿಸುವರು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜ್ಞಾನಸುಧಾ ವಿದ್ಯಾರ್ಥಿನಿ ಶ್ರೇಯಾ ಶ್ರೀನಿವಾಸ ಜಿಲ್ಲೆಗೆ ಟಾಪರ್

ಬೀದರ:ಮೇ.13:ಪ್ರಸಕ್ತಸಾಲಿನ ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ)ಯ 10ನೇ ತರಗತಿ ಪರೀಕ್ಷೆಯಲ್ಲಿ ಬೀದರ್ ಜಿಲ್ಲೆಯ ಪ್ರತಿಷ್ಠಿತ ಶಾಲೆಯಾದ ಜ್ಞಾನಸುಧಾ ವಿದ್ಯಾಲಯ ನೂರಕ್ಕೆನೂರರಷ್ಟು ಫಲಿತಾಂಶ ಪಡೆದು ಅಮೋಘ ಸಾಧನೆ ಮಾಡಿದೆ.

ವಿದ್ಯಾಲಯದ ವಿದ್ಯಾರ್ಥಿನಿಯಾದ ಶ್ರೇಯಾ ಶ್ರೀನಿವಾಸ ಅವರು ಶೇ 97 ರಷ್ಟು ಫಲಿತಾಂಶ ಗಳಿಸುವ ಮೂಲಕ ಜಿಲ್ಲೆಯಲ್ಲೇ ಗರಿಷ್ಠ ಅಂಕ ಪಡೆದವರಲ್ಲಿ ಒಬ್ಬರಾಗಿದ್ದಾರೆ. ಇವರು ವಿದ್ಯಾಲಯಕ್ಕೆ ಅಷ್ಟೇ ಅಲ್ಲ ಜಿಲ್ಲೆಗೆ ಟಾಪರ್ ಆಗಿ ಹೊರಹೊಮ್ಮಿದ್ದಾರೆ.

ಫೆಬ್ರುವರಿ ಮತ್ತು ಮಾರ್ಚನಲ್ಲಿ ನಡೆದ ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ)ಯ 2024 -25ನೇ ಶೈಕ್ಷಣಿಕ ಸಾಲಿನ 10ನೇ ತರಗತಿ ಪರೀಕ್ಷೆಗೆ ಜ್ಞಾನಸುಧಾ ವಿದ್ಯಾಲಯದ ಒಟ್ಟು 209 ವಿದ್ಯಾರ್ಥಿಗಳು ಹಾಜರಾಗಿದ್ದು, ಇವರಲ್ಲಿ 106 ವಿದ್ಯಾರ್ಥಿಗಳು ಅಗ್ರಶ್ರೇಣಿಯಲ್ಲಿ ಉತ್ತೀರ್ಣರಾಗಿ ಗಮನಾರ್ಹ ಸಾಧನೆ ಮಾಡಿದ್ದಾರೆ. 86 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಹಾಗೂ 17 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾರೆ.

ವಿದ್ಯಾಲಯದ ವಿದ್ಯಾರ್ಥಿನಿ ಶ್ರೇಯಾ ಶ್ರೀನಿವಾಸ ಅವರು ಸಮಾಜವಿಜ್ಞಾನದಲ್ಲಿ 100ಕ್ಕೆ100 ಅಂಕ ಪಡೆದರೆ, ವಿಜ್ಞಾನದಲ್ಲಿ 98, ಗಣಿತದಲ್ಲಿ 97 ಅಂಕ ಪಡೆದು ಜಿಲ್ಲೆಗೆ ಪ್ರಥಮ ಸ್ಥಾನ ಬಂದು ಜಿಲ್ಲೆಯಲ್ಲಿ ವಿದ್ಯಾಲಯದ ಕೀರ್ತಿ ಇನ್ನಷ್ಟು ಇಮ್ಮಡಿಗೊಳಿಸಿದ್ದಾರೆ. ಪ್ರಿಯಾ ಜಗದೀಶ್ ಅವರು ವಿಜ್ಞಾನ ವಿಷಯದಲ್ಲಿ ಪೂರ್ಣಾಂಕ ಗಳಿಸಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ.

ವಿದ್ಯಾಲಯದ 26 ವಿದ್ಯಾರ್ಥಿಗಳು ಶೇ. 90ಕ್ಕೂ ಅಧಿಕ ಫಲಿತಾಂಶ ಪಡೆದರೆ, 22 ವಿದ್ಯಾರ್ಥಿಗಳು ಶೇ. 85 ರಿಂದ ಶೇ 89 ರ ವರೆಗೆ, 58 ವಿದ್ಯಾರ್ಥಿಗಳು ಶೇ. 75 ರಿಂದ ಶೇ. 84 ರಷ್ಟು, 86 ವಿದ್ಯಾರ್ಥಿಗಳು ಶೇ 60 ರಿಂದ ಶೇ 74 ರಷ್ಟು ಫಲಿತಾಂಶ ಗಳಿಸಿ ಎಲ್ಲರ ಗಮನಸೆಳೆದಿದ್ದಾರೆ.

ವಿದ್ಯಾರ್ಥಿಗಳಾದ ಶ್ರೇಯಾ ಶ್ರೀನಿವಾಸ್ (ಶೇ 97), ಪ್ರಿಯಾ ಜಗದೀಶ್ ಬಿ ಅಮಶೆಟ್ಟಿ (ಶೇ 94.8),ತೇಜಸ್ವಿನಿಶಾಂತಕುಮಾರ್ (ಶೇ 94.4), ಆಯುಷ್ ಪುಟ್ಟಪ್ಪಬಿರಾದಾರ (ಶೇ 94), ಅಕ್ಷತ್ ಅಜಯ್ ಕುಮಾರ್ (ಶೇ 93.6), ಮಂದಾಕಿನಿ ಬಾಬಶೆಟ್ಟಿ ಮಾಶೆಟ್ಟಿ (ಶೇ 93.6),ಮೊಹಮ್ಮದ್ ಅಬ್ದುಲ್ ರಕೀಬ್ ಮೊಹಮ್ಮದ್ ಅಬ್ದುಲ್ ಬಸೀರ್ (ಶೇ 93.6),ಶ್ರೇಯಶ್ ರಾಜ್‌ಕುಮಾರ್ (ಶೇ 93.6), ಸಿಂಚನಾ ಉಮೇಶ್ (ಶೇ 93.6), ವಿನಯ್ ಶಾಂತಕುಮಾರ್ ಪಾಟೀಲ್ (ಶೇ 93.6), ಆರ್ಯನ್ ಪಾಟೀಲ್ ಶಿವರಾಜ್ ಪಾಟೀಲ್ (ಶೇ 92.8), ಪ್ರಜ್ವಲ್ ಜೀತಪ್ಪ (ಶೇ 92.6), ಆಶಿಶ್ ದಿಗಂಬರ್ ಪೂಜಾರಿ (ಶೇ 92), ಶೃಷ್ಟಿ



ಅಶೋಕ್ ಫತೇಪುರ್ (ಶೇ 92), ಅಂಕಿತ್ ಉಮೇಶ್ (ಶೇ 91.8), ನಿಶಾ ಸಂತೋಷ್ ಕುಮಾರ್ (ಶೇ 91.8), ನರೇಂದ್ರದತ್ತ ಜೋಶಿ ಸದಾನಂದ ಜೋಶಿ (ಶೇ 91.8),

ಕೃಷ್ಣ ನಾಗರಾಜ್ ಡೊನ್ನೆ (ಶೇ 91.6), ವಿಶಾಲ್ ಎ ಅರ್ಜುನ್ (ಶೇ 91.6), ಹರ್ಷಿತ್ ಶರಣಪ್ಪ (ಶೇ 91.4),

ಶ್ರೀಜಲ್ ಶಿವಶಂಕರ್ ಬಾಪ್ಗಿ (ಶೇ 91), ವಿನಾಯಕ ವೀರಶೆಟ್ಟಿ (ಶೇ 90.8), ಪ್ರತೀಕ್ಷಾ ಮಲ್ಲಿಕಾರ್ಜುನ್ (ಶೇ 90.6), ಗಣೇಶ ರಾಮಚಂದ್ರ ಬಿರಾದಾರ (ಶೇ 90.4), ಶ್ರೇಯಾ ಜಗದೀಶ್ ಖೂಬಾ (ಶೇ 90.4), ಅಮೃತಾಂಶು ಆದಿತ್ಯ ಪ್ರಸಾದ್ ನಂದಾ (ಶೇ 90.2), ರಾಜೇಶ್ವರಿ ಶಾಂತಕುಮಾರ್ (ಶೇ 89.8), ಸಾಯಿಕಿರಣ್ ದಯಾನಂದ್ (ಶೇ 89.8), ಚನ್ನಬಸವ ನಾಗೇಂದ್ರ (ಶೇ 89), ರಿಯಾ ನಿಟ್ಟೂರ್ಕರ್ ಸಂದೀಪ್ ನಿಟ್ಟೂರ್ಕರ್ (ಶೇ 89), ತಾಂಬೋಲೆ ಕೃಷ್ಣ ನರಸಿಂಗರಾವ್ (ಶೇ 88.2), ಕೃಷ್ಣಪ್ರಸಾದ್ ರೆಡ್ಡಿ ಭೀಮ್ ರೆಡ್ಡಿ (ಶೇ 87.8), ಶ್ರದ್ಧಾ ಶ್ರೀನಿವಾಸ ಬಿರಾದಾರ್ (ಶೇ 87.8), ಭೂಮಿಕಾ ಅಪ್ಪರಾವ್ ದೇಶಮುಖ (ಶೇ 87.6), ಭೂಮಿಕಾ ರಾಮಪ್ಪ ಸಾವಳಗಿ (ಶೇ 87.6), ಸಾಯಿನಾಥ್ ಸಂತೋಷ್ (ಶೇ 87.6), ಅಮೂಲ್ಯ ಕವಿರಾಜ್ (ಶೇ 87.4), ಅಬೀಲಾ ನಾಮೀನ್ ಮೊಹಮ್ಮದ್ ಅಮೀನುದ್ದೀನ್ ಖುರೇಷಿ (ಶೇ 87), ಅಥರ್ವ ವಿಠಲ ಕಪ್ಪೆಕೆರೆ (ಶೇ 87), ವೈಭವ್ ಜ್ಞಾನೇಶ್ವರ (ಶೇ 87), ಕಾರ್ತಿಕ್ ಸಂಗಪ್ಪ (ಶೇ 86.8), ಪೂಜಾ ದತ್ತಾತ್ರಿ (ಶೇ 86.8), ಸ್ಪಂದನಾ ಸಂಜೀವ್ ರಾಥೋಡ್ (ಶೇ 86.8), ಅವನಿ ಮಹೇಶ್ ಜೋಜನ್ (ಶೇ 86), ಪ್ರೀತಮ್ ಮಿಲಿಂದ್ ಕುಮಾರ್ (ಶೇ 85.8), ಅಭಿಷೇಕ್ ರಾಜ್‌ಕುಮಾರ್ (ಶೇ 85.6), ಅಫ್ರೀನ್ ಫಾತಿಮಾ ಇಸ್ಮೇಲ್ (ಶೇ 85.4), ಪ್ರಜ್ವಲ್ ಅನಿಲ್ ಕುಮಾರ್ ನಿನ್ನೇಕರ್ (ಶೇ 85 ), ಗಂಗೋತ್ರಿ ಉಮೇಶ್ (ಶೇ 84), ಖಾಜಾ ದಾನಿಶ್ ಸುಭಾನ್ ಕೆ ಕಲಿಮುಲ್ಲಾ (ಶೇ 83.8), ಜಗದೇಶ್ವರಿ ನಾಗಶೆಟ್ಟಿ (ಶೇ 83.6), ಸಮರ್ಥ್ ಶಿವಕುಮಾರ್ (ಶೇ 83.6), ಖುಷಿ ಮಹೇಶ ಗೌಡ ಪಾಟೀಲ್ (ಶೇ 83.4), ಶಶಾಂಕ್ ಸಂತೋಷ್ ಪಾಟೀಲ್ (ಶೇ 83.4), ಶ್ರೇಯಾ ವೈ ಯದು (ಶೇ 83.4), ರಿಷಿತ್ ರೆಡ್ಡಿ ಬಾಬುರೆಡ್ಡಿ (ಶೇ 82.8), ಸಾಕ್ಷಿ ಶಿವಾನಂದ್ (ಶೇ 82.6), ವೈಷ್ಣವಿ ರಾಮಚಂದ್ರ (ಶೇ 82.6), ಶಿವಶಂಕರ್ ಶಿವಶರಣಪ್ಪ (ಶೇ 82.2), ಶ್ರೇಯಸ್ ಗಾಡ್ಗೆ ಸತೀಶ್ (ಶೇ 82), ದಿವ್ಯಾ ದಿಲೀಪ್‌ಕುಮಾರ್ (ಶೇ 81.8), ಗೋವಿಂದ ಬಾಲಾಜಿ (ಶೇ 81.8), ಹರ್ಷ ಅಶೋಕ್ (ಶೇ 81.8), ಗಣೇಶ್ ಶಿವಕುಮಾರ ಧನಶೆಟ್ಟಿ (ಶೇ 80.8), ಗಂಗೋತ್ರಿ ಸಿದ್ರಾಮ್ (ಶೇ 80.8), ಸಮೀಕ್ಷಾ ನಾಗರಾಜು ಯೆರ್ರಾ (ಶೇ 80.8), ಉಜ್ವಲ್ ರೆಡ್ಡಿ ಬಸಪ್ಪ ಕೋರಿ (ಶೇ 80.8), ಪ್ರಗತಿ ಪ್ರೇಮಕಾಂತ್ (ಶೇ 80.6), ಗಣೇಶ ಮಹೇಶ್ ಬುರಾಂಡೆ (ಶೇ 80.4), ಹರ್ಷಿತ್ ಸಚಿನ್ ಆರ್ಯ ಸಚಿನ್ ಶತದಯ ಆರ್ಯ (ಶೇ 80.2), ಶಶಾಂಕ್ ಜಿ ಪಾಟೀಲ್ ಗುಂಡಪ್ಪ ಪಾಟೀಲ್ (ಶೇ 80.2), ವಚನಶ್ರೀ ವಿವೇಕಾನಂದ ಧನ್ನೂರು (ಶೇ 80.2), ಅಕ್ಷಿತಾ ಸುನಿಲ್ (ಶೇ 80), ವಚನಶ್ರೀ ಗಣಪತಿ (ಶೇ 80). ರಷ್ಟು ಫಲಿತಾಂಶ ಗಳಿಸಿದ್ದಾರೆ.

ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ)ಯ ಪ್ರಸಕ್ತ ಸಾಲಿನ 10ನೇ ತರಗತಿ ಪರೀಕ್ಷೆಯಲ್ಲಿ ನಮ್ಮ ವಿದ್ಯಾಲಯ ಅತ್ಯುತ್ತಮ ಫಲಿತಾಂಶ ಪಡೆದಿದೆ. ವಿದ್ಯಾಲಯದ ವಿದ್ಯಾರ್ಥಿಗಳ ಉತ್ತಮ ಸಾಧನೆಗೆ ಜ್ಞಾನಸುಧಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ಪೂರ್ಣಿಮಾ ಜಿ. ಜ್ಞಾನಸುಧಾ ವಿದ್ಯಾಲಯದ ನಿರ್ದೇಶಕರಾದ ಡಾ. ಮುನೇಶ್ವರ ಲಾಖಾ, ಜ್ಞಾನಸುಧಾ ವಿದ್ಯಾಲಯದ ಪ್ರಾಚಾರ್ಯರಾದ ಸುನೀತಾ ಸ್ವಾಮಿ,ಉಪಪ್ರಾಚಾರ್ಯರಾದ ಕಲ್ಪನಾ ಮೋದಿ ಹಾಗೂ ಎಲ್ಲ ಶಿಕ್ಷಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

## ಗೋರುಚ ಜಾನಪದ ದತ್ತಿನಿಧಿ ಪ್ರಶಸ್ತಿಗೆ ಡಾ. ಜಗನ್ನಾಥ ಹೆಬ್ಬಾಳೆ ಆಯ್ಕೆ

## ಮೇ. 18 ರಂದು ಹಾಸನದಲ್ಲಿ ಪ್ರಶಸ್ತಿ ಪ್ರದಾನ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಮೇ. 13 : ಡಾ. ಜಗನ್ನಾಥ ಹೆಬ್ಬಾಳೆಯವರ ಜೀವಮಾನದ ಸಾಧನೆಗಾಗಿ ಗೋರುಚ ದತ್ತಿನಿಧಿ ಪ್ರಶಸ್ತಿ ಒಲಿದು ಬಂದಿದೆ. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮೈಸೂರು ಹಾಗೂ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಹಾಸನ ಇವರ ಸಹಯೋಗದಲ್ಲಿ ಹಾಸನದ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಮೇ 18 ರಂದು ಭಾನುವಾರ ನಡೆಯಲಿರುವ ಸಮಾರಂಭದಲ್ಲಿ ಗೋರುಚ ಜಾನಪದ ದತ್ತಿನಿಧಿ ಪ್ರಶಸ್ತಿ ನೀಡಲಾಗುತ್ತಿದೆ. ಪ್ರಶಸ್ತಿಯು ರೂ. 25 ಸಾವಿರ ನಗದು ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದೆ.

ಡಾ. ಜಗನ್ನಾಥ ಹೆಬ್ಬಾಳೆಯವರು ಕನ್ನಡ ಮತ್ತು ಜಾನಪದ ಸ್ನಾತಕೋತ್ತರ ಪದವೀಧರರು. 1988 ರಲ್ಲಿ ಕಲಬುರಗಿ ವಿವಿಯಿಂದ ಪ್ರಥಮ ರ್‍ಯಾಂಕ್‌ನಲ್ಲಿ ಪಾಸಾಗಿದ್ದಾರೆ. ಚಿನ್ನದ ಪದಕ ಮುಡಿಗೇರಿಸಿಕೊಂಡಿದ್ದಾರೆ. ಸುಮಾರು 77 ಗ್ರಂಥಗಳನ್ನು



ರಚಿಸಿರುವ ಇವರು ಹಲವಾರು ಸಂಘ-ಸಂಸ್ಥೆಗಳಿಂದ ನೂರಾರು ಪ್ರಶಸ್ತಿಗಳನ್ನು ಗಿಟ್ಟಿಸಿಕೊಂಡಿದ್ದಾರೆ. 1996ರಲ್ಲಿ ಪಿಎಚ್‌ಡಿ ಪದವಿ ಪಡೆದುಕೊಂಡು, ಬೀದರ ಜಿಲ್ಲಾ ಕಸಾಪ ಅಧ್ಯಕ್ಷರಾಗಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಜಾಗೃತಿ ಸಮಿತಿ ಸದಸ್ಯರಾಗಿ, ದೇಶದ ವಿವಿಧ ವಿವಿಗಳ ಕನ್ನಡ ಅಧ್ಯಯನ ಮಂಡಳಿಗಳ ಅಧ್ಯಕ್ಷರಾಗಿ, ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.ಜಾನಪದಸಾಹಿತ್ಯದಲ್ಲಿ ಕೃಷಿ ಮಾಡಿರುವ ಇವರು ಕರ್ನಾಟಕ ಕಾಲೇಜಿನ ಸಹ ಪ್ರಾಧ್ಯಾಪಕರಾಗಿ,ಪ್ರಾಚಾರ್ಯರಾಗಿ, ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಪ್ರಾದೇಶಿಕ ಅಧ್ಯಯನ ಕೇಂದ್ರದ ಸಂಯೋಜನಾಧಿಕಾರಿಯಾಗಿ, ಬೀದರನ ಕಲಾ ನಿಕಾಯದ ಡೀನ್ ಆಗಿ ಸಾರ್ಥಕ ಸೇವೆ ಸಲ್ಲಿಸಿದ್ದಾರೆ. ಸುಮಾರು ನಾಲ್ಕು ದಶಕಗಳ ಕಾಲ ಹೆಬ್ಬಾಳೆಯವರು ಸಲ್ಲಿಸಿದ ಸೇವೆಯನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗುತ್ತಿದೆ. ಇವರ ಈ ಆಯ್ಕೆಗೆ ಜಿಲ್ಲಾ ಕರ್ನಾಟಕ ಜಾನಪದ ಪರಿಷತ್ತು,ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಸಂಘ, ಕರ್ನಾಟಕ ಸಾಹಿತ್ಯ ಸಂಘ ಹಾಗೂ ರಾಷ್ಟ್ರೀಯ ಜನಪದ ಬುಡಕಟ್ಟು ಕಲಾ ಪರಿಷತ್ತಿನ ಪದಾಧಿಕಾರಿಗಳು ಹರ್ಷ ವ್ಯಕ್ತಪಡಿಸಿದ್ದಾರೆ.

## ಕಾರಾಗೃಹದ ಬಂದಿ ನಿವಾಸಿಗಳು ಹಾಗೂ ಅಧಿಕಾರಿ / ಸಿಬ್ಬಂದಿಗಳಿಗೆ ಕನ್ನಡಕ ವಿತರಣೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಮೇ.13:ಕಾರಾಗೃಹದ ಬಂದಿ ನಿವಾಸಿಗಳು ಹಾಗೂ ಕಾರಾಗೃಹದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳು ಸೇರಿದಂತೆ ಒಟ್ಟು 200 ಜನರಿಗೆ ಮಂಗಳವಾರ ಕಲಬುರಗಿ ಕೇಂದ್ರ ಕಾರಾಗೃಹದಲ್ಲಿ ಉಚಿತ ಕನ್ನಡಕ ವಿತರಿಸಲಾಯಿತು.

ಕಲಬುರಗಿ ಕಡಗಂಚಿಯ ಕಾರ್ಮೆಲ್ ಜ್ಯೋತಿ ಪಬ್ಲಿಕ್ ಚಾರಿಟೇಬಲ್ ಟ್ರಸ್ಟ್(ರಿ) ಶಾಖೆ-ಯ ಕಾರ್ಯದರ್ಶಿ ಡಾ॥ ಫಾದರ್ ವಿಲಿಯಂ ಮಿರಾಂದ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ನಮ್ಮ ಪಂಚೇಂದ್ರಿಯಗಳಲ್ಲಿ ಕಣ್ಣು ಕೂಡ ಒಂದು. ಇದನ್ನು



ಸರಿಯಾದ ಸುಸ್ಥಿತಿಯಲ್ಲಿಡಬೇಕು. ಸರಿಯಾದ ನಿಯಮಿತವಾಗಿ ತಪಾಸಣೆಗೆ ಒಳಪಡಿಸಬೇಕು ಇದರ ರಕ್ಷಣೆ ಮಾಡಬೇಕು ಎಂದರು. ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಸಂಸ್ಥೆ ಮುಖ್ಯಸ್ಥೆ ಡಾ॥ ಅನಿತಾ ಆರ್. ಮಾತನಾಡಿ, ಈ ಮುಂಚೆ ನೇತ್ರ ತಪಾಸಣೆ ಮಾಡಲಾಗಿದ್ದು, ಅದರನ್ವಯ ಕನ್ನಡಕ ಅವಶ್ಯಕತೆ ಇದ್ದವರಿಗೆ ಉಚಿತವಾಗಿ ಕನ್ನಡಕವನ್ನು ನೀಡಲಾಗಿದೆ. ತಾವು ಈ ಕನ್ನಡವನ್ನು ನಿಯಮಿತವಾಗಿ ಧರಿಸಿ ತಮ್ಮ ಕಣ್ಣಿನ ರಕ್ಷಣೆಯನ್ನು ಮಾಡಲು ತಿಳಿಸಿದರು ಹಾಗೂ ಉಚಿತವಾಗಿ ಕನ್ನಡಕವನ್ನು ವಿತರಿಸಿದ್ದಕ್ಕಾಗಿ ಎನ್.ಜಿ.ಓ. ಇವರಿಗೆ ಅಭಿನಂದನೆ ಸಲ್ಲಿಸಿದರು.

ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧೀಕ್ಷಕ ಶ್ರೀ ಎಂ.ಹೆಚ್. ಆಶೇಖಾನ್, ಫಾದರ್ ದೀಪಕ್ ಥಾಮಸ್, ಅಲ್‌ವಿನ್, ಎಲ್‌ಸ್ಟನ್, ಸ್ಟನ್ ಜಾರ್ಜ್, ಲೈಕ್ರಸ್ಟಹಿಲರಿ, ವಿಲ್ಸನ್, ರಿಕ್ಸನ್, ಸಂಸ್ಥೆಯ ಸಹಾಯಕ ಆಡಳಿತಾಧಿಕಾರಿ ಭೀಮಾಶಂಕರ್ ಡಾಂಗೆ, ಸಂಸ್ಥೆಯ ಜೈಲರ್‌ಗಳಾದ ಸಾಗರ ಪಾಟೀಲ,ಹಾಗೂ ಕಾರಾಗೃಹದ ಲಿಪಿಕ/ಕಾರ್ಯನಿರ್ವಾಹಕ ಅಧಿಕಾರಿ/ಸಿಬ್ಬಂದಿಗಳು ಭಾಗವಹಿಸಿದ್ದರು. ಈ ಸಂಸ್ಥೆಯ ಶಿಕ್ಷಕರಾದ ನಾಗರಾಜ ಮುಲಗೆ ಕಾರ್ಯಕ್ರಮ ನಿರೂಪಿಸಿದರು.

# ಸಿಕಂದರಾಬಾದ್ ವಾರಾಣಸಿ ದಾನಾಪುರ ರೈಲು ಬೀದರ್ ಗೆ ವಿಸ್ತರಿಸಿ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಮೇ. 13 : ಸಿಕಂದರಾಬಾದ್–ವಾರಾಣಸಿ–ದಾನಾಪುರ ಎಕ್ಸ್‌ಪ್ರೆಸ್ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ರೈಲನ್ನು ಬೀದರ್ ವರೆಗೆ ವಿಸ್ತರಿಸಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾ ಘಟಕದ ಅಧ್ಯಕ್ಷಸೋಮನಾಥಮುಧೋಳ ಆಗ್ರಹಿಸಿದ್ದಾರೆ.



ಸದ್ಯಸಿಕಂದರಾಬಾದ್‌ನಿಂದ ನಾಗಪುರ, ಪ್ರಯಾಗರಾಜ್ ಮಾರ್ಗವಾಗಿ ವಾರಾಣಸಿಗೆ ತೆರಳಲು (ರೈಲು ಸಂಖ್ಯೆ 12791) ಹಾಗೂ ಅಲ್ಲಿಂದ ಸಿಕಂದರಾಬಾದ್‌ಗೆ ಮರಳಲು ಪ್ರತ್ಯೇಕ ರೈಲುಗಳಿವೆ. ಸಿಕಂದರಾಬಾದನಿಂದ ಬೆಳಿಗ್ಗೆ 9:25ಕ್ಕೆ ಹೊರಡುವ ರೈಲು ಮರುದಿನ ಮಧ್ಯಾಹ್ನ 3:50ಕ್ಕೆ ವಾರಾಣಸಿಗೆ ಹಾಗೂ ಅಲ್ಲಿಂದ ಸಂಜೆ 5ಕ್ಕೆ ಬಿಡುವ ರೈಲು ಮರುದಿನ ರಾತ್ರಿ 10ಕ್ಕೆ ಸಿಕಂದರಾಬಾದ್‌ಗೆ ತಲುಪುತ್ತದೆ ಎಂದು ತಿಳಿಸಿದ್ದಾರೆ.

ಸಿಂದರಾಬಾದ್–ದಾನಾಪುರ ರೈಲಿನಲ್ಲಿ ಬೀದರ್, ಕಲಬುರಗಿ, ಯಾದಗಿರಿ ಜಿಲ್ಲೆಯ ಪ್ರಯಾಣಿಕರು ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಾರೆ. ಅವರಿಗೆ ಸಿಕಂದರಾಬಾದ್‌ಗೆ ತೆರಳಿ ಅಲ್ಲಿಂದ ವಾರಾಣಸಿಗೆ ಹೋಗಲು ತೊಂದರೆಯಾಗುತ್ತಿದೆ ಎಂದು ಹೇಳಿದ್ದಾರೆ.

ರೈಲು ಬೀದರ್ ವರೆಗೆ ವಿಸ್ತರಿಸಿದರೆ ಈ ಮೂರೂ ಜಿಲ್ಲೆಗಳ ವಾರಾಣಸಿ, ಪ್ರಯಾಗರಾಜ್, ಅಯೋದ–್ಯೆಗೆ ಹೋಗಿ ಬರುವವರಿಗೆ ಅನುಕೂಲವಾಗಲಿದೆ ಎಂದು ಹೇಳಿದ್ದಾರೆ.

ಪ್ರಯಾಣಿಕರ ಹಿತದೃಷ್ಟಿಯಿಂದ ರೈಲ್ವೆ ಇಲಾಖೆ ರೈಲು ವಿಸ್ತರಣೆಗೆ ಕ್ರಮ ಕೈಗೊಳ್ಳಬೇಕು ಎಂದು ಬೇಡಿಕೆ ಮಂಡಿಸಿದ್ದಾರೆ.

# ಶುಶ್ರೂಷಕರ ವೈದ್ಯಕೀಯ ಸೇವೆ ಶ್ರೇಷ್ಠ




ಮಲ್ಲಮ್ಮ ನುಡಿ ವಾರ್ತೆ

ಬೀದರ. ಮೇ. 13 : ಶುಶ್ರೂಷಕರ ವೈದ್ಯಕೀಯ ಸೇವೆ ಶ್ರೇಷ್ಠವಾದದ್ದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ಅವರ ಪತ್ನಿ ಶೈನಿ ಗುಂಟಿ ಹೇಳಿದರು.

ನಗರದ ಸರ್ಕಾರಿ ನರ್ಸಿಂಗ್ ಕಾಲೇಜಿನಲ್ಲಿ ಸೋಮವಾರ ನಡೆದ ಅಂತರರಾಷ್ಟ್ರೀಯ ಶುಶ್ರೂಷಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ರೋಗಿ ಆಸ್ಪತ್ರೆಗೆ ಬರುವುದರಿಂದ ಹಿಡಿದು ಗುಣಮುಖನಾಗಿ ಬಿಡುಗಡೆ ಹೊಂದುವವರೆಗೂ ಶುಶ್ರೂಷಕರು ಮಹತ್ವದ ಪಾತ್ರ ವಹಿಸುತ್ತಾರೆ ಎಂದು ತಿಳಿಸಿದರು.

ನರ್ಸಿಂಗ್ ಶಾಲೆ ವಿದ್ಯಾರ್ಥಿಗಳು ಭವಿಷ್ಯದಲ್ಲಿ ಮಾನವೀಯ ಸೇವೆ ಮೂಲಕ ಉತ್ತಮ ಶುಶ್ರೂಷಕರಾಗಲು ಪ್ರಯತ್ನಿಸಬೇಕು ಎಂದು ಹೇಳಿದರು.

ಫ್ಲಾರೆನ್ಸ್ ನೈಟಿಂಗೇಲ್ ಅವರ ಜನ್ಮದಿನವನ್ನು ಅಂತರರಾಷ್ಟ್ರೀಯ ಶುಶ್ರೂಷಕರ ದಿನವನ್ನಾಗಿ ಆಚರಿಸಲಾಗುತ್ತದೆ ಎಂದು ಅಧ್ಯಕ್ಷತೆ ವಹಿಸಿದ್ದ ಸರ್ಕಾರಿ ನರ್ಸಿಂಗ್ ಸ್ಕೂಲ್ ಹಾಗೂ ಶುಶ್ರೂಷಾ ಕಾಲೇಜು ಪ್ರಾಚಾರ್ಯ ರಾಜಕುಮಾರ ಮಾಳಗೆ ಹೇಳಿದರು.

ಇಟಲಿಯ ಶ್ರೀಮಂತ ಕುಟುಂಬದಲ್ಲಿ ಜನಿಸಿದ ಫ್ಲಾರೆನ್ಸ್ ನೈಟಿಂಗೇಲ್ ಉನ್ನತ ಹುದ್ದೆಗೆ ಹೋಗಬಹುದಿತ್ತು. ಆದರೆ, ಬಡ ಜನರ ವೈದ್ಯಕೀಯ ಸೇವೆಗೆ ನೆರವಾಗಲು ಶುಶ್ರೂಷಕ ವೃತ್ತಿಯನ್ನು ಆಯ್ಕೆ ಮಾಡಿಕೊಂಡರು. 1854 ರ ಮಹಾ ಯುದ್ಧದ ಸಂದರ್ಭದಲ್ಲಿ ಶುಶ್ರೂಷಕರ ತಂಡದೊಂದಿಗೆ ಗಾಯಾಳು ಸೈನಿಕರ ಶುಶ್ರೂಷೆ ಮಾಡಿದರು ಎಂದು ತಿಳಿಸಿದರು.

ಸೇನಾ ಆಸ್ಪತ್ರೆ ಹಾಗೂ ಇತರ ಆಸ್ಪತ್ರೆಗಳ ಸುಧಾರಣೆಗೆ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಿ, ಜಾರಿಗೆ ತರಲು ಪ್ರಯತ್ನಿಸಿದರು. ಇವರ ಸುಧಾರಣಾ ಕ್ರಮಗಳನ್ನು ಜಗತ್ತಿನ ಎಲ್ಲ ಆಸ್ಪತ್ರೆಗಳು ಇಂದಿಗೂ ಅನುಸರಿಸುತ್ತಿವೆ. ಶುಶ್ರೂಷಕ ವೃತ್ತಿಯನ್ನು ಆಯ್ಕೆ ಮಾಡಿಕೊಂಡವರು ನೈಟಿಂಗೇಲ್ ಫ್ಲಾರೆನ್ಸ್ ಅವರನ್ನು ಮಾದರಿ ಆಗಿಸಿಕೊಳ್ಳಬೇಕು ಎಂದು ಹೇಳಿದರು.

ಬ್ರಿಮ್ಸ್ ನಿರ್ದೇಶಕ ಡಾ. ಶಿವಕುಮಾರ ಶೆಟಕಾರ್, ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಸೋಮಶೇಖರ ಬಿರಾದಾರ, ಬ್ರಿಮ್ಸ್ ಮುಖ್ಯ ಆಡಳಿತಾಧಿಕಾರಿ ಸುರೇಖಾ, ಜಿಲ್ಲಾ ತರಬೇತಿ ಕೇಂದ್ರದ ಪ್ರಾಚಾರ್ಯ ಡಾ. ಸಂಜೀವಕುಮಾರ ಪಾಟೀಲ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ಮಹಮ್ಮದ್ ಅಹಮ್ಮದೊದ್ದೀನ್, ನೌಕರರ ಸಂಘದ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಪ್ರಭುಲಿಂಗ ತೂಗಾವೆ, ಖಜಾಂಚಿ ದೇವಪ್ಪ ಚಾಂಬೋಳೆ, ಲಿಂಗಾಯತ ನೌಕರರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ದಿಲೀಪ್ ಡೊಂಗರಗಿ ಉಪಸ್ಥಿತರಿದ್ದರು. ಪ್ರಕಾಶ ಮಹಿಮಾಕರ್ ನಿರೂಪಿಸಿದರು.

ಸರ್ಕಾರಿ ನರ್ಸಿಂಗ್ ಕಾಲೇಜು ಹಾಗೂ ಬ್ರಿಮ್ಸ್ ಶುಶ್ರೂಷಾ ಕಾಲೇಜು ವತಿಯಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಇದಕ್ಕೂ ಮೊದಲು ಸರ್ಕಾರಿ ನರ್ಸಿಂಗ್ ಸ್ಕೂಲ್ ಹಾಗೂ ಬ್ರಿಮ್ಸ್ ಶುಶ್ರೂಷಾ ಕಾಲೇಜು ವತಿಯಿಂದ ನಗರದಲ್ಲಿ ಫ್ಲಾರೆನ್ಸ್ ನೈಟಿಂಗೇಲ್ ಭಾವಚಿತ್ರದ ಮೆರವಣಿಗೆ ನಡೆಸಲಾಯಿತು. ಬಳಿಕ ವಿದ್ಯಾರ್ಥಿಗಳು ಅಂತರರಾಷ್ಟ್ರೀಯ ಶುಶ್ರೂಷಕರ ದಿನಾಚರಣೆ ಪ್ರಯುಕ್ತ ಜಿಲ್ಲಾ ರಕ್ತನಿಧಿ ಕೇಂದ್ರದಲ್ಲಿ ರಕ್ತದಾನ ಮಾಡಿದರು.

# ತಾಂತ್ರಿಕ ಸಲಹೆಗಾರ ಹುದ್ದೆಗೆ ಅರ್ಜಿ ಆಹ್ವಾನ

ಬೀದರ : ಮೇ.13:ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಜಿಲ್ಲಾಧಿಕಾರಿಗಳ ಕಛೇರಿಯ ತಾಂತ್ರಿಕ ಕೋಶ ಬೀದರದಲ್ಲಿ ಖಾಲಿ ಇರುವ ತಾಂತ್ರಿಕ ಸಲಹೆಗಾರರ ಹುದ್ದೆ (01) ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸಲು ನುರಿತ ನಿವೃತ ಅಧೀಕ್ಷಕ ಅಭಿಯಂತರರು/ ಕಾರ್ಯನಿರ್ವಾಹಕಅಭಿಯಂತರರು ಸಿವಿಲ್ ಇಂಜಿನಿಯರ್‌ನ್ನು ತೆಗೆದುಕೊಳ್ಳಲು ಅರ್ಜಿ ಅಹ್ವಾನಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಕಾರ್ಮಿಕ ಸೇವೆಗಳ ವಿವಿದೊದ್ದೇಶ ಸಹಕಾರ ಸಂಘದ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗರಿಷ್ಠ 65 ವರ್ಷ ವಯೋಮಿತಿಯ ಅರ್ಹ ಅಭ್ಯರ್ಥಿಗಳು ರೂ.50/– ಶುಲ್ಕ ಪಾವತಿಸಿ ಖುದ್ದಾಗಿ ಈ ಕಛೇರಿಯಿಂದ ನಿಗದಿತ ಅರ್ಜಿಯನ್ನು ಪಡೆದು, ಭರ್ತಿ ಮಾಡಿ, ಅರ್ಜಿಯ ಜೊತೆಯಲ್ಲಿ ಕೇಳಲಾದ ದಾಖಲಾತಿಗಳನ್ನು ಸ್ವಯಂ ಧೃಡಿಕರಣದೊಂದಿಗೆ ದಿನಾಂಕ: 19–05–2025 ರೊಳಗಾಗಿ ಖುದ್ದಾಗಿ ಕಛೇ–ರಿಯ ಸಮಯದಲ್ಲಿ ಜೀದರ ಜಿಲ್ಲಾ ಕಾರ್ಮಿಕ ಸೇವೆಗಳ ವಿವಿದ್ದೋದ್ಧೇಶ ಸಹಕಾರ ಸಂಘ (ನಿ) ಜಿಲ್ಲಾಧಿಕಾರಿಗಳ ಕಛೇರಿ, ಬೀದರದಲ್ಲಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜೀದರ ಜಿಲ್ಲಾ ಕಾರ್ಮಿಕ ಸೇವೆಗಳ ವಿವಿದ್ದೋದ್ಧೇಶ ಸಹಕಾರ ಸಂಘ (ನಿ) ಜಿಲ್ಲಾಧಿಕಾರಿಗಳ ಕಛೇರಿ, ಬೀದರಗೆ ಸಂಪರ್ಕಿಸಲು ಅವರು ತಿಳಿಸಿದ್ದಾರೆ.

# ಗೃಹರಕ್ಷಕರ ಹುದ್ದೆಗಳಿಗೆ ಅರ್ಜಿ ಆಹ್ವಾನ

ಬೀದರ: ಮೇ.13: ಜಿಲ್ಲೆಯ ತಾಲ್ಲೂಕು ಘಟಕ ಮತ್ತು ಉಪ ಘಟಕಗಳಲ್ಲಿ ಹಾಲಿ ಖಾಲಿ ಇರುವ ದೀರ್ಘ ಕಾಲದಿಂದ ಗೈರು ಹಾಜರಾಗಿರುವ ಮತ್ತು ನಿಷ್ಕ್ರಿ ??ಯುಗೊಳಿಸಿರುವ ಗೃಹರಕ್ಕಕರ ಸ್ಥಾನದಲ್ಲಿ ಹೊಸ ಗೃಹರಕ್ಷಕರನ್ನು ನೇಮಕ ಮಾಡಿಕೊಳ್ಳಲು ಅರ್ಜಿಯನ್ನು ಆಹ್ವಾನಿಸಲಾಗಿದೆ ಎಂದು ಬೀದರ ಗೃಹ ರಕ್ಷಕ ದಳದ ಸಮಾದೇಷ್ಠರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಖಾಲಿಯಿರುವ ಘಟಕವಾರು ಸಂಖ್ಯೆಬಲ ವಿವರ: ಬೀದರ (2), ಧನ್ನೂರ (3), ಔರಾದ (1), ಕಮಲನಗರ (8), ಹುಲಸೂರ (13), ಮಂಠಾಳ (4) ಒಟ್ಟು 31 ಹುದ್ದೆಗಳು. ವಿದ್ಯಾರ್ಹತೆ ಕನಿಷ್ಠ 10ನೇ ತರಗತಿ ಪಾಸಾಗಿರಬೇಕು. ವಯೋಮಿತಿ 20 ರಿಂದ 40 ವರ್ಷದೊಳಗಿರಬೇಕು. ವೈದ್ಯರಿಂದ ಶಾರೀರಿಕ ಸುಸ್ಥಿತಿಯ ಬಗ್ಗೆ ಶಾರೀರಿಕ ಅರ್ಹತಾ ಪ್ರಮಾಣ ಪತ್ರ, ಸ್ಥಳಿಯ ನಿವಾಸದ ಪ್ರಮಾಣ ಪತ್ರ. ಹಾಗೂ ಪೋಲಿಸ ಇಲಾಖೆಯಿಂದ ನೀಡಲಾದ ಗುಣ ನಡತೆ ಪ್ರಮಾಣ ಪತ್ರದ ದಾಖಲಾತಿಗಳು ಲಗತ್ತಿಸಬೇಕು.

# ಮೂಲ ಜಾತಿಯ ನಿಖರ ಮಾಹಿತಿ ನೀಡಿ ಒಳಮೀಸಲಾತಿ ಸೌಲಭ್ಯ ಪಡೆಯಿರಿ: ಸೂರ್ಯವಂಶಿ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಮೇ. 13 : ಪರಿಶಿಷ್ಟ ಜಾತಿಯ 101 ಜಾತಿಯವರು ನಿಮ್ಮ ಮೂಲ ಜಾತಿಯ ನಿಖರ ಮಾಹಿತಿ ನೀಡುವ ಮೂಲಕ ಒಳಮೀಸಲಾತಿ ಸೌಲಭ್ಯ ಪಡೆಯಬೇಕೆಂದು ಆಲ್ ಇಂಡಿಯಾ ಬಹುಜನ ಸಮಾಜ ಪಕ್ಷದ ರಾಜ್ಯ ಉಪಾಧ್ಯಕ್ಷ ದತ್ತು ಸೂರ್ಯವಂಶಿ ತಿಳಿಸಿದರು.



ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಯವರಿಗೆ ಒಳ ಮೀಸಲಾತಿ ಜಾರಿಗಾಗಿ ನಿಖರವಾದ ದತ್ತಾಂಶವನ್ನು ಸಂಗ್ರಹಿಸಲು ನ್ಯಾಯಮೂರ್ತಿ ನಾಗಮಹನದಾಸ್ ಆಯೋಗದ ವತಿಯಿಂದ ಮೇ 5ರಿಂದ 17ರ ತನಕ ಪ್ರತಿ ಮನೆಗೆ ತೆರಳಿ ಸರ್ಕಾರಿ ನೌಕರರು ಜಾತಿ ಗಣತಿ ಪ್ರಾರಂಭಿಸಿದ್ದಾರೆ ಹಾಗಾಗಿ ಒಳಮೀಸಲಾತಿ ಸೌಲಭ್ಯವನ್ನು ಪಡೆಯಲು ರಾಜ್ಯದ 101 ಪರಿಶಿಷ್ಟ ಜಾತಿಯವರು ತಮ್ಮ ಮೂಲ ಜಾತಿಗಳಾದ ಮಾದಿಗ, ಹೊಲೆಯ, ಸಮಗಾರ, ಡೋಹರ, ಮಚ್ಚಿಗಾರ, ಭೋವಿ, ಲಂಬಾಣಿ, ಕೊರಚ, ಕೊರಮ ಇತ್ಯಾದಿಯಾಗಿ ವಿವರವನ್ನು ಸ್ಪಷ್ಟವಾಗಿ ತಿಳಿಸಬೇಕೆಂದು ಅವರು ಹೇಳಿದರು.

ಕಾನ್ಶಿರಾಮ್ ಜಿ ಯವರು ಹೇಳುವ ಪ್ರಕಾರ ಯಾರು ಯಾರ ಜನಾಂಗವು ಎಷ್ಟಿದೆಯೋ ಅವರಿಗೆ ಅಷ್ಟು ಅಧಿಕಾರದಲ್ಲಿ ಪಾಲು ಸಿಗಬೇಕು ಎಂಬ ಅವರ ದೆಹ್ಯ ವಾಕ್ಯವನ್ನು ಋಜುವಾತು ಪಡಿಸಲು ಈ ಒಳ ಮೀಸಲಾತಿ ಸಮೀಕ್ಷೆ ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದರು.

ಒಳ ಮೀಸಲಾತಿ ಜಾರಿ ವಿಚಾರದಲ್ಲಿ ರಾಜ್ಯ ಸರ್ಕಾರವು ಇನ್ನೂ ಸಾಕಷ್ಟು ರೀತಿಯಲ್ಲಿ ಇದನ್ನು ಪ್ರಚುರ ಪಡಿಸಬೇಕಿತ್ತು. ಪ್ರಾರಂಭದಲ್ಲಿ ಸಮೀಕ್ಷೆ ಕಾರ್ಯದಲ್ಲಿ ತಾಂತ್ರಿಕ ದೋಷದಿಂದ ಅಡಚಣೆ ಉಂಟಾಗುತ್ತಿತ್ತು. ಈಗ ಅದು ಬಗೆಹರಿದಿದ್ದು ಆದಷ್ಟು ಬೇಗ ಈ ಕಾರ್ಯ ಪೂರ್ಣಗೊಳ್ಳಬೇಕಿದೆ. ಪರಿಶಿಷ್ಟರು ತಮ್ಮ ಸಂವಿಧಾನಿಕ ಹಕ್ಕು ಗಿಟ್ಟಿಸಿಕೊಳ್ಳಲು ಇದು ಬಹಳ ಮುಖ್ಯವಾಗಿದೆ. ಸಮೀಕ್ಷೆಗಾಗಿ ಮನೆಗೆ ಬರುವ ಅಧಿಕಾರಿಗಳಿಗೆ ಸಹಕರಿಸಿ 42 ರೀತಿಯ ಮಾಹಿತಿಗಳನ್ನ ಪರಿಪೂರ್ಣವಾಗಿ ಒದಗಿಸಿ ಒಳ ಮೀಸಲಾತಿ ಜಾರಿಗಾಗಿ ಕೈಜೋಡಿಸಬೇಕೆಂದು ಸೂರ್ಯವಂಶಿ ಕರೆ ಕೊಟ್ಟರು.

ಆಲ್ ಇಂಡಿಯಾ ಬಹುಜನ ಸಮಾಜ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರಕಾಶ ಕೋಟೆ, ರಾಜ್ಯ ಪ್ರಧಾನ ಕಾರ್ಯದರ್ಶಿ ಸತ್ಯದೀಪ ಹಾವನೂರ, ರಾಜ್ಯ ಕಾರ್ಯದರ್ಶಿ ಜೆ ಆಸ್ಕರ್, ಜಿಲ್ಲಾ ಸಂಯೋಜಕ ಶಾದ್ರಕ್ ವಿ ಸಿತಾಳಗೇರಾ, ಜಿಲ್ಲಾಧ್ಯಕ್ಷ ಯೋಹನ್ ವಿ ಡಿಸೋಜಾ, ಜಿಲ್ಲಾ ಉಪಾಧ್ಯಕ್ಷ ಗುಣವಂತ ಶಿಂಧೆ, ಬೀದರ್ ದಕ್ಷಿಣ ಕ್ಷೇತ್ರದ ಅಧ್ಯಕ್ಷ ಉಮೇಶ ಗುತ್ತೇದಾರ, ಬೀದರ್ ಉತ್ತರ ಕ್ಷೇತ್ರದ ಅಧ್ಯಕ್ಷ ಸಾಲೊಮನ್ ಮಿರಾಗಂಜ್, ಜಿಲ್ಲಾ ಸಮಿತಿ ಸದಸ್ಯರಾದ ವಿಜಯಕುಮಾರ ಧಾಗೆ ಪತ್ರಿಕಾಗೋಷ್ಠಿಯಲ್ಲಿದ್ದರು.

# ಬಾಕಿ ಉಳಿಸಿಕೊಂಡಿರುವ ವಿದ್ಯುತ್ ಬಿಲ್ ಕೂಡಲೇ ಪಾವತಿಸಲು ಗ್ರಾಹಕರಲ್ಲಿ ಮನವಿ

ಮಲ್ಲಮ್ಮ ನುಡಿ ವಾರ್ತೆ

ಬೀದರ : ಮೇ.13: ಕೆಲ ತಿಂಗಳುಗಳಿಂದ ವಿದ್ಯುತ್ ಬಿಲ್ ಪಾವತಿಸದೇ ಬಾಕಿ ಉಳಿಸಿಕೊಂಡಿರುವ ಗ್ರಾಹಕರು ಕೂಡಲೇ ಬಾಕಿ ಪಾವತಿಸಬೇಕೆಂದು ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ಮನವಿ ಮಾಡಿದ್ದು, ನಗರದ ಹಲವಾರು ಬಡಾವಣೆಗಳ ನೂರಾರು ಗ್ರಾಹಕರು ಕೆಲ ತಿಂಗಳುಗಳಿಂದ ಬಾಕಿ ಇರಿಸಿಕೊಂಡಿದ್ದು, ಅಂಥವರು ಪಾವತಿಸಬೇಕು. ಇಲ್ಲದಿದ್ದಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಳಿಸುವಂಥ ಕಠಿಣ ಕ್ರಮ ಕೈಗೊಳ್ಳಲಾಗುವುದೆಂದು ಬೀದರ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರರು(ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ವಿದ್ಯುತ್ ಬಿಲ್ ಬಾಕಿ ಉಳಿಸಿಕೊಂಡಿರುವ ಬಡಾವಣೆಗಳ ವಿವರ: ಬೀದರ ನಗರದ ಗುಂಪಾ, ಮೈಲೂರ್, ಸಿ.ಎಮ್.ಸಿ ಕಾಲೋನಿ, ಸಿದ್ರಾಮಯ್ಯಾ ಲೇಔಟ್ , ಚಿಟ್ಟಾ ಕ್ರಾಸ್, ಚಿದ್ರಿ, ವಿದ್ಯಾನಗರ ಕಾಲೋನಿ, ಹಾರೂರಗೇರಿ, ಬಸವನಗರ, ರಾಂಪೂರೆ ಕಾಲೋನಿ, ಕೆ.ಇ.ಬಿ.ಕಾಲೋನಿ, ನಂದಿ ಕಾಲೋನಿ , ಗಾಂಧಿ ಗಂಜ, ಮಂಗಲ್ ಪೇಟ್, ಗವಾನ್ ಚಾಕ್, ಎಸ್.ಪಿ. ಮನೆ ಹತ್ತಿರ , ನಯಕಮಾನ್ , ಶಾಪೂರ್ ಗೇಟ್ ಎರಿಯಾ, ಶಹಾಗಂಜ, ಅಂಬೇಡ್ಕರ್ ಚೌಕ್, ಭೀಮನಗರ, ನೌಬಾದ್, ಪ್ರತಾಪನಗರ, ಮಾಧವ ನಗರ, ಶಿವನಗರ, ಸಿದ್ದಾಥ9 ಕಾಲೇಜು, ನವದಗೇರಿ, ಚಿಕ್ಕಪೇಟ್, ಮಣಿಗೆ ಲೇಔಟ್,, ಜೇಲ್ ಕಾಲೋನಿ, ಕೆ.ಎಚ್.ಬಿ. ಕಾಲೋನಿ, ಗುರುನಗರ, ದೇವಿ ಕಾಲೋನಿ, ಓಲ್ಡ್ ಆದಶ ಕಾಲೋನಿ, ನ್ಯೂ ಆದರ್ಶ ಕಾಲೋನಿ, ರಾಮನಗರ, ಜ್ಯೋತಿ ಕಾಲೋನಿ, ಯಲ್ಲಾಲಿಂಗ್ ಕಾಲೋನಿ, ಆಟೋನಗರ, ಕೆ.ಆಯ್.ಡಿ.ಬಿ. ಲೇಔಟ್, ಲಾಡಗೇರಿ, ಹೂಗೇರಿ, ಮೋಹನ ಮಾರ್ಕೆಟ್, ಅಕ್ಕಾಮಹಾದೇವಿ ಕಾಲೋನಿ, ಗುನ್ನಳ್ಳಿ, ಗೋರನಳ್ಳಿ, ಹನುಮಾನ ನಗರ, ಮೈಲೂರ್ ಕ್ರಾಸ್, ಎಡನ್ ಕಾಲೋನಿ, ನರಸಿಂಗ್ ಝರನಾ ಮುಂತಾದ ಪ್ರದೇಶಗಳಲ್ಲಿನ ಗ್ರಾಹಕರು ಬಾಕಿ ಇರಿಸಿಕೊಂಡಿದ್ದಾರೆ. ಈ ಗ್ರಾಹಕರು ತಮ್ಮ ಬಿಲ್ ಬಾಕಿಯನ್ನು ನಿಗದಿತ ದಿನಾಂಕದಂದು ಅಥವಾ ಅದಕ್ಕೂ ಮೊದಲು ಪಾಲವತಿಸಲು ಕೋರಲಾಗಿದೆ.

ಒಂದು ತಿಂಗಳಿಗಿಂತ ಹೆಚ್ಚು ಕಾಲ ಬಾಕಿ ಪಾವತಿಸದ ಗ್ರಾಹಕರಿಗೆ ಸಂಪರ್ಕ ಕಡಿತಗೊಳಿಸುವ ನೋಟಿಸ್ ನೀಡಿ ನಂತರ ಸಂಪರ್ಕವನ್ನು ಕೊನೆಗೊಳಿಸಲಾಗುತ್ತದೆ. ಆ ಬಳಿಕ 1976 ಬಾಕಿ ವಸೂಲಾತಿ ಕಾಯ್ದೆಯ ಕೆ.ಇ.ಆರ್.ಸಿ ಸೆಕ್ಷನ್ (4) ರ ಮಾನ ದಂಡಗಳ ಪ್ರಕಾರ ಫಾಮ9 ಎ ಮತ್ತು ಫಾರ್ಮ(ಬಿ) ನೀಡಲಾಗುತ್ತದೆ. ಅಲ್ಲದೇ ಸೆಕ್ಷನ್ 6 ರ ಅನ್ವಯ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೂ ಬಾಕಿ ವಸೂಲಾತಿ ಕಾಯ್ದೆ 1976 ರ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತದೆ. ಈ ಕಾಯ್ದೆಯು ಜೆಸ್ಕಾಂಗೆ ಆಸ್ತಿ ಮುಟ್ಟುಗೋಲಿಗೆ ಅಧಿಕಾರ ನೀಡುತ್ತದೆ. ಮೇ 31 ರೊಳಗೆ ಬಿಲ್ ಬಾಕಿ ಮೊತ್ತ ಪಾವತಿಸದಿದ್ದರೇ ಅಂತಹ ಗ್ರಾಹಕರಿಗೆ(ವೈಯಕ್ತಿಕ) ಹೆಸರು ಆರ್ ಆರ್. ನಂ. ಬಾಕಿ ಮೊತ್ತದ ವಿವರಗಳನ್ನು ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದಲ್ಲದೇ 1976 ರ ಬಾಕಿ ಮರೂ ಪಾವತಿ ಕಾಯ್ದೆಯ ಪ್ರಕಾರ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಎಚ್ಚರಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

## ಕಲಬುರಗಿ ನಗರಕ್ಕೆ ನಿರಂತರ ಕುಡಿಯುವ ನೀರು ಪ್ರಗತಿ ಪರಿಶೀಲನೆ:ಎಲ್ & ಟಿ ಕಂಪನಿ ಕಪ್ಪು ಪಟ್ಟಿಗೆ ಸೇರಿಸಲು ಶಿಫಾರಸ್ಸು:ವರದಿ ನೀಡುವಂತೆ ಪಾಲಿಕೆ ಆಯುಕ್ತರಿಗೆ ಪ್ರಿಯಾಂಕ್ ಖರ್ಗೆ ಸೂಚನೆ

ಕಲಬುರಗಿ,ಮೇ.13:ಕಲಬುರಗಿ ನಗರಕ್ಕೆ ನಿರಂತರ ಕುಡಿಯುವ ನೀರು ಯೋಜನೆ ಕಾಮಗಾರಿ ಕಾಲಮಿತಿಯಲ್ಲಿ ಪೂರ್ಣಗೊಳಿಸದೇ ವಿಳಂಬಧೋರಣೆ ತಾಳುತ್ತಿರುವ ಎಲ್ & ಟಿ ಕಂಪನಿಯನ್ನು ಕಪ್ಪು ಪಟ್ಟಿಗೆ ಸೇರಿಸಲು ಕೂಡಲೆ ವರದಿ ಸಲ್ಲಿಸುವಂತೆ ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ ಅವರಿಗೆ ರಾಜ್ಯದ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್, ಐ.ಟಿ–ಬಿ.ಟಿ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಸೂಚನೆ ನೀಡಿದರು. ಮಂಗಳವಾರ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕಲಬುರಗಿ ನಗರದಲ್ಲಿ 24 ಗಂಟೆ ನಿರಂತರ ಕುಡಿಯುವ ನೀರು ಯೋಜನೆ ಪ್ರಗತಿ ಪರಿಶೀಲನೆ ನಡೆಸಿದ ಅವರು, ಕಾಮಗಾರಿ ಆಮೆಗತಿಯಲ್ಲಿ ಸಾಗುತ್ತಿರುವುದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಅವರು, ಎಲ್ & ಟಿ ಕಂಪನಿ ಕೆಲಸಗಳು ಕಾಲಮಿತಿಯಲ್ಲಿ ಪೂರ್ಣವಾಗುತ್ತಿಲ್ಲ. ಇದರ ಮೇಲುಸ್ತುವಾರಿ ಮಾಡಬೇಕಾದ ಪಾಲಿಕೆ ಮತ್ತು ಕೆ.ಯು.ಐ.ಡಿ.ಎಫ್.ಸಿ ಇಂಜಿನೀಯರ್ ಗಳು ನೀವೇನು ಮಾಡುತ್ತಿದ್ದೀರಿ ಎಂದು ಇಂಜಿನೀಯರ್ ಗಳನ್ನು ತರಾಟೆಗೆ ತೆಗೆದುಕೊಂಡರು.



ಸರ್ಕಾರ ಸಾವಿರಾರು ಕೋಟಿ ರೂ. ಖರ್ಚು ಮಾಡಿ ನಗರದ ಜನರಿಗೆ ಶುದ್ಧ ಕುಡಿಯುವ ನೀರು ಪೂರೈಕೆ ಉದ್ದೇಶ ಹೊಂದಿದೆ. ಸಾವಿರಾರು ಸಂಖ್ಯೆಯಲ್ಲಿ ಇರಬೇಕಾದ ಕಾರ್ಮಿಕರ ಸಂಖ್ಯೆ ಇಲ್ಲಿರುವುದು 170 ರಿಂದ 300 ಅಷ್ಟೆ. ಇದರ ಮೇಲೆ ತೀವ್ರ ನಿಗಾ ಇರಿಸಬೇಕಾದ ಪಾಲಿಕೆ ಮತ್ತು ಕೆ.ಯು.ಐ.ಡಿ.ಎಫ್.ಸಿ ಇಂಜಿನೀಯರ್ ಗಳು ಎಲ್ & ಟಿ ಅವರು ಕೆಲಸ ಮಾಡುತ್ತಾರೆ ನಮ್ಮದ್ದೇನಿಲ್ಲ ಎಂದು ಕೈಕಟ್ಟಿ ಕುಳಿತುಕೊಳ್ಳುವುದು ಸರಿಯಲ್ಲ. ಇದು ನಡೆಯೋದಿಲ್ಲ ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ ಅವರು, ಸಂಬಂಧಪಟ್ಟ ಅಧಿಕಾರಿಗಳಿಗೆ ನೋಟಿಸ್ ಜಾರಿಗೊಳಿಸುವಂತೆ ಪಾಲಿಕೆ ಆಯುಕ್ತರಿಗೆ ಆದೇಶ ಮಾಡಿದ್ದರು. ಕಾಮಗಾರಿ ಸ್ಥಳಕ್ಕೆ ಎಂದಾದರು ಭೇಟಿ ನೀಡಿದ್ದೀರಾ, ನಿಗದಿಯಂತೆ ಕಾರ್ಮಿಕರು ಕೆಲಸ ಮಾಡುತ್ತಿರುವ ಬಗ್ಗೆ ವೀಕ್ಷಿಸಿದ್ದೀರಾ ಎಂದು ಇಂಜಿನೀಯರ್ ಗಳನ್ನು ಪ್ರಶ್ನಿಸಿದ ಸಚಿವ ಪ್ರಿಯಾಂಕ್ ಖರ್ಗೆ ಅವರು, ಕಾಮಗಾರಿ ವಿಳಂಬ ಸಂಬಂಧ ಕಂಪನಿಗೆ ಪಾಲಿಕೆಯಿಂದ ನೀಡಿದ ನೋಟಿಸ್, ಶಿಸ್ತು ಕ್ರಮ ಸೇರಿದಂತೆ ಇಂಜಿನೀಯರ್ ಗಳಿಗೆ ನೀಡಲಾದ ಜವಾಬ್ದಾರಿ ಕುರಿತು ಸಹ ಸಮಗ್ರ ವರದಿ ಸಲ್ಲಿಸುವಂತೆ ಸೂಚಿಸಿದರು.

ರಾಜ್ಯದ ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಖಾತೆ ಸಚಿವ ಡಾ.ಶರಣಪ್ರಕಾಶ ಪಾಟೀಲ ಮಾತನಾಡಿ ನಗರದ ಚರಂಡಿ ನೀರು ಸರಡಗಿ ಬ್ಯಾರೇಜ್ ಸೇರುತ್ತಿದೆ ಎಂಬ ದೂರಿದ್ದು, ಕಲುಷಿತ ನೀರು ಹೋಗದಂತೆ ಎಚ್ಚರ ವಹಿಸಬೇಕು ಎಂದರು.

ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ ಮಾತನಾಡಿ, ತಮ್ಮ ಮನೆ ಇರುವ ಶಾಂತಿ ನಗರದಲ್ಲಿಯೇ ಪೈಪ್ ಲೈನ್ ಹಾಕಲು ರಸ್ತೆ ಅಡ್ಡಿ 15 ದಿನಗಳಾಗಿವೆ, ಇನ್ನು ಮುಚ್ಚಿಲ್ಲ. ರಸ್ತೆ ಸಂಚಾರಕ್ಕೆ ಕಷ್ಟವಾಗುತ್ತಿದೆ. ಎಲ್ & ಟಿ ಅಧಿಕಾರಿಗಳು ಜನಪ್ರತಿನಿಧಿಗಳಿಗೂ ಸರಿಯಾಗಿ ಸ್ಪಂದನೆ ಮಾಡುತ್ತಿಲ್ಲ ಎಂದು ತಮ್ಮ ಅಸಮಾಧಾನ ವ್ಯಕ್ತಪಡಿಸಿದರು.

ಕಾಮಗಾರಿ ವಿಳಂಬಕ್ಕೆ ಉಪ ಗುತ್ತಿಗೆ ಕಾರಣ: ಕಲಬುರಗಿ ಮಹಾನಗರ ಪಾಲಿಕೆ ಮಹಾಪೌರರಾದ ಯಲ್ಲಪ್ಪ ನಾಯ್ಕೊಡಿ ಮಾತನಾಡಿ ಎಲ್ & ಟಿ ಕಂಪನಿಯು ಉಪ ಗುತ್ತಿಗೆ ನೀಡಿದೆ. ಇನ್ನು ಸದರಿ ಗುತ್ತಿಗೆದಾಋಇಗೆ ಸರಿಯಾಗಿ ಪೇಮೆಂಟ್ ಮಾಡದ ಕಾರಣ ಕಾಮಗಾರಿ ನಿಧಾನಗತಿಯಲ್ಲಿ ಸಾಗಿದೆ. ಕಾಮಗಾರಿ ಮಾತ್ರ ಕಂಪನಿಗೆ ನೀಡಿ ನಿರ್ವಹಣೆ ಜವಾಬ್ದಾರಿ ಕರ್ನಾಟಕ ನಗರ ನೀರು ಸರಬರಾಜು ಮಂಡಳಿಗೆ ನೀಡಿದರೆ ಅನುಕೂಲವಾಗಲಿದೆ. ಇದು ಹೀಗೆ ಸಾಗಿದ್ದರೆ ಇನ್ನು 2 ವರ್ಷವಾದರು ಕಾಮಗಾರಿ ಮುಗಿಯುವ ಲಕ್ಷಣ ಗೋಚರಿಸುತ್ತಿಲ್ಲ ಎಂದರು. ಸಭೆಯಲ್ಲಿ ಸಂಸದ ರಾಧಾಕೃಷ್ಣ ದೊಡ್ಡಮನಿ, ಕರ್ನಾಟಕ ರೇಷ್ಮೆ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷರು ಹಾಗೂ ಕಲಬುರಗಿ ಉತ್ತರ ಶಾಸಕಿ ಕನೀಜ್ ಫಾತಿಮಾ, ವಿಧಾನ ಪರಿಷತ್ ಶಾಸಕರಾದ ತಿಪ್ಪಣ್ಣಪ್ಪ ಕಮಕನೂರ, ಜಗದೇವ ಗುತ್ತೇದಾರ, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್, ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್, ನಗರ ಪೊಲೀಸ್ ಆಯುಕ್ತ ಡಾ.ಎಸ್.ಡಿ.ಶರಣಪ್ಪ, ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ, ಕೆ.ಯು.ಐ.ಎಫ್.ಡಿ.ಸಿ ಅಧೀಕ್ಷಕ ಅಭಿಯಂತ ಆರ್.ಪಿ.ಜಾಧವ, ಎಲ್ & ಟಿ ಕಂಪನಿಯ ಕುಮಾರನ್ ಸೇರಿದಂತೆ ಪಾಲಿಕೆ, ಕೆ.ಯು.ಐ.ಡಿ.ಎಫ್.ಸಿಯ ಇತರೆ ಅಧಿಕಾರಿಗಳಿದ್ದರು.

# ಭಾರತ- ಪಾಕಿಸ್ತಾನ ಯುದ್ಧ ಭೀತಿ ಹಿನ್ನೆಲೆ: ಅವಶ್ಯಕ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲು ಹಾಗೂ ಸಿದ್ಧತೆಯಲ್ಲಿರಲು ಸೂಚನೆ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ:ಮೇ:13:ಭಾರತ-ಪಾಕಿಸ್ತಾನ ಯುದ್ಧ ಭೀತಿ ಹಿನ್ನೆಲೆಯಲ್ಲಿ ಅವಶ್ಯಕ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲು ಹಾಗೂ ಸಕಲ ಸಿದ್ಧತೆ ಮಾಡಿಕೊಳ್ಳಲು ಜಿಲ್ಲಾಧಿಕಾರಿ ಡಾ.ಸುಶೀಲ. ಬಿ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇಂದು, ಭಾರತ -ಪಾಕ್ ಯುದ್ಧ ಭೀತಿ ಹಿನ್ನೆಲೆ ಮುನ್ನೆಚ್ಚರಿಕೆಯಾಗಿ ಕೈಗೊಳ್ಳಬೇಕಾದ ಪೂರ್ವ ಸಿದ್ಧತಾ ಕ್ರಮಗಳ ಕುರಿತ ಸಭೆ ನಡೆಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿನ ಜನನಿಬೀಡ, ಸೂಕ್ಷ್ಮ ಪ್ರದೇಶಗಳಲ್ಲಿ ನಿಗಾ ಇಟ್ಟು ಪೊಲೀಸ್ ಇಲಾಖೆಯಿಂದ ತಪಾಸಣೆ ಕಾರ್ಯ ನಡೆಯುತ್ತಿದೆ.ಮುಂಬರುವ ದಿನಗಳಲ್ಲಿ ತುರ್ತು ಸಂದರ್ಭದಲ್ಲಿ ಜಿಲ್ಲೆಯಲ್ಲಿ

ಸರ್ಕಾರಿ,ಖಾಸಗಿ ಆಸ್ಪತ್ರೆಗಳು, ನುರಿತ ವೈದ್ಯರೊಂದಿಗೆ ಸಿದ್ಧತೆಯಲ್ಲಿರಬೇಕು. ಆಶ್ರಯ ತಾಣಗಳಿಗಾಗಿ ಸರ್ಕಾರಿ ಸಂಸ್ಥೆಗಳ ಮ್ಯಾಪಿಂಗ್ ಮಾಡಿಕೊಳ್ಳಬೇಕು. ಎನ್,ಸಿ,ಸಿ ,ಎನ್ ಎಸ್ ಎಸ್ ಮತ್ತು ಇತರೆ ವಾಲಿಯಂಟಿಯರ್ಸ ಸಿದ್ಧತೆಯಲ್ಲಿಡಬೇಕು. ವಿವಿಧ ಸಾಮಗ್ರಿಗಳ ಬೆಲೆ ಏರಿಸಿ ಮಾರಾಟವಾಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿ ಇದಕ್ಕಾಗಿ ದೂರು ನಿರ್ವಹಣಾ ಸಮಿತಿ ಸಹ ರಚಿಸಲಾಗಿದೆ ಎಂದು ತಿಳಿಸಿದರು.

ಈಗಾಗಲೇ ಕಂಟ್ರೋಲ್ ರೂಮ್ ಆರಂಭಿಸಿದೆ. ಸಾಮಾಜಿಕ ಜಾಲತಾಣಗಳಲ್ಲಿ, ಯುದ್ದಕ್ಕೆ ಸಂಬಂದಿಸಿದ ಫೇಕ್ ಸುದ್ದಿ ಹರಡಿಸದಂತೆ ಎಚ್ಚರಿಕೆ ನೀಡಲಾಗಿದೆ. ಜಿಲ್ಲೆಯಲ್ಲಿ ಧಾರ್ಮಿಕ ಸಹಿಷ್ಣುತೆ ಕಾಪಾಡಿಕೊಳ್ಳಲು ಹಾಗೂ ಪರಸ್ಪರ ಸೌಹಾರ್ದಯುತವಾಗಿ ಇರಲು ಕೋರಿದ್ದು ,ಕಮ್ಯುನಲ್ ಸಂಘರ್ಷಗಳ ಬಗ್ಗೆ ತೀವ್ರ ಕಟ್ಟೆಚ್ಚರವಹಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿ, ಸಾರ್ವಜನಿಕರ ಸುರಕ್ಷತೆಯ ಹಿತದೃಷ್ಟಿಯಿಂದ ರಾಜ್ಯದ ನಾಲ್ಕು ಜಿಲ್ಲೆಗಳಲ್ಲಿ ಅಣಕು ಪ್ರದರ್ಶನ ಹಮ್ಮಿಕೊಳ್ಳಲಾಗಿದ್ದು, ಜಿಲ್ಲೆಯಲ್ಲಿಯೂ ಇಂತಹ ಅಣಕು ಪ್ರದರ್ಶನಕ್ಕೆ ಸಿದ್ಧತೆ ಮಾಡಿಕೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಅವರು ಸೂಚಿಸಿದರು.

ಯುದ್ಧದ ಬಗ್ಗೆ ಸುಳ್ಳು ಸುದ್ದಿ ಹಬ್ಬಿಸದಿರಲು ಸೂಚನೆ : ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಯುದ್ಧ ಭೀತಿ ಉಂಟಾಗಿರುವ ಹಿನ್ನಲೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸೂಚನೆ ಮೇರೆಗೆ ಜಿಲ್ಲೆಯಲ್ಲಿ ಸಾರ್ವಜನಿಕರು ಸುಳ್ಳು ಸುದ್ದಿಗಳಿಗೆ ಕಿವಿಕೊಡಬಾರದು. ಬದಲಾಗಿ ಜಿಲ್ಲಾಡಳಿತ ನೀಡುವ ಅಧಿಕೃತವಾಗಿ ಮಾಹಿತಿಯನ್ನು ಅವಲಂಬಿಸಬೇಕು. ಅಲ್ಲದೆ ಸಾರ್ವಜನಿಕರಿಗೆ ಬೇಕಾಗುವ ಅಗತ್ಯ ವಸ್ತುಗಳ ಬೆಲೆಯನ್ನು ಅನಗತ್ಯವಾಗಿ ಹೆಚ್ಚಳ ಮಾಡುವ ಪ್ರಯತ್ನಗಳು ಮಾಡಿದ್ದಲ್ಲಿ ಕಾನೂನು ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಜಿಲ್ಲಾಧಿಕಾರಿಗಳಾದ ಡಾ.ಸುಶೀಲಾ ಬಿ. ಅವರು ತಿಳಿಸಿದ್ದಾರೆ.

ಸಾರ್ವಜನಿಕರು ಯಾರು ಅನಾವಶ್ಯಕವಾಗಿ ಸಾಮಾಜಿಕ ಮಾಧ್ಯಮದಲ್ಲಿ ಸುಳ್ಳುಸುದ್ದಿ ಹರಡಕೂಡದು. ಒಂದು ವೇಳೆ ಹರಡಿದಲ್ಲಿ ಅಂತಹವರ ವಿರುದ್ಧ ಕಾನೂನು ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಪ್ರಸ್ತುತ ಇರುವ ಸಂದಿಗ್ಧ ಪರಿಸ್ಥಿತಿಯಲ್ಲಿ ಸಾರ್ವಜನಿಕರಾಗಲಿ,ಸಂಘ-ಸಂಸ್ಥೆಗಳಾಗಲಿ ಈ ಸಂದರ್ಭವನ್ನು ದುರುಪಯೋಗ ಮಾಡಿಕೊಂಡು ಅನಾವಶ್ಯಕವಾಗಿ ಸಾರ್ವಜನಿಕರಿಗೆ ಬೇಕಾಗುವ ವಸ್ತುಗಳ ಬೆಲೆ ಹೆಚ್ಚಿಸತಕ್ಕದಲ್ಲ. ನಾಗರಿಕರ ರಕ್ಷಣೆ-ಯ ಭಾಗವಾಗಿ ಸಾರ್ವಜನಿಕರು ದೊಡ್ಡ ಪ್ರಮಾಣದ ಸಮಾರಂಭ ಮಾಡುವುದಾಗಲಿ, ಸಾರ್ವಜನಿಕ ಸ್ಥಳಗಳಿಗೆ ಹೋಗುವುದನ್ನು ಮಾಡಬಾರದು. ಅಲ್ಲದೆ ಪ್ರಸ್ತುತ ಸಂದಿಗ್ಧ ಪರಿಸ್ಥಿತಿಯಲ್ಲಿ ಸಾರ್ವಜನಿಕರಿಗೆ ತೊಂದರೆಯಾದಲ್ಲಿ 24*7 ತುರ್ತು ಸಹಾಯವಾಣಿ ಸಂಖ್ಯೆ: 08473-253950ಗೆ ಸಂಪರ್ಕಿಸುವಂತೆ ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.



ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್ ಅವರು ಮಾತನಾಡಿ ಭಾರತದ ಗಡಿಗೆ ಮಾತ್ರ ಈ ಯುದ್ಧ ಸೀಮಿತವಾಗಿಲ್ಲ.ಕಾರಣ ಸುರಕ್ಷತೆಗಾಗಿ ಅವಶ್ಯಕ ಸಿದ್ಧತೆಯಲ್ಲಿ ಇರಬೇಕು. ಸಾರ್ವಜನಿಕರ ಹಿತದೃಷ್ಟಿಯಿಂದ,

ಹೆಚ್ಚಿನ ಜನ ಒಂದು ಕಡೆ ಸೇರುವುದು,ಧರಣಿ, ಸತ್ಯಾಗ್ರಹ, ಧಾರ್ಮಿಕ ಸಾಮೂಹಿಕ ಕಾರ್ಯಕ್ರಮಗಳನ್ನು ಮುನ್ನೆಚ್ಚರಿಕೆಯಾಗಿ ಅವಾಯ್ಡ್ ಮಾಡುವುದು ಸೂಕ್ತ.ಭಯೋತ್ಪಾದನಾ ಚಟುವಟಿಕೆಗಳ ಬಗ್ಗೆ ತೀವ್ರ ನಿಗಾ ಇಡಲಾಗಿದೆ. ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ಜನನಿಬಿಡ ಪ್ರದೇಶದಲ್ಲಿ ಇಲಾಖೆಯಿಂದ ಸೂಕ್ತ ತಪಾಸಣೆ ಹಾಗೂ ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೆಊಳ್ಳಲಾಗುತ್ತಿದೆ.ನಾರಾಯಣಪುರ್ ಡ್ಯಾಂಗೆ ಹೆಚ್ಚಿನ ಭದ್ರತೆ ಒದಗಿಸಲಾಗಿದೆ.ತೀವ್ರ ನಿಗಾ ಇಡಲಾಗಿದೆ.ಮಾಕ್ ಡ್ರಿಲ್ ಸಹ ಶೀಘ್ರದಲ್ಲೇ ಮಾಡಲಾಗುವುದು ಎಂದ ಅವರು ಎಲ್ಲ ಅಧಿಕಾರಿಗಳ ಮಧ್ಯೆ ಸಮನ್ವಯತೆ ಇರಬೇಕು. ಸಾರ್ವಜನಿಕರು ಸಹ ಸಹಕರಿಸುವಂತೆ ಅವರು ಸಲಹೆ ನೀಡಿದರು.

ಕುಡಿಯುವ ನೀರಿನ ಸಮಸ್ಯೆಯಾಗದಂತೆ ಎಚ್ಚರಿಕೆ ವಹಿಸಿ ತೀವ್ರ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಅವಶ್ಯಕ ಮುನ್ನೆಚ್ಚರಿ ಕಾ ಕ್ರಮಗಳನ್ನು ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ, ಜಿಲ್ಲಾಧಿಕಾರಿ ಡಾ.ಸುಶೀಲ.ಬಿ ಅವರು ಸೂಚಿಸಿದರು. ಪ್ರಕೃತಿ ವಿಕೋಪ ನಿರ್ವಹಣಾ ಸಮಿತಿ ಸಭೆ ನಡೆಸಿದ ಅವರು, ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿರುವ ಸಮಸ್ಯಾತ್ಮಕ ಗ್ರಾಮಗಳಿಗೆ ತಕ್ಷಣ ಶುದ್ಧ ನೀರು ಪೂ-ರೈಕೆ ಗೆ ಕ್ರಮ ಕೈಗೊಳ್ಳಬೇಕು.ಸಣ್ಣ ಪುಟ್ಟ ದುರಸ್ತಿ ಕಾರ್ಯಗಳನ್ನು ಕೈಗೊಂಡು ನೀರು ಪೂರೈಸಬೇಕು.ಆಯಾ ತಾಲೂಕಿನ ತಹಸೀಲ್ದಾರರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ತಾಲೂಕಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು, ಪಿಡಿಒ ಗಳು, ಗ್ರಾಮ ಪಂಚಾಯತ್ ಸಿಬ್ಬಂದಿಗಳು, ನಿರ್ಲಕ್ಷ್ಯ ತೋರದೆ ಸಮನ್ವಯತೆಯಿಂದ ಕಾರ್ಯನಿರ್ವಹಿಸಬೇಕು. ಕುಡಿಯುವ ನೀರಿನ ಕುರಿತು ದೂರು ಬಂದ ಕಡೆ ತಕ್ಷಣ ಸ್ಪಂದಿಸಲು ಸೂಚಿಸಿದರು. ಸದ್ಯ ಜಿಲ್ಲೆಯ 39 ನೀರಿನ ಸಮಸ್ಯಾತ್ಮಕ

ಗ್ರಾಮಗಳಿಗೆ ಸಮರ್ಪಕ ನೀರು ಪೂ-ರೈಕೆಗೆ ಸೂಚಿಸಿದರು. ಅಶುದ್ಧ ನೀರು ಪರೀಕ್ಷಿಸಬೇಕು.ಸಿಡಿಲುದಿಂದ ಮಾನವ ಸಾವಾಗಿ ಹಾನಿಯಾಗದಂತೆ ನೋಡಿಕೊಳ್ಳಲು ಮುನ್ನೆಚ್ಚರಿಕೆ ಗಳ ಬಗ್ಗೆ ಸೂಕ್ತ ಅರಿವು ಮೂಡಿಸಬೇಕು.ಆರೋಗ್ಯ ಇಲಾಖೆ,ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿಗಳು, ವಿದ್ಯುತ್ ಇಲಾಖೆ ಅಧಿಕಾರಿಗಳು ಅವಶ್ಯಕ ಸಂದರ್ಭದಲ್ಲಿ ತುರ್ತಾಗಿ ಸ್ಪಂದಿಸಲು ಅವರು ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಲವೀಶ್ ಒರಡಿಯಾ, ಸಹಾಯಕ ಆಯುಕ್ತ ಹಂಪಣ್ಣ ಸಜ್ಜನ್, ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿ ಪ್ರಭಾಕರ್ ಪ್ರೀಯದರ್ಶಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.



ಶಹಾಪುರದ ಹಳೆಪೇಟೆಯ ಜ್ಞಾನಗಂಗೋತ್ರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬುದ್ಧಪೂರ್ಣಿಮೆ ನಿಮಿತ್ಯ ಬುದ್ಧನ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪ್ರಾರ್ಥಿಸಲಾಯಿತು. ಈ ಸಂದರ್ಭದಲ್ಲಿ ಓಣಿಯ ಹಿರಿಯರು, ಮಕ್ಕಳು, ಯುವಕರು ಪಾಲ್ಗೊಂಡಿದ್ದರು. (ಮಲ್ಲಮ್ಮ ನುಡಿ ಚಿತ್ರ).

## ಇಂದು ಜಗತ್ತಿಗೆ ಬುದ್ಧನ ಬೋಧನೆ, ವಿಚಾರಗಳ ಅವಶ್ಯಕತೆ: ಶಾಸಕ ಚನ್ನಾರಡ್ಡಿ ಪಾಟೀಲ್ ತುನ್ನೂರ್ ಅಭಿಪ್ರಾಯ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಮೇ :13 : ಲೋಕಕ್ಕೆ ಇಂದು ಬುದ್ಧನ ಬೋಧನೆಯ ಅವಶ್ಯಕತೆ ಇದೆ ಎಂದು ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರು ಹೇಳಿದರು.

ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ,ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರಸಭೆ ಹಾಗೂ ಜಯಂತ್ಯೋತ್ಸವ ಸಮಿತಿ ಹಾಗೂ ವಿವಿಧ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಭಗವಾನ್ ಬುದ್ಧ ಜಯಂತ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದ್ವೇಷದ ಮಾರ್ಗದಲ್ಲಿ ನಡೆಯುವ ಮೂಲಕ ಇಂದು ಮಾನವ ಅಶಾಂತಿಯ ಸಾಗರದಲ್ಲಿ ಮುಳುಗಿದ್ದಾನೆ. ಈ ವೇಳೆ ಬೌದ್ಧ ಧರ್ಮದ ಪ್ರತಿಪಾದಕ ಗೌತಮ ಬುದ್ಧನ ಶಾಂತಿ ಸಂದೇಶಗಳು ಇಡೀ ಜಗತ್ತಿಗೆ ಬೇಕಾದ ಸಾರ್ವಕಾಲಿಕ ಸತ್ಯವೆಂದರು.

ಭಾರತದಲ್ಲಿ ಹೊಸ ಚಿಂತನೆ, ಮನ್ವಂತರದ ಬೆಳಕು ಹೊಮ್ಮಿಸಿದ ಮೇರು ಪುರುಷ ಭಗವಾನ್ ಬುದ್ಧರು ಎಂದು ಶಾಸಕರು ಬಣ್ಣಿಸಿದರು.

ಹೆತ್ತವರು ಮಗ ಚಕ್ರವರ್ತಿಯಾಗಲಿ ಎಂಬುವುದಿತ್ತು. ಆದರೇ ಲೌಕಿಕ ಜಗತ್ತಿನ ಗೊಡವೆಗೆ ಹೋಗದ ಗೌತಮರ ಹಾದಿ ಅಲೌಕಿಕದ ಕೊನೆ ಅವಸ್ಥೆಗೆ ಮುಟ್ಟಿತ್ತು, ಹೀಗಾಗಿಯೇ ಲೋಕದ ಮಹಾಪುರುಷನಾಗಿ ಜಗತ್ತು ಬೆಳಗುವ ಬುದ್ಧನಾಗಿ ಮಾರ್ಪಾಡಾದರು. ಸಾಮ್ರಾಟ್ ಅಶೋಕ ಹಾಗೂ ಡಾ.ಅಂಬೇಡ್ಕರ್ ಅವರು ಬುದ್ಧನ ಅನುಯಾಯಿಗಳಾಗಿದ್ದು ವಿಶೇಷ ಎಂದು ಶಾಸಕರು ಹೇಳಿದರು.

ಜಗತ್ತಿನಲ್ಲಿ ಎಲ್ಲೆಡೆ ಇಂದು ಶಾಂತಿ ಮಾಯವಾಗಿ ಕ್ರಾಂತಿಯ ಲಕ್ಷಣಗಳೇ ಕಾಣಿಸುತ್ತಿವೆ. ಮಾನವ ಜೀವಗಳೆಲ್ಲ ನೆಮ್ಮದಿಯ ಬದುಕು ತೊರೆಯುತ್ತಿವೆ. ಕಾರಣ ಬುದ್ಧರ ಸಂದೇಶ, ವಿಚಾರಗಳು ಅಳವಡಿಸಿಕೊಂಡಲ್ಲಿ ಶಾಂತಿಯ ಜೀವನ ಪ್ರತಿಯೊಬ್ಬರದ್ದು ಆಗುತ್ತದೆ ಎಂದು ಶಾಸಕ ಪಾಟೀಲ್ ವಿವರಿಸಿದರು.

ವಿಶೇಷ ಉಪನ್ಯಾಸ ನೀಡಿದ ಹಿರಿಯ ದಲಿತ ನಾಯಕ ನೀಲಕಂಠ ಬಡಿಗೇರ ಶಹಾಪುರ, ಬುದ್ಧರಿಗೆ ಜ್ಞಾನೋದಯವಾದ ಸ್ಥಳ ಬಿಹಾರದ ಬುದ್ಧಗಯಾ. ಬೋಧಿವೃಕ್ಷದ ಕೆಳಗೆ ಕಠಿಣ ತಪಸ್ಸು ಮಾಡಿ ಜ್ಞಾನ ಸಂಪಾದಿಸಿಕೊಂಡು ಅಲ್ಲಿಂದ ವಾರಣಾಸಿಗೆ ತೆರಳಿ ಸಾರಾನಾಥ ಎಂಬ ಸ್ಥಳದಲ್ಲಿ ತನ್ನ ಶಿಷ್ಯರಿಗೆ ಬೌದ್ಧ ತತ್ವೋಪದೇಶ ಮಾಡಿದರು.

ಸಿದ್ದಾರ್ಥರು ಹುಟ್ಟಿದಾಗಲೇ ಮಹಾಪುರುಷರಲಕ್ಷಣಗಳಿರುವುದನ್ನು ಹಿರಿಯರು ಗುರುತಿಸಿದ್ದರು. ಬುದ್ಧ ಎಂಬ ಪದದ ಅರ್ಥ ತಿಳಿದವನು, ಅರಿತವನು, ಜ್ಞಾನಿ, ಪ್ರಬುದ್ಧ ಪಂಡಿತ ಎಂದು ಆಗುತ್ತದೆ. ಹೀಗೆ ಪರಮ ಜ್ಞಾನವನ್ನು ಪಡೆದ ಜಾಗತಿಕ ದಾರ್ಶನಿಕ ಗೌತಮ ಬುದ್ಧ ಎಂದು ವಿವರಿಸಿದರು.

ನೆಮ್ಮದಿ ಜೀವನಕ್ಕೆ ಬೆಳಕಿನ ದಾರಿ ತೋರಿದ ಗೌತಮನನ್ನು ನೆನೆಯುವ ಈ ಪವಿತ್ರ ದಿನವೇ ಬುದ್ಧ ಪೌರ್ಣಮಿ ಎಂದು ಬಡಿಗೇರ ಹೇಳಿದರು.

ಜಿಲ್ಲಾಧಿಕಾರಿ ಡಾ.ಸುಶೀಲಾ.ಬಿ ಮಾತನಾಡಿ, ಗೌತಮ ಬುದ್ಧರು ತಮ್ಮಲ್ಲಿನ ಜ್ಞಾನವನ್ನು ಶ್ರೀಸಾಮಾನ್ಯರ ಭಾಷೆಯಲ್ಲಿಯೇ ಬೋಧಿಸಿದರು. ಭಾರತದ ಉದ್ಧಗಲಕ್ಕೂ ಸುಮಾರು 45 ವರ್ಷಗಳ ಕಾಲ ಸಂಚರಿಸಿ ನಾಲ್ಕು ಸತ್ಯಗಳನ್ನು, ಅಷ್ಟಾಂಗ ಮಾರ್ಗಗಳನ್ನು ಬೋದಿಸಿದರೆಂದು ತಿಳಿಸಿದರು.

ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್, ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಲವೀಶ್ ಒರಡಿಯಾ, ಯೂಡಾ ಅಧ್ಯಕ್ಷ ವಿನಾಯಕ ಮಾಲಿಪಾಟೀಲ್, ಭಗವಾನ ಬುದ್ಧ ಜಯಂತ್ಯೋತ್ಸವ ಸಮಿತಿ ಅಧ್ಯಕ್ಷ ಡಾ.ಭಗವಂತ ಅನ್ವಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಉತ್ತರಾದೇವಿ ಮಠಪತಿ ಇದ್ದರು.

ಜ್ಯೋತಿಲತಾ ತಡಿಬಿಡಿಮಠ ಕಾರ್ಯಕ್ರಮ ನಿರೂಪಿಸಿ ವಂದಿಸಿದರು. ಆರಂಭದಲ್ಲಿ ಡಾ. ಅಂಬೇಡ್ಕರ್ ಭವನದಿಂದ ಸರ್ಕಾರಿ ಪದವಿ ಮಹಾವಿದ್ಯಾಲಯದ ವರೆಗೆ ಬುದ್ಧರ ಭಾವಚಿತ್ರದ ಮೆರವಣಿಗೆ ನಡೆಯಿತು. ಕಾರ್ಯಕ್ರಮದಲ್ಲಿ ನೂರಾರು ಜನರು ಭಾಗವಹಿಸಿದ್ದರು.

## ಪಡಿತರ ಆಹಾರ ಬಿಡುಗಡೆ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಮೇ 13-2025ರ ಮೇ ಮಾಹೆಗೆ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಯಾದಗಿರಿ ಜಿಲ್ಲೆಯ ಪ್ರತಿ ಅಂತ್ಯೋದಯ (ಎಎವೈ) ಪಡಿತರ ಚೀಟಿಗೆ 35 ಕೆ.ಜಿ ಸಾರವರ್ಧಿತ (Fortified) ಅಕ್ಕಿ ಹಾಗೂ ಪಿ.ಹೆಚ್. ಹೆಚ್ (ಬಿಪಿಎಲ್) ಪಡಿತರ ಚೀಟಿಯಲ್ಲಿನ ಪ್ರತಿ ಫಲಾನುಭವಿಗೆ 05 ಕೆ.ಜಿ ಸಾರವರ್ಧಿತ (ಈಂಡಿ-ಣಜಿಜಜ) ಅಕ್ಕಿ. ಇದರ ಜೊತೆಗೆ ರಾಜ್ಯ ಸರ್ಕಾರದ ಅನ್ನಭಾಗ್ಯ ಯೋಜನೆಯಡಿಯಲ್ಲಿ ಪ್ರಸ್ತುತ ಜಿಲ್ಲೆಯಲ್ಲಿರುವ ಅಂತ್ಯೋದಯ (ಎಎವೈ) ಮತ್ತು ಪಿ.ಹೆಚ್. ಹೆಚ್ (ಬಿಪಿಎಲ್) ಪಡಿತರ ಚೀಟಿಗಳ ಫಲಾನುಭವಿಗಳಿಗೆ ಹಣದ ಬದಲಿಗೆ ಫೆಬ್ರವರಿ 2025ರ ಮಾಹೆಯಿಂದ ಜಾರಿಗೆ ಬರುವಂತೆ ಅರ್ಹ ಫಲಾನುಭವಿಗಳಿಗೆ ಹೆಚ್ಚುವರಿಯಾಗಿ 05 ಕೆ.ಜಿ ಅಕ್ಕಿ ವಿತರಣೆ ಮಾಡಲಾಗುತ್ತಿದೆ ಎಂದು ಯಾದಗಿರಿ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಉಪ ನಿರ್ದೇಶಕರಾದ ಅನೀಲ ಕುಮಾರ ಡವಳಗಿ ಅವರು ತಿಳಿಸಿದ್ದಾರೆ.

ಸರ್ಕಾರದ ಮಾರ್ಗಸೂಚಿಯಂತೆ ಏಕ ಸದಸ್ಯ, ದ್ವಿ ಸದಸ್ಯ ಮತ್ತು ತ್ರಿ ಸದಸ್ಯ ಎಎವೈ ಪಡಿತರ ಚೀಟಿಗಳನ್ನು ಹೊರತುಪಡಿಸಿ ನಾಲ್ಕು ಮತ್ತು ನಾಲ್ಕಕಿಂತ ಹೆಚ್ಚಿನ ಸದಸ್ಯರುಳ್ಳ ಅಂತ್ಯೋದಯ (ಎಎವೈ) ಪಡಿತರ ಚೀಟಿಯ ಪ್ರತಿ ಫಲಾನುಭವಿಗೆ ಮತ್ತು ಪಿ.ಹೆಚ್.ಹೆಚ್ (ಬಿಪಿಎಲ್) ಪಡಿತರ ಚೀಟಿಯಲ್ಲಿನ ಪ್ರತಿ ಫಲಾನುಭವಿಗೆ 05 ಕೆ.ಜಿ ಅಕ್ಕಿಯನ್ನು ಉಚಿತವಾಗಿ ವಿತರಿಸಲಾಗುವುದು.

2025ರ ಮೇ ಮಾಹೆಯಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ ಮತ್ತು ಅನ್ನಭಾಗ್ಯ ಯೋಜನೆಯಡಿಯಲ್ಲಿ 01 ರಿಂದ 03 ಸದಸ್ಯರಿರುವ ಅಂತ್ಯೋದಯ(ಎಎವೈ) ಪಡಿತರದಾರರಿಗೆ 35 ಕೆ.ಜಿ ಅಕ್ಕಿ, 04 ಸದಸ್ಯರ ಕಾರ್ಡಿಗೆ 40 ಕೆ.ಜಿ, 05 ಸದಸ್ಯರಿರುವ ಕಾರ್ಡಿಗೆ 50 ಕೆ.ಜಿ ಅಕ್ಕಿ, 06 ಸದಸ್ಯರಿರುವ ಕಾರ್ಡಿಗೆ 60 ಕೆ.ಜಿ ಅಕ್ಕಿ, 07 ಸದಸ್ಯರಿರುವ ಕಾರ್ಡಿಗೆ 70 ಕೆ.ಜಿ ಅಕ್ಕಿ, 08 ಸದಸ್ಯರಿರುವ ಕಾರ್ಡಿಗೆ 80 ಕೆ.ಜಿ ಅಕ್ಕಿ, 09 ಸದಸ್ಯರಿರುವ ಕಾರ್ಡಿಗೆ 90 ಕೆ.ಜಿ ಅಕ್ಕಿ, 10 ಸದಸ್ಯರಿರುವ ಕಾರ್ಡಿಗೆ 100 ಕೆ.ಜಿ ಅಕ್ಕಿ, 11 ಸದಸ್ಯರಿರುವ ಕಾರ್ಡಿಗೆ 110 ಕೆ.ಜಿ ಅಕ್ಕಿ, 12 ಸದಸ್ಯರಿರುವ ಕಾರ್ಡಿಗೆ 120 ಕೆ.ಜಿ ಅಕ್ಕಿ, 13 ಸದಸ್ಯರಿರುವ ಕಾರ್ಡಿಗೆ 130 ಕೆ.ಜಿ ಅಕ್ಕಿ, 14 ಸದಸ್ಯರಿರುವ ಕಾರ್ಡಿಗೆ 140 ಕೆ.ಜಿ ಅಕ್ಕಿ ಮತ್ತು 15 ಸದಸ್ಯರಿರುವ ಕಾರ್ಡಿಗೆ 150 ಕೆ.ಜಿ ಅಕ್ಕಿಯನ್ನು ವಿತರಿಸಲಾಗುವುದು. ಅದೇ ರೀತಿಯಾಗಿ ಪಿ.ಹೆಚ್. ಹೆಚ್ (ಬಿಪಿಎಲ್) ಪಡಿತರ ಚೀಟಿಯಲ್ಲಿನ ಪ್ರತಿಯೊಬ್ಬ ಸದಸ್ಯರಿಗೆ 10 ಕೆ.ಜಿ ಅಕ್ಕಿಯನ್ನು ಉಚಿತವಾಗಿ ಕೊಡಲಾಗುತ್ತಿದ್ದು, ಅರ್ಹ ಪಡಿತರ ಚೀಟಿದಾರರು ಇದರ ಸದುಪಯೋಗ ಪಡೆದುಕೊಳ್ಳಬೇಕು.

ಒಂದು ರಾಷ್ಟ್ರ ಒಂದು ಪಡಿತರ ಚೀಟಿ (ಅಂತರ್ ರಾಜ್ಯ/ ಅಂತರ್ ಜಿಲ್ಲೆ) ಪೋರ್ಟೆಬಿಲಿಟಿ ಜಾರಿಯಲ್ಲಿರುವುದರಿಂದ ಯಾವುದೇ ರಾಜ್ಯದ ಪಡಿತರ ಚೀಟಿದಾರರು ಯಾವುದೇ ವರ್ಗದ ಪಡಿತರ ಚೀಟಿದಾರರು ಯಾವುದೇ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರವನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ಯಾವುದೇ ನ್ಯಾಯಬೆಲೆ ಅಂಗಡಿ-ಕಾರರು ಕಡಿಮೆ ಪ್ರಮಾಣದ ಪಡಿತರವನ್ನು ವಿತರಣೆ ಮಾಡಿದ್ದಲ್ಲಿ, ಹಣ ಕೇಳಿದ್ದಲ್ಲಿ ಮತ್ತು ಇತರೆ ದೂರುಗಳಿಗೆ ನಿಶುಲ್ಕ ದೂ.ಸಂ. 1967ಗೆ ಹಾಗೂ ತಾಲ್ಲೂಕಿನಲ್ಲಿರುವ ತಹಶೀಲ್ದಾರರ ಕಛೇರಿಗೆ ಅಥವಾ ಜಿಲ್ಲೆಯ ಉಪನಿದೇರ್ಶಕರ ಕಛೇರಿಗೆ ದೂರನ್ನು ಸಲ್ಲಿಸಬಹುದಾಗಿದೆ. ಈ ಯೋಜನೆಯಡಿ ವಿತರಿಸಲಾದ ಆಹಾರ ಧಾನ್ಯಗಳನ್ನು ಹಣಕ್ಕಾಗಿ ಪಡಿತರ ಚೀಟಿದಾರರು ಮಾರಾಟ ಮಾಡುವುದಾಗಲಿ ಅಥವಾ ಸಂಗ್ರಹಣೆ ಮಾಡುವುದು ಕಂಡುಬಂದಲ್ಲಿ ಅಂತಹ ಪಡಿತರ ಚೀಟಿದಾರರಿಗೆ ವಿತರಿಸಲಾದ ಆಹಾರ ಧಾನ್ಯಗಳಿಗೆ ಮುಕ್ತ ಮಾರುಕಟ್ಟೆ ದರಕ್ಕೆ ದಂಡ ವಿಧಿಸಲಾಗುವುದು ಮತ್ತು ಸದರಿ ಪಡಿತರ ಚೀಟಿಯನ್ನು ಆರು ತಿಂಗಳ ಅವಧಿಗೆ ಅಮಾನತ್ತುಗೊಳಿಸಲಾವುದೆಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### CITATION

**IN THE COURT OF THE ADDL. CIVIL JUDGE AND JMFC. AT HUMNABAD**

**Cri. Misc. No. 46/2025**

PETITIONER'S :

P-1. Mohd Ali S/o late Chandsab Age; 47 years Occu: Agriculture

P-2. Khaja bi W/o late Khaja Moinuddin Age; 57 years Occu: House Hold

P-3. Maqdoom Ali S/o late Chandsab Age; 65 years Occu: Agriculture

P-4. Nasimunnisa W/o Maqdoom Ali Age; 52 Years Occu: House Hold

P-5. Ahmed Ali S/o Late Chandsab Age; 61 yars Occu: Agriculture

P-6. Ruksana Begum W/o Ahmed Ali Age; 48 years Occu: House Hold

P-7. Sayya Begum W/o Mohammed Ali Age; 46 Years Occu: House Hold

P-8. Noor Jahan Begum W/o lte Riyazuddin D/o Chandsab Occu: House

Hold R/o Kalaburgi Now at Town Chitguppa

P-9. Rasool Bee W/o Isamoddin Age; 64 years Occu: House Hold

P-10. Tahera Bee W/o Rahemath Khan D/o Chandsab Age; 43 years Occu: House Hold All R/o Town Chitguppa Tq:Chitguppa Dist:Bidar

Respondent:-

The Registrar of Birth and Death –through Chief Officer, TMC Humnabad

Whereas the above named petitioners have filed the petitioner under section 13(3) of Birth and Death Registration Act 1969 praying this Honorable court to issue Death Certificate son of Petitioners No. 1,3,5 and daughters-in-law of petitioners no. 2,4,6,7 and daughters of petitioner no. 8,9,10 namely : Jaitunabi W/o Chandasab who died on 09-05-2001 at Town Chitguppa Tq:Chitguppa Dist:Bidar. The petitioners claiming the death certificate of said Jaitunabi for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this court on 20-05-2025 at 11.00 AM in person or any authorized pleader to answer such claim otherwise the matter will be heard and determined in your absence as per law.

Given under my hand and seal of he court, this the 11-04-2025.

//By order of the court//
Chief Ministerial Officer
Addl. Civil Judge and JMFC Court, Humabad

### CITATION

**IN THE COURT OF THE ADDL. CIVIL JUDGE AND JMFC. AT HUMNABAD**

**Cri. Misc. No. 47/2025**

PETITIONER'S :

P-1. Mohd Ali S/o late Chandsab Age; 47 years Occu: Agriculture

P-2. Khaja bi W/o late Khaja Moinuddin Age; 57 years Occu: House Hold

P-3. Maqdoom Ali S/o late Chandsab Age; 65 years Occu: Agriculture

P-4. Nasimunnisa W/o Maqdoom Ali Age; 52 Years Occu: House Hold

P-5. Ahmed Ali S/o Late Chandsab Age; 61 yars Occu: Agriculture

P-6. Ruksana Begum W/o Ahmed Ali Age; 48 years Occu: House Hold

P-7. Sayya Begum W/o Mohammed Ali Age; 46 Years Occu: House Hold

P-8. Noor Jahan Begum W/o lte Riyazuddin D/o Chandsab Occu: House

Hold R/o Kalaburgi Now at Town Chitguppa

P-9. Rasool Bee W/o Isamoddin Age; 64 years Occu: House Hold

P-10. Tahera Bee W/o Rahemath Khan D/o Chandsab Age; 43 years Occu: House Hold All R/o Town Chitguppa Tq:Chitguppa Dist:Bidar

Respondent:-

The Registrar of Birth and Death –through Chief Officer, TMC Humnabad

Whereas the above named petitioners have filed the petitioner under section 13(3) of Birth and Death Registration Act 1969 praying this Honorable court to issue Death Certificate son of Petitioners No. 1,3,5 and daughters-in-law of petitioners no. 2,4,6,7 and daughters of petitioner no. 8,9,10 namely : Chandsab S/o Mastana Sab who died on 22-03-2001 at Town Chitguppa Tq:Chitguppa Dist:Bidar. The petitioners claiming the death certificate of said Chandsab for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this court on 20-05-2025 at 11.00 AM in person or any authorized pleader to answer such claim otherwise the matter will be heard and determined in your absence as per law.

Given under my hand and seal of he court, this the 11-04-2025.

//By order of the court//
Chief Ministerial Officer
Addl. Civil Judge and JMFC Court, Humabad

## ಭತ್ತದ ಕಟಾವಿನ ನಂತರ ಹುಲ್ಲನ್ನು ಸುಡಬಾರದು ರೈತರಲ್ಲಿ ಮನವಿ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಮೇ 13,: ಜಿಲ್ಲೆಯಲ್ಲಿ ಹಿಂಗಾರು ಹಂಗಾಮಿನಲ್ಲಿ ಬಿತ್ತನೆಯಾದ ಭತ್ತದ ಬೆಳೆಯೂ ಕೋಯ್ಲು ಮಾಡಿದ ನಂತರ ರೈತರು ಭತ್ತದ ಹುಲ್ಲನ್ನು ಬೆಂಕಿ ಹಚ್ಚಿ ಸುಡುತ್ತಿರುವುದು ಅಲ್ಲಲ್ಲಿ ಕಂಡುಬರುತ್ತಿದ್ದು, ಭತ್ತದ ಕಟಾವಿನ ನಂತರ ಹುಲ್ಲನ್ನು ಸುಡಬಾರದು ರೈತರಲ್ಲಿ ಮನವಿ ಮಾಡಲಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ರತೇಂದ್ರನಾಥ ಸುಗೂರು ಅವರು ತಿಳಿಸಿದ್ದಾರೆ.

ಭತ್ತದ ಕಟಾವಿನ ನಂತರ ಹುಲ್ಲುನ್ನು ಬೆಂಕಿ ಹಚ್ಚಿ ಸುಡುವುದರಿಂದ ವಾತವರಣಕ್ಕೆ ಹರಡುವ ಕಣಗಳ ಮಾಲಿನ್ಯದಿಂದಾಗಿ ವಾಯು ಮಾಲಿನ್ಯ ಹೆಚ್ಚಾಗಿ ಓಝೋನ್ ಪದರಕ್ಕೆ ಹಾನಿಯಾಗಿ ಹಸಿರುಮನೆ ಅನಿಲಗಳು ಬಿಡುಗಡೆಯಾಗುತ್ತವೆ. ಹಾಗೂ ವಯಸ್ಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಭತ್ತದ ಹುಲ್ಲು ಸುಡುವುದರಿಂದ ಉತ್ಪತ್ತಿಯಾಗುವ ಶಾಖವು ಮಣ್ಣಿನಲ್ಲಿರುವ ಉಪಯುಕ್ತರ ಸೂಕ್ಷ್ಮ ಜೀವಿಗಳನ್ನು ಕೊಲ್ಲುತ್ತದೆ, ಇದು ಮಣ್ಣಿನ ಆರೋಗ್ಯವನ್ನು ದುರ್ಬಲಗೊಳಿಸುತ್ತದೆ ಮಣ್ಣಿನಲ್ಲಿರುವ ಪೋಷಕಾಂಶಗಳು ನಷ್ಟವಾಗಿ ಭೂಮಿ ಫಲವತ್ತತೆಯನ್ನು ಕಳೆದುಕೊಳ್ಳುತ್ತದೆ. ಜಿಲ್ಲೆಯ ರೈತರು ಭತ್ತದ ಹುಲ್ಲು (ಕೂಳೆ ಸುಡುವಿಕೆ) ಸುಡುವುದನ್ನು ನಿಲ್ಲಿಸಿ ಅದೇ ಹುಲ್ಲನ್ನು ಮಣ್ಣಿನೊಂದಿಗೆ ಸೇರಿಸಿ ಬೂಮಿ ಹದ ಮಾಡುವುದರಿಂದ ಮಣ್ಣಿನಲ್ಲಿ ಉಪಯುಕ್ತ ಸೂಕ್ಷ್ಮ ಜೀವಿಗಳ ಸಂಖ್ಯೆ ಹೆಚ್ಚಾಗಿ ಮಣ್ಣಿನ ಆರೋಗ್ಯ ಸುಧಾರಿಸುತ್ತದೆ. ಮತ್ತು ವಾತವರಣಕ್ಕೆ ಯಾವುದೇ ಹಾನಿಯಾಗುವುದಿಲ್ಲ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಳ್ಳಾರಿಯಲ್ಲಿ ಸಂಭ್ರಮದ ಭಗವಾನ್ ಬುದ್ಧ ಜಯಂತ್ಯೋತ್ಸವ

## ಜ್ಞಾನದ ಬೆಳಕು ಭಗವಾನ್ ಬುದ್ಧ: ಅಡ್‌ಕರ್ ಅಧ್ಯಕ್ಷ ಮುಂಡರಗಿ ನಾಗರಾಜ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಮೇ 13ಭಗವಾನ್ ಬುದ್ಧರ ಜ್ಞಾನ ಇಡೀ ಜಗತ್ತಿಗೆ ಪಸರಿಸಿದೆ. ಅವರ ಶಾಂತಿ, ಸಹನೆ, ಸಹಬಾಳ್ವೆ ಸಂದೇಶ ನಮಗೆಲ್ಲರಿಗೂ ಸ್ಫೂರ್ತಿ. ಜ್ಞಾನದ ಬೆಳಕು ಜಗತ್ತಿಗೆ ನೀಡಿದ ಮಹಾನ್ ವ್ಯಕ್ತಿ ಭಗವಾನ್ ಬುದ್ಧ ಅವರ ತತ್ವಾದರ್ಶ ನಾವೆಲ್ಲರೂ ಪಾಲಿಸೋಣ ಎಂದು ಡಾ.ಬಾಬು ಜಗಜೀವನ್‌ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ ಅವರು ಹೇಳಿದರು.

ಜಿಲ್ಲಾಡಳಿತ,ಜಿಲ್ಲಾಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ಡಾ.ಜೋಳದರಾಶಿ ದೊಡ್ಡನಗೌಡ ರಂಗಮದಿರದಲ್ಲಿ ಸೋಮವಾರ ಏರ್ಪಡಿಸಿದ್ದ ಭಗವಾನ್ ಬುದ್ಧರ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಅಜ್ಞಾನದಿಂದ ಜ್ಞಾನದ ಕಡೆ, ಸಮಾಜದಲ್ಲಿದ್ದ ತಾರತಮ್ಯನೀತಿಯ ವಿರುದ್ಧ ಹೋರಾಡಿ ಹೊಸ ವ್ಯವಸ್ಥೆಯ ಸೈದ್ಧಾಂತಿಕ ನೆಲೆಗಟ್ಟನ್ನು ಭದ್ರಗೊಳಿಸಿದ ಮಹಾನ್ ವ್ಯಕ್ತಿ ಭಗವಾನ್ ಬುದ್ಧ. ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್‌ರವರು ಸಹ ಬೌದ್ಧ ಧರ್ಮ ಸ್ವೀಕರಿಸುವ ಮೂಲಕ ಬೌದ್ಧಧರ್ಮವನ್ನು ಬೆಂಬಲಿಸಿದರು ಎಂದು ತಿಳಿಸಿದರು. ಬೌದ್ಧ ಧರ್ಮದ ಸಂಸ್ಥಾಪಕ ಗೌತಮ ಬುದ್ಧ ಮಹಾನ್ ದಾರ್ಶನಿಕ. ಸಿದ್ಧಾರ್ಥ ಎನ್ನುವ ರಾಜವಂಶದ ಕುಡಿ ಸಕಲ ವೈಭೋಗವನ್ನು ತ್ಯಜಿಸಿ, ಜ್ಞಾನೋದಯ ಪಡೆದು ಗೌತಮ ಬುದ್ಧನಾಗುತ್ತಾನೆ. ಲೋಕಕ್ಕೆ ಶಾಂತಿ, ಅಹಿಂಸೆಯ ಮಹತ್ವವನ್ನು ಭೋಧಿಸುತ್ತಾನೆ. ಬುದ್ಧನ ಜನನ, ಮರಣ ಹಾಗೂ ಜ್ಞಾನೋದಯವನ್ನು ಸ್ಮರಿಸುವ ಉದ್ದೇಶದಿಂದ ಪ್ರತಿ ವರ್ಷ ಬುದ್ಧ ಪೂರ್ಣಿಮೆಯನ್ನು ಆಚರಿಸಲಾಗುತ್ತದೆ ಎಂದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಕೆ.ಇ.ಚಿದಾನಂದಪ್ಪ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಬುದ್ಧನ ಜನನ, ಮರಣ ಹಾಗೂ ಜ್ಞಾನೋದಯ ಸ್ಮರಿಸುವ ಉದ್ದೇಶದಿಂದ ಸರ್ಕಾರದಿಂದ ಪ್ರಥಮವಾಗಿ ಬುದ್ಧ ಜಯಂತಿ ಆಚರಿಸಲಾಗುತ್ತಿದೆ. ಜ್ಞಾನೋದಯ, ಕರುಣೆ ಮತ್ತು ಶಾಂತಿಯನ್ನು ಪರಿಗಣಿಸಲು ಇದು ಮಹತ್ವದ ದಿನವಾಗಿದೆ ಎಂದ ಅವರು, ಬುದ್ಧ ಹೇಳಿದ ಬೌದ್ಧ ಧರ್ಮದ ಮೂರು ಸಂದೇಶವನ್ನು ಇದೇ ವೇಳೆ ಸ್ಮರಿಸಿದರು. ಸಹಾಯಕ ಆಯುಕ್ತರಾದ ಪಿ.ಪ್ರಮೋದ್ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಲೋಕಕ್ಕೆ ಶಾಂತಿ, ಅಹಿಂಸೆಯ ಮಹತ್ವ ಭೋದಿಸಿದ ಬುದ್ಧರ ತತ್ವ ಬೋಧನೆ ಅರಿತರೆ ಜೀವನದಲ್ಲಿ ಸುಖ-ಶಾಂತಿ ನೆಮ್ಮದಿ ನೆಲೆಯೂರಲಿದೆ. ಬುದ್ಧನ ಜ್ಞಾನ ಮಾರ್ಗ ಅರಿತರೆ ಅದು ಮನುಷ್ಯರ ಮನಸ್ಸಿನ ಶುದ್ಧಿ ಮತ್ತು ಇದರಿಂದ ದುಃಖ ನಿವಾರಣೆ ಹೊಂದಲು ಸಾಧ್ಯವಾಗಲಿದೆ ಎಂದರು.

ವಿಜಯನಗರ ಜಿಲ್ಲೆಯ ಹಂಪಿ ವಿದ್ಯಾರಣ್ಯ ಕನ್ನಡ ವಿಶ್ವವಿದ್ಯಾಲಯದ ಸಂಸ್ಕೃತಿ ಚಿಂತಕರಾದ ಡಾ.ವೆಂಕಟಗಿರಿ ದಳವಾಯಿ ಅವರು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಬಳ್ಳಾರಿಯ ಜಡೇಶ್ ಎಮ್ಮಿಗನೂರು ತಂಡದಿಂದ ಬುದ್ಧ ಬಸವ ಅಂಬೇಡ್ಕರ್ ಗೀತೆ ಗಾಯನ ಪ್ರಸ್ತುತ ಪಡಿಸಿದರು.

ಇದಕ್ಕೂ ಮುನ್ನ ಭಗವಾನ್ ಬುದ್ಧ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಗಣ್ಯರು ಕಾರ್ಯಕ್ರಮ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ಭಾರತೀಯ ಬೌದ್ಧ ಮಹಸಭಾ ಜಿಲ್ಲಾ ಘಟಕ ಅಧ್ಯಕ್ಷ ಕಮಲರತ್ನ ಬಂತೇಜಿ, ಅಂಬೇಡ್ಕರ್ ಸಂಘದ ಜಿಲ್ಲಾಧ್ಯಕ್ಷ ಅನಂತ ಕುಮಾರ್ ಸೇರಿದಂತೆ ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಮುಖಂಡರು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

**ಸಂಭ್ರಮದ ಮೆರವಣಿಗೆ:**

ಭಗವಾನ್‌ಬುದ್ಧರ ಜಯಂತ್ಯೋತ್ಸವದ ಅಂಗವಾಗಿ ನಗರದಲ್ಲಿ ಸಂಭ್ರಮದ ಮೆರವಣಿಗೆ ನಡೆಯಿತು. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಕೆ.ಇ.ಚಿದಾನಂದಪ್ಪ ಅವರು ಭಗವಾನ್ ಬುದ್ಧ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು. ಮೆರವಣಿಗೆಯಲ್ಲಿ ವಿವಿಧ ಸಾಂಸ್ಕೃತಿಕ ಕಲಾತಂಡಗಳು ಗಮನ ಸೆಳೆದವು. ಮೆರವಣಿಗೆಯು ನಗರದ ಡಾ.ರಾಜ್ ಕುಮಾರ್ ರಸ್ತೆಯ ಮುನ್ಸಿಪಾಲ್ ಕಾಲೇಜು ಮೈದಾನದಿಂದ ಆರಂಭವಾಗಿ ಗಡಿಗಿ ಚೆನ್ನಪ್ಪ ವೃತ್ತ, ಜಿಲ್ಲಾಧಿಕಾರಿಗಳ ಕಚೇರಿ, ರೈಲ್ವೆ ಸ್ಟೇಷನ್ ರಸ್ತೆ, ಹೆಚ್.ಆರ್.ಗವಿಯಪ್ಪ ವೃತದ ಮೂಲಕ ಡಾ.ಜೋಳದರಾಶಿ ದೊಡ್ಡನಗೌಡ ರಂಗಮದಿರದ ವೇದಿಕೆ ಸಭಾಂಗಣಕ್ಕೆ ತಲುಪಿ ಸಂಪನ್ನಗೊಂಡಿತು.

# ಯುವಕ ಕಾಣೆ ನಾಪತ್ತೆ ಮನವಿ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಮೇ13-ನಗರದ ಸಿ.ಎಂ.ಸಿ ಕಾಲೋನಿಯ ನಿವಾಸಿಯಾದ ತೌಸಿಫ್ ಅಹಮದ್ ಎನ್ನುವ 19 ವರ್ಷದ ಯುವಕ ಮೇ 07 ರಂದು ಕಾಣೆಯಾಗಿದ್ದು, ಈ ಕುರಿತು ಕೌಲ್ ಬಜಾರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪತ್ತೆಗೆ ಸಹಕರಿಸಬೇಕು ಎಂದು ಸಬ್ ಇನ್ಸ್‌ಕ್ಟರ್ ಮನವಿ ತಿಳಿಸಿದ್ದಾರೆ.

ಚಹರೆ ಗುರುತು:

ಅಂದಾಜು 5.10 ಅಡಿ ಎತ್ತರ, ದುಂಡು ಮುಖ, ಗೋದಿ ಮೈಬಣ್ಣ, ತೆಳುವಾದ ಮೈಕಟ್ಟು, ಕನ್ನಡಕ ಧರಿಸುತ್ತಾನೆ. ಕಾಣೆ-ಯಾದ ಸಂದರ್ಭದಲ್ಲಿ ಗ್ರೀನ್ ಲೈಟ್ ಕ್ರಿಮ್ ಕಲರ್ ಮಿಕ್ಸಿಂಗ್ ಕಾಲರ್ ನೆಕ್ ಟೀ ಅಪ್ ಸ್ಲೀವ್ಸ್ ಟಿಶರ್ಟ್ ಹಾಗೂ ಕ್ರೀಮ್ ಕಲರ್ ನೈಟ್‌ಪ್ಯಾಂಟ್ ಧರಿಸಿರುತ್ತಾನೆ. ಬ್ಲೂ ಕಲರ್ ಚಪ್ಪಲಿ ಮತ್ತು ಬ್ಲೂ ಕಲರ್ ಬ್ಯಾಗ್ ಇರುತ್ತದೆ.

ಯುವಕನ ಬಗ್ಗೆ ಸುಳಿವು ಸಿಕ್ಕಲ್ಲಿ ಬಳ್ಳಾರಿ ಕೌಲ್ ಬಜಾರ್ ಪೊಲೀಸ್ ಠಾಣೆಯ ದೂ.08392-240731,244145, ಪಿ.ಐ ಮೊ.9480803047, ಪಿಎಸ್‌ಐ 94808203084 ಅಥವಾ ಬಳ್ಳಾರಿ ಕಂಟ್ರೋಲ್ ರೂಂ ದೂ.08392-258100 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಕ್ಕಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳನ್ನು ಕಲಿತುಕೋಳ್ಳಿ: ಶೇಖರಗೌಡ ಜಿ ರಾಮತ್ನಾಳ್




ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಮಕ್ಕಳಿಗೆ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಾದ ಯೋಗ ಕರಾಟೆ ಸಮೂಹ ನೃತ್ಯ ಸಮೂಹ ಸಂಗೀತ ಚಿತ್ರಕಲೆ ಜೇಡಿ ಮಣ್ಣಿನ ಕಲೆಯನ್ನು ಈ ಬೇಸಿಗೆ ಶಿಬಿರದಲ್ಲಿ ಕಲಿತುಕೊಳ್ಳಬೇಕೆಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶೇಖರಗೌಡ ಜಿ ರಾಮತ್ನಾಳ್ ಮಕ್ಕಳಿಗೆ ಹೇಳಿದರು.

ಅವರು ಸೋಮವಾರ ಕೊಪ್ಪಳದ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ರಾಜ್ಯ ಬಾಲ ಭವನ ಸೊಸೈಟಿ, ಬೆಂಗಳೂರು, ಜಿಲ್ಲಾ ಪಂಚಾಯತ್ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಬಾಲ ಭವನ ಸಮಿತಿ ಕೊಪ್ಪಳ ಇವರ ಸಹಯೋಗದಲ್ಲಿ ಹಮ್ಮಿಕೊಳ್ಳಲಾದ 2025-26 ಸಾಲಿನ ಬೇಸಿಗೆ ಶಿಬಿರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕೊಪ್ಪಳ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷ ಪ್ರಕಾಶ್ ಕಡಗದ ಅವರು ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿ, ಮಕ್ಕಳು ಶಿಬಿರದಲ್ಲಿ ಹೆಚ್ಚು ಹೆಚ್ಚು ಭಾಗವಹಿಸಿ ಬೇಸಿಗೆ ಶಿಬಿರದಲ್ಲಿ ಇದ್ದಂತಹ ಚಟುವಟಿಕೆಗಳಲ್ಲಿ ಭಾಗವಹಿಸಿ ಆಸಕ್ತಿಯಿಂದ ಕಲಿತು ಪ್ರದರ್ಶನ ಮಾಡಬೇಕು ಎಂದು ಹೇಳಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಹಾಗೂ ಬಾಲ ಭವನ ಕಾರ್ಯದರ್ಶಿ ಪರಶುರಾಮವಾಯ್‌ಶೇಟ್ಟೆಪ್ಪನವರ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಒಳ್ಳೆಯ ಶಿಕ್ಷಣವನ್ನು ಕಲಿತು ದೊಡ್ಡ ದೊಡ್ಡ ಹುದ್ದೆಗಳನ್ನು ಪಡೆದುಕೊಳ್ಳಬೇಕೆಂದು ಮಕ್ಕಳಿಗೆ ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಜಿಲ್ಲಾ ನಿರೂಪಣಾಧಿಕಾರಿಗಳು ಗಂಗಪ್ಪ, ಕೊಪ್ಪಳ ಶಿಶು ಅಭಿವೃದ್ಧಿ ಯೋಜನಾಧಿಕಾರಿ ರೋಹಿಣಿ ಕೊಟಗಾರ, ಯಲಬುರ್ಗಾ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಬೆಟ್ಟದೇಶ ಮಾಳೆಕೊಪ್ಪ ,ಗಂಗಾವತಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಜಯಶ್ರೀ ಆರ್, ಕುಷ್ಟಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಯಲ್ಲಮ್ಮ ಹಂಡಿ, ಕನಕಗಿರಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ವೀರುಪಾಕ್ಷಿ, ಉತ್ಕರ್ಷ ಸಂಯೋಜಕರು ಪುನೀತ್ ರಾಜ ಸೇರಿದಂತೆ ಸಂಪನ್ಮೂಲ ವ್ಯಕ್ತಿಗಳು ಹಾಗೂ ವಿವಿಧ ಶಾಲೆ ಮತ್ತು ಸರಕಾರಿ ಬಾಲಮಂದಿರದ ಮಕ್ಕಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಜಿಲ್ಲಾ ಬಾಲ ಭವನ ಸಂಯೋಜಕ ಮೆಹಬೂಬಸಾಬ ಇಲಾಹಿ ಅವರು ಕಾರ್ಯಕ್ರಮ ನಿರೂಪಿಸಿದರು, ಸಿದ್ದಪ್ಪ ಕುರಿ ಅವರು ಸ್ವಾಗತಿಸಿದರು, ಫಾತಿಮಾ ರವರು ವಂದನಾರ್ಪಣೆಯನ್ನು ಕಾರ್ಯಕ್ರಮದ ಮಾಡಿದರು.

# ತೋಟಗಾರಿಕೆ ಬೆಳೆಗಳಿಂದ ರೈತರಿಗೆ ಹೆಚ್ಚಿನ ಲಾಭ ಸಿಗಲಿದೆ- ಕೆ.ರಾಘವೇಂದ್ರ ಹಿಟ್ನಾಳ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ತೋಟಗಾರಿಕೆ ಬೆಳೆಗಳಾದ ಮಾವು, ದಾಳಿಂಬೆ, ಪಪ್ಪಾಯಿಗಳಿಂದ ರೈತರಿಗೆ ಹೆಚ್ಚಿನ ಲಾಭ ಸಿಗುವುದರಿಂದ ರೈತರು ಇವುಗಳನ್ನು ಬೆಳೆಸುವುದರ ಕಡೆಗೆ ಹೆಚ್ಚಿನ ಒತ್ತು ನೀಡಬೇಕೆಂದು ಕೊಪ್ಪಳ ವಿಧಾನಸಭಾ ಕ್ಷೇತ್ರದ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಹೇಳಿದರು.

ಅವರು ಮಂಗಳವಾರ ಕೊಪ್ಪಳ ತೋಟಗಾರಿಕೆ ಇಲಾಖೆ ವತಿಯಿಂದ ಕೊಪ್ಪಳ ನಗರದ ತೋಟಗಾರಿಕೆ ಇಲಾಖೆ ಉಪನಿರ್ದೇಶಕರ ಕಛೇರಿ ಆವರಣದಲ್ಲಿ ಹಮ್ಮಿಕೊಂಡಿರುವ ಕೊಪ್ಪಳ ಮಾವು ಮೇಳ-2025. ಪ್ರದರ್ಶನ ಹಾಗೂ ಮಾರಾಟ ಮೇಳ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ಹೆಚ್ಚು ಮಾವು ಬೆಳೆದ ರೈತರಿಗೆ ಮಾರ್ಕೆಟಿಂಗ್ ಆಗಬೇಕೆಂದು ತೋಟಗಾರಿಕೆ ಇಲಾಖೆ ಕೊಪ್ಪಳ ವತಿಯಿಂದ ಕೊಪ್ಪಳ ಮಾವು ಮೇಳ ಕಾರ್ಯಕ್ರಮವನ್ನು ಪ್ರತಿ ವರ್ಷ ಹಮ್ಮಿಕೊಳ್ಳಲಾಗುತ್ತಿದೆ. ಇದರಿಂದ ರೈತರಿಗೆ ಅನುಕೂಲವಾಗಲಿದೆ. ಮಾವಿನ ಹಣ್ಣುಗಳನ್ನು ಬೆಳೆದ ರೈತರಿಗೆ ಸರಿಯಾದ ಬೆಲೆ ಸಿಗಬೇಕು ಕಳೆದ ವರ್ಷಕ್ಕಿಂತ ಈ ವರ್ಷ ಹೆಚ್ಚಿನ ಮಳೆಯಾಗಿರುವುದರಿಂದ ಮಾವಿನ ಬೆಲೆ ಸ್ವಲ್ಪ ಕಡಿಮೆಯಾಗಿದೆ ಎಂದರು. ಈ ಮೇಳದಲ್ಲಿ ಒಂದು ಕೆ. ಜಿ ಮಿಯಾಜಾಕಿ ಹಣ್ಣಿನ ಬೆಲೆ 2. 50 ಲಕ್ಷ ಇರುವ ಹಣ್ಣನ್ನು ಪ್ರದರ್ಶನಕ್ಕೆ ಇಟ್ಟಿರುವುದು ಮೇಳದ ಮತ್ತೊಂದ ವಿಶೇಷತೆಯಾಗಿದೆ ಇಂತಹ ಹಣ್ಣುಗಳನ್ನು ನಮ್ಮ ಭಾಗದಲ್ಲಿ ರೈತರು ಬೆಳೆಯುವಂತಾಗಬೇಕೆಂದು ಹೇಳಿದರು. ಕೊಪ್ಪಳ ತೋಟಗಾರಿ-ಕೆ ಇಲಾಖೆ ಉಪನಿರ್ದೇಶಕ ಕೃಷ್ಣ ಸಿ. ಉಕ್ಕುಂದ ಅವರು ಮಾತನಾಡಿ, ತೋಟಗಾರಿಕೆ ಇಲಾಖೆ ವತಿಯಿಂದ 9ನೇ ವರ್ಷದ ಮಾವು ಮೇಳವನ್ನು ಕಾರ್ಯಕ್ರಮವನ್ನು ಕೊಪ್ಪಳ ನಗರದಲ್ಲಿ ಹಮ್ಮಿಕೊಳ್ಳಲಾಗಿದ್ದು, ಮೇ 22ರ ವರೆಗೆ ಹತ್ತು ದಿನಗಳ ಕಾಲ ತೋಟಗಾರಿಕೆ ಕಚೇರಿ ಆವರಣದಲ್ಲಿ ನಡೆಯಲಿದೆ. 100ಕ್ಕೂ ಹೆಚ್ಚು ರೈತರು ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದು, ಮೇಳದಲ್ಲಿ 30ಕ್ಕೂ ಹೆಚ್ಚು ಸ್ಟಾಲ್‌ಗಳ ವ್ಯವಸ್ಥೆಯನ್ನು ಮಾಡಲಾಗಿದೆ. ರೈತರು ನೈಸರ್ಗಿಕವಾಗಿ ಮಾಗಿಸಿದ ಹಣ್ಣುಗಳನ್ನು ಯೋಗ್ಯ ಬೆಲೆಯಲ್ಲಿ ಮಾರಾಟಕ್ಕೆ ಅನುಕೂಲ ಕಲ್ಪಿಸಲಾಗಿದೆ. ಇದರಿಂದ ಗ್ರಾಹಕರಿಗೆ ಮಾರಕಟ್ಟೆಗಿಂತಲೂ ಕಡಿಮೆ ದರದಲ್ಲಿ ಉತ್ತಮ ಗುಣಮಟ್ಟದ ನೈಸರ್ಗಿಕವಾದ ಹಣ್ಣುಗಳು ಸಿಗಲಿವೆ. 100 ಕ್ಕೂ ಹೆಚ್ಚು ತಳಿಯ ವಿವಿಧ ಮಾವಿನ ಹಣ್ಣುಗಳನ್ನು ಪ್ರದರ್ಶನಕ್ಕಿಡಲಾಗಿದ್ದು, ಮುಖ್ಯವಾಗಿ ಜಗತ್ತಿನ ದುಬಾರಿ ಮಾವು 'ಮೀಯಾ ಜಾಕೀ' ಮಾವಿನ ಹಣ್ಣು ಈ ಮೇಳದ ವಿಶೇಷ ಆಕರ್ಷಣೆಯಾಗಿದೆ. 'ಮೀಯಾ ಜಾಕೀ' ಮಾವಿನ ತಳಿಯ ಸಸಿಗಳಿಗೆ ಬಹಳ ಬೇಡಿಕೆಯಿದ್ದು, ಈ ಸಸಿಗಳನ್ನು ಸಹ ಮೇಳದಲ್ಲಿ ಮಾರಾಟಕ್ಕಿಡಲಾಗಿದೆ ಎಂದರು.

ವೈಜ್ಞಾನಿಕವಾಗಿ ಹಣ್ಣುಗಳನ್ನು ಯಾವ ರೀತಿ ಮಾಗಿಸಬೇಕೆಂಬುವುದಕ್ಕೆ ಪ್ರಾತ್ಯಕ್ಷಿಕೆ ಮೂಲಕ ರೈತರಿಗೆ ಮಾಹಿತಿ ನೀಡಲಾಗುತ್ತಿದೆ. ನೈಸರ್ಗಿಕವಾಗಿ ಹಣ್ಣು ಮಾಡುವ ಬಗ್ಗೆಯೂ ಮಾಹಿತಿ ನೀಡಲಾಗುತ್ತಿದೆ. ಕೊಪ್ಪಳ ಜಿಲ್ಲೆಯ 6 ಸಾವಿರ ಹೆಕ್ಟರ್ ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತಿದೆ. ಈ ಮೇಳದಲ್ಲಿ ನಮ್ಮ ಜಿಲ್ಲೆಯ 10 ರಿಂದ 12 ತಳಿಯ ಮಾವಿನ ಹಣ್ಣುಗಳು ಮಾರಾಟಕ್ಕಿಡಲಾಗಿದ್ದು, ಕೊಪ್ಪಳ ಕೇಸರ್ ಮಾವಿನ ಹಣ್ಣಿಗೆ ಬೇಡಿಕೆ ಹೆಚ್ಚಿದೆ. ಮೇಳದಲ್ಲಿ ಉಪ್ಪಿನ ಕಾಯಿ ಮಾರಟಕ್ಕೂ ರೈತರು ಮುಂದೆ ಬಂದಿದ್ದಾರೆ ಹಾಗೂ ಇತರೆ ಮಾವಿನ ಉತ್ಪನ್ನಗಳನ್ನು ಸಹ ಪ್ರದರ್ಶನ ಮತ್ತು ಮಾರಾಟಕ್ಕಿವೆ. ಜಿಲ್ಲೆಯ ರೈತರು ಹಾಗೂ ಸಾರ್ವಜನಿಕರು ಈ ಮಾವು ಮೇಳದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಹೇಳಿದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕ, ಜಿಲ್ಲಾಧಿಕಾರಿ ನಲಿನ ಅತುಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಎಲ್. ಅರಸಿದ್ದಿ, ಮಾಜಿ ಸಂಸದರಾದ ಕರಡಿ ಸಂಗಣ್ಣ, ಕಳಕಪ್ಪ ಕಂಬಳಿ, ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಟಿ.ಎಸ್.ರುದ್ರೇಶಪ್ಪ, ತೆ-ೂಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಜೆ.ಶಂಕ್ರಪ್ಪ ಸೇರಿದಂತೆ ವಿವಿಧ ಇಲಾಖೆಗಳ ಹಾಗೂ ತೋಟಗಾರಿಕೆ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

# ಯುವ ಜನತೆಯ ಸೇವೆ ಭವಿಷ್ಯದ ಭಾರತದ ನಿಲುವು :ಶರಣಬಸಪ್ಪ ಬಿಳಿಎಲಿ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ತಾಲೂಕಿನ ಹಿರೇಸಿಂದೋಗಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ,ಹುಬ್ಬಳ್ಳಿ. ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ಭಾರತ ರತ್ನ ಶ್ರೀ ಅಟಲ್ ಬಿಹಾರಿ ವಾಜಪೇಯಿ ಕಾನೂನು ಮಹಾವಿದ್ಯಾಲಯ, ಕೊಪ್ಪಳ ಹಾಗೂ ಗ್ರಾಮ ಪಂಚಾಯತ್ ಹಿರೇಸಿಂದೋಗಿ ಇವರುಗಳ ಸಂಯುಕ್ತ ಆಶ್ರಯದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರ 2024 -25 ನೇ ಸಾಲಿನ ಕಾರ್ಯಕ್ರಮವನ್ನು ಉದ್ಘಾಟಿಸಿದ ಶ್ರೀ ಶರಣಪ್ಪ ಬಿಳಿಯಲಿ ಉಪನ್ಯಾಸಕರು ಎಸ್ ಸಿ ಕಾಲೇಜ್ ಮಾತನಾಡಿ ಯುವ ಜನತೆಯ ಸೇವೆ ಭವಿಷ್ಯ ಭಾರತದ ನಿಲವು. ಪ್ರತಿಯೊಬ್ಬ ಮನುಷ್ಯನು ತನ್ನಲ್ಲಿರತಕ್ಕಂತಹ ಕೀಳರಿಮೆಯನ್ನು ತೆಗೆದುಹಾಕಿ ಸಮಾಜದಲ್ಲಿ ಬದಲಾವಣೆ ಹಾದಿಯಲ್ಲಿ ಸಾಗಬೇಕಿದೆ ರಾಷ್ಟ್ರೀಯ ಸೇವಾ ಯೋಜನೆ ಕೊಡುಗೆ ದೇಶಕ್ಕೆ ಅಪಾರವಾಗಿದೆ ಆದ್ದರಿಂದ ನೀವುಗಳು ಕೂಡ ಎನ್‌ಎಸ್‌ಎಸ್‌ನಲ್ಲಿ ಒಳ್ಳೆಯ ರೀತಿಯ ಕಾರ್ಯ ಚಟುವಟಿಕೆಗಳನ್ನು ಮಾಡುವುದರ ಮೂಲಕ ಒಳ್ಳೆಯ ನಾಯಕತ್ವದ ಗುಣವನ್ನು ಬೆಳೆಸಿಕೊಳ್ಳಬೇಕು. ಮನುಷ್ಯನು ಜೀವನದಲ್ಲಿ ಒಳ್ಳೆಯ ಸಾಮರ್ಥ್ಯ ಕೌಶಲ್ಯ ನಮ್ಮನ್ನು ನಾವು ಬದಲಿಸಿಕೊಳ್ಳುವ ಪ್ರಯತ್ನವನ್ನು ಮಾಡಿದಾಗ ಮಾತ್ರ ಏನನ್ನು ಸಾಧಿಸಲು ಸಾಧ್ಯ .ಸ್ವಾಮಿ ವಿವೇಕಾನಂದರು ಸರ್ದಾರ್ ವಲ್ಲಭಾಯಿ ಪಟೇಲ್ ಮಹಾತ್ಮ ಗಾಂಧೀಜಿ ಅನೇಕ ಮಹನೀಯರ ಜೀವನದ ಆದರ್ಶಗಳನ್ನು ಕೂಡ ವಿದ್ಯಾರ್ಥಿಗಳಾದ ತಾವುಗಳು ಮೈಗೂಡಿಸಿಕೊಳ್ಳಬೇಕು ಎಂದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಸಂಧ್ಯಾ ಬಿ ಮಾದಿನೂರು ಹಿರಿಯ ವಕೀಲರು ಮಾತನಾಡಿ ಎತ್ತರದ ಗುರಿ ಸತತ ಪ್ರಯತ್ನ ಇದ್ದರೆ ಏನನ್ನು ಬೇಕಾದರೂ ಸಾಧಿಸಬಹುದು ಆದ್ದರಿಂದ ಪ್ರತಿಯೊಬ್ಬರೂ ಕೂಡ ದೊಡ್ಡ ಮಟ್ಟದ ಕನಸುಗಳನ್ನು ಕಾಣಬೇಕು ಅವುಗಳನ್ನು ಆದಷ್ಟು ಬೇಗನೆ ಈಡೇರಿಸಿಕೊಳ್ಳುವ ಪ್ರಯತ್ನ ನಿಮ್ಮದಾಗಬೇಕು ಜೀವನದಲ್ಲಿ ಅಸಾಧ್ಯವೆಂಬುವುದು ಯಾವುದು ಇಲ್ಲ ವಿದ್ಯಾರ್ಥಿಗಳೇ ನಿಮ್ಮ ಜೀವನದ ಬದಲಾವಣೆ ಸೂತ್ರದಾರವರು ನೀವೇ ಆಗಬೇಕು ಎಂದರು. ಬಸವರಾಜ್ ಎಸ್‌ಎಂ ಉಪ ಪ್ರಾಚಾರ್ಯರು ಹಾಗೂ ಎನ್ ಎಸ್ ಎಸ್ ಕಾರ್ಯಕ್ರಮಾಧಿಕಾರಿ ಅವರು ಪ್ರಾಸ್ತವಿಕವಾಗಿ ಮಾತನಾಡಿ ಏನ್ ಎಸ್ ಎಸ್ ನಡೆದು ಬಂದ ಹಾದಿಯ ಬಗ್ಗೆ ಸ್ವ ವಿವರವಾಗಿ ತಿಳಿಸಿಕೊಟ್ಟರು ಎಸ್ ಬಿ ಕುರಿ ಉಪ ಪ್ರಾಂಶುಪಾಲರು ಹಿರೇಶಿಂದೋಗಿ ಏಳು ಜನಗಳ ಶಿಬಿರ ಯಾವ ರೀತಿ ಇರಬೇಕು ಅದರಲ್ಲಿ ಸ್ವಯಂಸೇವಕರ ಕರ್ತವ್ಯ ಮತ್ತು ಕಾರ್ಯ ಚಟುವಟಿಕೆಗಳೇನು ಎಂಬುದರ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಕಾನೂನು ಮಹಾವಿದ್ಯಾಲಯ ಕೊಪ್ಪಳದ ಪ್ರಾಚಾರ್ಯರಾದ ಉಷಾದೇವಿ ಹಿರೇಮಠ ಮಾತನಾಡಿ ರಾಷ್ಟ್ರಕ್ಕೆ ರಾಷ್ಟ್ರೀಯ ಸೇವಾ ಯೋಜನೆಯ ಕೊಡುಗೆ ಅಪಾರವಾದದ್ದು ಪ್ರತಿಯೊಬ್ಬ ವಿದ್ಯಾರ್ಥಿಯು ಕೂಡ ಶಿಸ್ತು ಶ್ರದ್ಧೆ ಪ್ರಾಮಾಣಿಕತೆಯಿಂದ ಈ ಒಂದು ಶಿಬಿರವನ್ನು ಪೂರ್ಣಗೊಳಿಸಬೇಕಾಗಿದೆ ಪ್ರತಿಯೊಬ್ಬರೂ ಕೂಡ ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಬೇಕು ಎಂದರು. ಈ ಕಾರ್ಯಕ್ರಮದಲ್ಲಿ ನಾಗಲಿಂಗಪ್ಪ ಸಂಗಡಿಗರು ಪ್ರಾರ್ಥನಾ ಗೀತೆ ಹೇಳಿದರು, ರವಿ ಅಗೋಲಿ ಸ್ವಾಗತಿಸಿದರು, ಭರತ್ ಸಿ ಆರ್ ವಂದನೆಗೈದರು, ಕಿರಣ್ ಕುಮಾರ್ ನಿರೂಪಣೆಯನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ, ಮಲ್ಲಪ್ಪ ಗುಡದಪ್ಪನವರ್ ಮುಖ್ಯೋಪಾಧ್ಯಾಯರು ಹಿರೇ ಸಿಂದೋಗಿ, ಗ್ರಾಮ ಪಂಚಾಯತಿಯ ಸದಸ್ಯರಾದ ರೇವಪ್ಪ ಡೊಳ್ಳಿನ್ ಆನಂದ್ ಹೊಸಳ್ಳಿ, ಎಸ್ ಡಿ ಎಂ ಸಿ ಸದಸ್ಯರಾದ ಸುಭಾಷ್ ರೆಡ್ಡಿ ಶಿವಾನಂದ ಬಾರಕೇರ್, ಮರಳು ಸಿದ್ದಪ್ಪ, ಶಿಕ್ಷಕರಾದ ಮರಿಸ್ವಾಮಿ ಪೂಜಾರಿ, ಬಸವಂತಪ್ಪ, ಗ್ರಾಮದ ಗುರಿ ಹಿರಿಯರು , ರಾಷ್ಟ್ರೀಯ ಸೇವಾ ಯೋಜನೆ ಸ್ವಯಂಸೇವಕರು, ಕಾನೂನು ವಿದ್ಯಾರ್ಥಿಗಳು ಉಪಸ್ಥಿತರಿದ್ದರು,

# ಪತ್ರಕರ್ತರಗಾಗಿ ಶ್ರಮಿಸುತ್ತಿರುವ ಮಲ್ಲಿಕಾರ್ಜುನ ಬಂಗ್ಲೆ : ಮಹೇಶ ಕಲ್ಮಠ




ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಪತ್ರಕರ್ತರಿಗೆ ಭದ್ರತೆ ಹಾಗೂ ವಿವಿಧ ಸೌಲಭ್ಯಗಳನ್ನು ಕಲ್ಪಿಸಲು ಹಗಲಿರುಳು ಶ್ರಮಿಸುತ್ತಿರುವ ಕರ್ನಾಟಕದ ಏಕೈಕ ವ್ಯಕ್ತಿ ಮಲ್ಲಿಕಾರ್ಜುನ ಬಂಗ್ಲೆ ಎಂದು ಕೊಪ್ಪಳ ಜಿಲ್ಲೆಯ ಕುಕನೂರು ತಾಲೂಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಟನೆ ತಾಲೂಕ ಘಟಕದ ಗೌರವ ಅಧ್ಯಕ್ಷ ಮಹೇಶ ಕಲ್ಮಠ ಹೇಳಿದರು.

ಜಿಲ್ಲೆಯ ಕುಕನೂರು ಪಟ್ಟಣದ ಕಾರ್ಯನಿರತ ಪತ್ರಕರ್ತರ ಧ್ವನಿ ಕುಕನೂರು ತಾಲೂಕ ಘಟಕದ ಕಾರ್ಯಾಲಯದಲ್ಲಿ ಸದಸ್ಯರಿಗೆ 2025-26 ನೇ ಸಾಲಿನ ಸದಸ್ಯತ ನೊಂದಣಿ ಗುರುತಿನ ಚೀಟಿ ವಿಸ್ತರಿಸಿ ಮಹೇಶ್ ಕಲ್ಮಠ ಮಾತನಾಡುತ್ತಾ, ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಟನೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ ಬಂಗ್ಲೆ ಅವರ ನೇತೃತ್ವದಲ್ಲಿ ಇದೆ ಮೇ 24 ರಂದು ಪತ್ರಕರ್ತರ ಚಾರಿ ಟೇಬಲ್ ಟ್ರಸ್ಟ್ ನೋಂದಣಿಯಾಗಿದ್ದು ಪತ್ರಕರ್ತರಿಂದ ಪತ್ರಕರ್ತರಿಗಾಗಿ ನೋಂದಣಿಯಾಗಿರುವ ಟ್ರಸ್ಟ್ ಇದಾಗಿದ್ದು ಈ ಟ್ರಸ್ಟ್ ನಲ್ಲಿ ಜಮಾವನೆಗೊಳ್ಳುವ ಮೊತ್ತವನ್ನು ಪತ್ರಕರ್ತರ ತುರ್ತು ಆರೋಗ್ಯ ಪರಿಸ್ಥಿತಿಯ ಔಷಧೋಪಚಾರ ಸೇರಿದಂತೆ ತುರ್ತು ಪರಿಸ್ಥಿತಿಯ ಅವಶ್ಯಕತೆಗಳಿಗೆ ಸಹಾಯ ಮಾಡುವ ನಿಟ್ಟಿನಲ್ಲಿ ಮತ್ತು ಅಕಾಲಿಕ ಮೃತ ಹೊಂದಿದ ಪತ್ರಕರ್ತರ ಕುಟುಂಬಕ್ಕೆ ಅಲ್ಪಮಟ್ಟಿದ ಸಹಾಯ ಹಸ್ತ ಚಾಚುವ ಉದ್ದೇಶವನ್ನು ಈ ಟ್ರಸ್ಟ್ ಹೊಂದಿದ್ದು ಇದನ್ನು ಕಾರ್ಯರೂಪಕ್ಕೆ ತಂದಂತಹ ಮಲ್ಲಿಕಾರ್ಜುನ ಬಂಗ್ಲೆ ಅವರಿಗೆ ರಾಜ್ಯದ ಪ್ರತಿಯೊಬ್ಬ ಪತ್ರಿಕರ್ತರ ವತಿಯಿಂದ ಕೃತಜ್ಞತೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಈ ವೇಳೆಯಲ್ಲಿ ಪ್ರಮುಖರಾದ ವೀರಯ್ಯ ಕುರ್ತಕೋಟಿ ಮಾತನಾಡುತ್ತಾ ಪತ್ರಕರ್ತರ ಹಬ್ಬವಾದ ಕಾರ್ಯನಿರತ ಪತ್ರಕರ್ತರ ಧ್ವನಿ ಮೂರನೇ ರಾಜ್ಯ ಮಟ್ಟದ ಸಮ್ಮೇಳನವನ್ನು ದಿನಾಂಕ 24ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದು ಎಲ್ಲಾ ಪತ್ರಕರ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ವಿನಂತಿಸಿದರು

ಈ ಸಂದರ್ಭದಲ್ಲಿ ಕಾರ್ಯನಿರತ ಪತ್ರಕರ್ತರ ಧ್ವನಿ ಕುಕನೂರು ತಾಲೂಕ ಘಟಕದ ಅಧ್ಯಕ್ಷ ಸುನಿಲ್ ಕುಮಾರ ಮಠದ, ಉಪಾಧ್ಯಕ್ಷ ಚಂದ್ರು ಭಾನಪುರ, ಪ್ರಧಾನ ಕಾರ್ಯದರ್ಶಿ ವೀರಯ್ಯ ವಿ ಹಿರೇಮಠ, ಪ್ರಮುಖರಾದ ವಿಶ್ವನಾಥ ಪಟ್ಟಣಶೆಟ್ಟಿ, ಮುತ್ತಯ್ಯ ತೋಂಟದಾರ್ಯ ಮಠ, ಮಲ್ಲಯ್ಯ ಗದಗಿನ, ವಿಶ್ವನಾಥ ಕೋಟೆ ಸೇರಿದಂತೆ ಇನ್ನೇತರರು ಪಾಲ್ಗೊಂಡಿದ್ದರು.

# ಸಂಶೋಧನಾ ಚಟುವಟಿಕೆಯಲ್ಲಿ ಭಾಗಿಯಾಗಿ-ಪ್ರೊ.ನಂದಿಕೋಲಮಠ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮೇ.13-ಸೃಜನಶೀಲ ಸಂಶೋಧನಾ ಚಟುವಟಿಕೆಗಳು ಶೈಕ್ಷಣಿಕಪರಿಸರದಲ್ಲಿ ಅವಶ್ಯಕವಾಗಿದೆ ಎಂದು ಪ್ರೊ.ಜಿ.ಐ.ನಂದಿಕೋಲಮಠ ಹೇಳಿದ್ದಾರೆ.

ತಾಲೂಕಿನಬೇವೂರಗ್ರಾಮದಪಿ.ಎಸ್. ಸಜ್ಜನಕಲಾ ಮಹಾವಿದ್ಯಾಲಯದಲ್ಲಿ ಸೋಮವಾರ ಜರುಗಿದ ಬಿಎ 6 ನೇ ಸೆಮಿಸ್ಟರ್ ವಿದ್ಯಾರ್ಥಿಗಳ ಯೋಜನಾ ಕಾರ್ಯ ಮಂಡನೆಯ ಮೌಖಿಕಸಂದರ್ಶನಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಅವರು ಮಾತನಾಡಿದರು.

ಪದವಿ ಹಂತದ ವಿದ್ಯಾಥಿ9ಗಳಿಗೆ ಯೋಜನಾಕಾಯ9ನಿಗದಿಪಡಿಸಿರುವುದು ಸಂಶೋಧನಾ ಕ್ಷೇತ್ರದತ್ತ ಆಸಕ್ತಿ ಮೂಡಲುನೆರವಾಗಿದೆ.ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದು ಸಂಶೋಧನ ಕ್ಷೇತ್ರದಲ್ಲಿ ಸಾಧನೆ ಮಾಡಬೇಕು ಎಂದನಂದಿಕೋಲಮಠ, ಡಾ.ಎಂ.ಎಂ.ಕಲಬುರ್ಗಿ ಅವರ ಸಂಶೋಧನಾ ಕ್ಷೇತ್ರದ ಸೇವೆ ಗಮನಾರ್ಹ ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯ ಜಗದೀಶ ಭೈರಮಟ್ಟಿ, ವಿದ್ಯಾಥಿ9ಗಳು ಪ್ರಾದೇಶಿಕ ನೆಲೆಯ ವಿಷಯಗಳನ್ನುಆಯ್ಕೆಮಾಡಿಕೊಂಡು ಸಮಾಜಕ್ಕೆ ಕೊಡುಗೆ ಎನಿಸುವ ಸಂಶೋಧನಾ ಚಟುವಟಿಕೆಗಳಲ್ಲಿ ಭಾಗಿಯಾಗಬೇಕು ಎಂದು ಹೇಳಿದರು.

ಉಪನ್ಯಾಸಕರಾದ ಎಸ್. ಎಸ್.ಆದಾಪೂರ, ಬಿ.ಬಿ.ಬೇವೂರ, ಎಸ್.ಬಿ.ಹಂಚಿನಾಳ, ಎ.ಎಂ. ಗೊರಚಿಕ್ಕನವರ, ಎನ್.ಎಸ್.ಎಸ್. ಯೋಜನಾಧಿಕಾರಿ ಜಿ.ಎಸ್.ಗೌಡರ, ಡಿ.ವಾಯ್.ಬುಡ್ಡಿಯವರ,ನಾಗಲಿಂಗೇಶ ಬೆಣ್ಣೂರ ಉಪಸ್ಥಿತರಿದ್ದರು.

ಮಹಾವಿದ್ಯಾಲಯದ ವಿವಿಧ ವಿಭಾಗಗಳ ವಿದ್ಯಾರ್ಥಿಗಳು ತಾವು ಆಯ್ಕೆಮಾಡಿಕೊಂಡ ಯೋಜನಾ ಕಾರ್ಯವನ್ನು ಮಂಡಿಸಿ ಮೌಖಿಕ ಸಂದರ್ಶನದಲ್ಲಿ ಭಾಗಿಯಾದರು.

# ಸಾಮಾಜಿಕ ಲೆಕ್ಕಪರಿಶೋಧನೆ ಯಶಸ್ವಿಗೆ ಸಿಇಓ ಕುರೇರ ಕರೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮೇ.13-ಪ್ರಸಕ್ತ ಸಾಲಿನ ಸಾಮಾಜಿಕ ಲೆಕ್ಕಪರಿಶೋಧನೆ ಕಾರ್ಯ ಯಶಸ್ವಿಗೊಳಿಸಲು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಅನುಷ್ಠಾನ ಅಧಿಕಾರಿಗಳಿಗೆ ಕರೆ ನೀಡಿದರು.

ಜಿಲ್ಲಾ ಪಂಚಾಯತ ನೂತನ ಸಭಾಭವನದಲ್ಲಿ ಮಂಗಳವಾರ ಸಾಮಾಜಿಕ ಪರಿಶೋಧನೆ ನಿರ್ದೇಶನಾಲಯ,ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ ಹಾಗೂ ಜಿಲ್ಲಾ ಪಂಚಾಯತ ಸಹಯೋಗದಲ್ಲಿ ಜರುಗಿದ ಸಾಮಾಜಿಕ ಲೆಕ್ಕಪರಿಶೋಧನೆಯ ಗ್ರಾಮಸಭೆಯ ಅಧ್ಯಕ್ಷತೆ ವಹಿಸುವ ನೋಡಲ್ ಅಧಿಕಾರಿಗಳ ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಾಮಾಜಿಕ ಲೆಕ್ಕಪರಿಶೋಧನೆ ಅನುಷ್ಠಾನ ಕಾಮಗಾರಿಗಳ ಕಡತಗಳನ್ನು ನಿಗದಿತ ಸಮಯದಲ್ಲಿ ಒದಗಿಸುವುದು ಕಡ್ಡಾಯವಾಗಿದ್ದು,ನಿಗದಿತ ಅವಧಿಯಲ್ಲಿ ಬರದೇ ಇದ್ದಲ್ಲಿ ವಸೂಲಾತಿಗೆ ಕ್ರಮಕೈಗೊಳ್ಳುವುದಾಗಿ ಕಟ್ಟುನಿಟ್ಟಿನ ಸೂಚನೆ ನೀಡಿದರಲ್ಲದೇ, ಅನುಷ್ಠಾನ ಕಾರ್ಯದ ಪೂರ್ವದಲ್ಲಿ ಅದಕ್ಕೆ ಅನುಗುಣವಾಗಿ ಪೂರ್ವ ಸಿದ್ದತೆ ಮಾಡಿಕೊಳ್ಳಬೇಕು. ಗ್ರಾಮಸಭೆಗೆ ಸೂಚಿಸಿದ ಅಧಿಕಾರಿಗಳು ಕಡ್ಡಾಯವಾಗಿ ಹಾಜರಾಗಬೇಕು.ಗೈರು ಹಾಜರಾಗುವವರು ಪೂರ್ವಾನುಮತಿ ಪಡೆಯುವುದು ಕಡ್ಡಾಯ ಎಂದರು. ಕಳೆದ 2024-25ನೇ ಸಾಲಿನ ಸಾಮಾಜಿಕ ಲೆಕ್ಕಪರಿಶೋಧನೆ ಕಾರ್ಯ ಪ್ರಾರಂಭಿಸಲಾಗುತ್ತಿದೆ. ಪ್ರಸಕ್ತ ಸಾಲಿನ ಅನುಷ್ಠಾನ ಕಾರ್ಯ ಜೂನ್ ಮಾಹೆಯಿಂದ ವೇಳಾಪಟ್ಟಿಗೆ ಅನುಗುಣವಾಗಿ ಪ್ರಾರಂಭವಾಗಲಿದೆ ಎಂದು ಜಿ.ಪಂ ಸಿಇಓ ತಿಳಿಸಿದರು.

ತರಬೇತಿಯಲ್ಲಿ ಮಹಾತ್ಮಾಗಾಂಧಿ ಎನ್‌ಆರ್‌ಇಜಿಎ ಕುರಿತು ಉಪಕಾರ್ಯದರ್ಶಿ ಎನ್. ವಾಯ್.ಬಸರಿಗಿಡದ ತರಬೇತಿ ನೀಡಿದರೆ, ರಾಜ್ಯ ಹಣಕಾಸು ಆಯೋಗದ ಅನುದಾನದ ಸಾಮಾಜಿಕ ಲೆಕ್ಕಪರಿಶೋಧನೆ ಕುರಿತು ಜಿ.ಪಂ ಮುಖ್ಯ ಲೆಕ್ಕಾಧಿಕಾರಿ ಸಿದ್ದರಾಮೇಶ್ವರ ಉಕ್ಕಲಿ ತರಬೇತಿ ನೀಡಿದರು. 15ನೇ ಹಣಕಾಸು ಆಯೋಗದ ಅನುದಾನ ಸಾಮಾಜಿಕ ಲೆಕ್ಕಪರಿಶೋಧನೆ ಕುರಿತು ಮುಖ್ಯ ಯೋಜನಾಧಿಕಾರಿ ಪುನಿತ್ ಆರ್, ಸಮಗ್ರ ಶಿಕ್ಷಣ ಮತ್ತು ಎಂ.ಡಿ.ಎಂ ಯೋಜನೆಯ ಸಾಮಾಜಿಕ ಪರಿಶೋಧನೆ ಕುರಿತು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಚ್.ಜಿ.ಮಿರ್ಜಿ ಹಾಗೂ ಸಾಮಾಜಿಕ ಪರಿಶೋಧನೆ, ಗ್ರಾಮಸಭೆಯ ಅಧ್ಯಕ್ಷತೆ ವಹಿಸಿರುವ ನೋಡಲ್ ಅಧಿಕಾರಿಗಳ ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ಸಾಮಾಜಿಕ ಪರಿಶೋಧನೆಯ ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕ ಬಸವರಾಜ ಔರಸಂಗ ತರಬೇತಿ ನೀಡಿದರು. ತರಬೇತಿ ಕಾರ್ಯಾಗಾರದಲ್ಲಿ ವಿವಿಧ ಯೋಜನೆಗಳ ಅನುಷ್ಠಾನ ಇಲಾಖೆಯ ಅಧಿಕಾರಿಗಳು ಪಾಲ್ಗೊಂಡಿದ್ದರು.

## ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ ಪ್ರತಿಮೆ ಭವ್ಯ ಮೇರವಣಿಗೆ,



ಮಲ್ಲಮ್ಮ ನುಡಿ ವಾರ್ತೆ

ಶಹಾಪುರ: ನಗರದ ಹಳೆ ಬಸ್ ನಿಲ್ದಾಣದ ಅವರಣದಲ್ಲಿ ಪ್ರತಿಸ್ಥಾಪಿಸುವ ಹಿನ್ನಲೆಯಲ್ಲಿ ಸಂವಿಧಾನ ಶಿಲ್ಪಿ ಡಾ, ಬಿ,ಆರ್,ಅಂಬೇಡ್ಕರವರ ಪ್ರತಿಮೆಗೆ ಸಣ್ಣ ಕೈಗಾರಿಕಾ ಮತ್ತು ಸಾರ್ವಜನಿಕ ಉದ್ಯಮಗಳ ಮಂತ್ರಿ ಶರಣಬಸಪ್ಪಗೌಡ ದರ್ಶನಾಪುರವರು ಸ್ವಾಗತಿಸಿದರು, ಪ್ರತಿಮೆಗೆ ಭವ್ಯ ಮೆರವಣಿಗೆಗೆ ಚಾಲನೆ ನೀಡಿದರು, ಸಿಬಿ, ಕಮಾನದಿಂದ ಹಳೆ ಬಸ್ ನಿಲ್ದಾಣದವರೆಗೂ ಮೇರವಣಿಗೆ ನಡೆಯಿತು, ಈ ಸಮಯದಲ್ಲಿ ಅನೇಕ ದಲಿತಪರ ಸಂಘಟನೆಗಳು ಮುಖಂಡರು ಹಿರಿಯರು ಅಹಿಂದ ನಾಯಕರು. ಭಾಗವಹಿಸಿದ್ದರು,

## ಕೃಷಿ ಕೂಲಿಕಾರರು ಕಾರ್ಮಿಕರ ಸಂಘಟನೆ ವತಿಯಿಂದ ಮೇ 20 ರಂದು ರಸ್ತಾರೋಕ



ಮಲ್ಲಮ್ಮ ನುಡಿ ವಾರ್ತೆ

ಶಹಾಪೂರ : ಕಾರ್ಮಿಕರ ಮಸ್ಕರ ಪ್ರತಿಭಟನೆ ಮಾಡಲು (ಸ್ಥಳ ಭೀಮರಾಯನ ಗುಡಿ ಬಾಪು ಗೌಡ ಚೌಕ್).ಶಹಪುರ್ ತಾಲೂಕಿನ ಸಗರ ಗ್ರಾಮದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ಗ್ರಾಮ ಘಟಕ ಸಗರದಲ್ಲಿ. ಸಭೆ ಮಾಡಲಾಯಿತು ತಾಲೂಕ ಅಧ್ಯಕ್ಷರಾದ ಭೀಮಣ್ಣ ಟಪ್ಪೇದಾರ

ತಾಲೂಕ ಕಾರ್ಯದರ್ಶಿಗಳಾದ ಭೀಮರಾಯ ಪೂಜಾರಿ ಕಾರ್ಮಿಕರಿಗೆ 12 ಗಂಟೆ ದುಡಿಸಿಕೊಳ್ಳುವುದು ವಿರೋಧಿಸುತ್ತೇವೆ ಕಾರ್ಮಿಕರ ಕಾನೂನು ಹೇಳಿದ ಹಾಗೆ 8ಗಂಟೆ ಕೆಲಸ 8ಗಂಟೆ ವಿಶ್ರಾಂತಿ ಎಂಟು ಗಂಟೆ ನಿದ್ರೆ ಮಾಡಬೇಕು ಮತ್ತು ರಾಷ್ಟ್ರೀಯ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ ಹಣ ಬಾಕಿ ಉಳಿಸಿಕೊಂಡಿರುವ960 ಕೋಟಿ ಹಣ ಕೇಂದ್ರ ಸರ್ಕಾರ ದಕ್ಷಿಣ ದುಡಿದ ಕೂಲಿಕಾರರಿಗೆ ಕೂಲಿ ಸಿಗಬೇಕು. ಉದ್ಯೋಗ ಖಾತ್ರಿಯಲ್ಲಿ ಒಂದು ದಿನಕ್ಕೆ 600 ರೂಪಾಯಿ ಕೂಲಿ ಹೆಚ್ಚಿಸಬೇಕು. ಉದ್ಯೋಗ ಖಾತ್ರಿ ಮಾನವ ದಿನಗಳು 200 ನೂರು ದಿನಕ್ಕೆ ಹೆಚ್ಚಿಸಬೇಕು. ಬಡ ಕೂಲಿಕಾರರಿಗೆ ತಕ್ಷಣ ಎಲ್ಲಾ ಪಂಚಾಯಿತಿಗಳಲ್ಲಿ ನಿವೇಶ ನಗರ ಬಂದಿದ್ದು ಬಡ ಕೂಲಿಕಾರ ಮತ್ತು ರೈತರಿಗೆ ತಕ್ಷಣ ಜಿಪಿಎಸ್ ಮಾಡಿಸುವುದರ ಮುಖಾಂತರ ಆಶ್ರಯ ಮನೆ ಒದಗಿಸಿಕೊಡಬೇಕು. ಆಗ್ರಹಿಸಿದರು. ಗ್ರಾಮದ ಮುಖಂಡರಾದ ಮೀನಾಕ್ಷಿ ಭೀಮರಾಯ ತಿಪ್ಪಮ್ಮ ಗೋಪಮ್ಮ ನಾಗಣ್ಣ ಹಣಮಂತ ಭಜಂತ್ರಿ ಇತರರು ಇದ್ದರು.

# ರಾಜ್ಯ ಕಾಂಗ್ರೆಸ್ ಸರ್ಕಾರ ಒಳ ಮೀಸಲಾತಿ ಜಾರಿಗೆ ಬದ್ದ-ಸಚಿವ ತಿಮ್ಮಾಪುರ.



ಮಲ್ಲಮ್ಮ ನುಡಿ ವಾರ್ತೆ

ಶಹಾಪುರ:ರಾಜ್ಯದಲ್ಲಿಕಳೆದಮೂರು ದಶಕಗಳಿಂದ ಮಾದಿಗ ಹೊರಾಟ ಸಮಿತಿ ನೇತೃತ್ವದಲ್ಲಿ ನಡೆಯುತ್ತಿರುವ ಒಳ ಮಿಸಲಾತಿ ಜಾರಿಗೆ ತರುವಲ್ಲಿ ರಾಜ್ಯ ಸಿದ್ರಾಮಯ್ಯನವರ ಸರ್ಕಾರ ಬದ್ದವಿದೆ, ಚುನಾವಣೆಯಲ್ಲೆ ಪ್ರಣ್ಣಾಳಿಕೆಯಲ್ಲಿ ಒಳ ಮಿಸಲಾತಿ ಕುರಿತು ಕಾಂಗ್ರೆಸ್ ಸರ್ಕಾರ ಅಜಂಡಾ ಹೋರಡಿಸಿತ್ತು, ಆದರೆ ಇಂದು ಕಡಿಮೆ ಅವಧಿಯಲ್ಲೆ ಮತ್ತೊಂದು ಸಮಿಕ್ಷೆ ಮಾಡಿ ಶಿಘ್ರದಲ್ಲೆ ಒಳ ಮಿಸಲಾತಿ ಮುಖ್ಯಮಂತ್ರಿ ಸಿದ್ರಾಮಯ್ಯನವರು ಜಾರಿಗೆ ತರುತ್ತಾರೆ ಎಂದು ಅಬಕಾರಿ ಹಾಗೂ ಬಾಗಲಕೋಟ ಉಸ್ತುವಾರಿ ಮಂತ್ರಿ ಆರ್,ಬಿ,ತಿಮ್ಮಾಪುರೆ ತಿಳಿಸಿದರು, ಅವರು ಶಹಾಪುರ ನಗರದ ಸಿ,ಪಿಎಸ್,ಮೈಧಾನದಲ್ಲಿ ನಡೆದ ಡಾ, ಬಿ,ಆರ್, ಅಂಬೇಡ್ಕರ ರವರ 134 ನೆಯ ಜಯಂತಿ ಹಾಗೂ ಹಸಿರು ಕ್ರಾಂತಿ ಹರಿಕಾರ ಡಾ,ಬಾಬುಜಗಜೀವನರಾಂರವರ 118 ನೆಯ ಜಯಂತಿ ಅಂಗವಾಗಿ ಮಾದಿಗರ ಜನ ಜಾಗ್ರತಿ ಸಮಾವೇಶ ಉದ್ಘಾಟಿಸಿ ಮಾತನಾಡಿದರು, ಮುಂದುವರೆದು ಮಾತನಾಡಿದ ಅವರು, ಹಿಂದುತ್ವದಲ್ಲೆ ಜಾತಿ ವೈವಿಧ್ಯತೆಗಳಿದ್ದು ಶೋಷಿತ ಸಮಾಜ ಇನ್ನೂ ಅಲ್ಲಗಳೆಯಲಾಗುತ್ತಿದೆ, ಸಂವಿಧಾನ ಶಿಲ್ಪಿಡಾ,ಬಾಬಾಸಾಹೇಬರ ನೀಡಿದ ರಾಷ್ಟ್ರ ಸಂವಿಧಾನವನ್ನು ಸಮರ್ಪಕವಾಗಿ ಜಾರಿಯಾದಲ್ಲಿ ಶೋಷಿತರು ಸಮೃದ್ದಿಯಾಗಲು ಸಾಧ್ಯವಾಗುತ್ತದೆ. ಭಾವ ಚಿತ್ರಗಳ ಮೇರವಣಿಗೆಳಿಂದ ಅಭಿವೃದ್ದಿ ಸಾಧ್ಯ, ಆತ್ಮವಲೋಕನಮಾಡಿಕೊಂಡು ಸಮಾಜದ ಎಳ್ಗೆಗೆ ಶ್ರಮಿಸಬೇಕಾಗಿದೆ ಎಂದು ಅವರು ಮಾರ್ಮಿಕವಾಗಿ ನುಡಿದರು, ಯಾದಗಿರಿ ಜಿಲ್ಲಾ ಉಸ್ತುವಾರಿ ಮಂತ್ರಿಗಳಾದ ಶರಣಬಸಪ್ಪಗೌಡ ಮಾತನಾಡಿ, ಮಾಹಾಪುರುಷರ ಜಯಂತಿಗಳಿಂದ ಮಾಹಾತ್ಮರ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕಿದೆ,ಸಂವಿಧಾನ ಇರುವವರೆಗೂ ಡಾ,ಬಾಬಾಸಾಹೇಬರ ಹೆಸರು ಹಜರಾಮರವಾಗಿರುತ್ತದೆ, ಎಂದು ಸಚಿವ ದರ್ಶನಾಪುರವರು ಅಂದು ಪ್ರಧಾನಿ ದಿವಂಗತ ಲಾಲಬಹದ್ದೂರ ಶಾಸ್ತ್ರಿಯವರನ್ನು ನೆನೆಯಬೇಕಿದ್ದು ಅಂದು ಕೆಂದ್ರದಲ್ಲಿ ಉಪ ಪ್ರಧಾನಿಗಳಾಗಿದ್ದ ಡಾ,ಬಾಬು ಜಗಜೀವನರಾಂರವರು ಹಸಿರು ಕ್ರಾಂತಿಯನ್ನೆಬ್ಬಿಸಿಜೈಜವಾನಜೈಕಿಸಾನ ಎಂದು ಉಸಿರುನ್ನಾಗಿಸಿದರು, ಎಂದರು, ದಿವ್ಯ ಸಾನಿಧ್ಯ ವಹಿಸಿದ ಪೂಜ್ಯ ಸಿದ್ದಬಸವ ಕಬೀರಾನಂದ ಮಾಹಾಸ್ವಾಮೀಗಳು ಮಾತನಾಡಿ,ಡಾ,ಬಾಬಾಸಾಹೇಬರ ಸಂವಿಧಾನ ಪಶು ಪಕ್ಷಿಗಳಿಗೂ ಅನ್ವಯ ಮಾಡಿದ್ದು ಅಲ್ಲದೆ ಸಮಗ್ರ ಶೋಷಿತರನ್ನು ಜಾಗ್ರತಿ ಮೂಡಿಸುವ ಅವಶ್ಯಕವಾಗಿದೆ ಎಂದು ಅವರು ತಿಳಿಸಿದರು,ಸಮಾರಂಭದಲ್ಲಿ ರಾಜ್ಯ ಒಳ ಮೀಸಲಾತಿ ಒಕ್ಕೂಟದ ಸಂಚಾಲಕರಾದ ಬಸವರಾಜ ಕೌತಾಳ, ಒಳ ಮೀಸಲಾತಿ ಹೋರಟಗಾರ ಅಂಬಣ್ಣ ಆರೋಲಿಕರ್, ಮಾತನಾಡಿದರು. ಕಾಂಗ್ರೆಸ್ ಅಧ್ಯಕ್ಷರಾದ ಶಿವುಮಾಂತಪ್ಪ ಚಂದಾಪುರ,ಶರಣಪ್ಪಸಲಾದಪುರ, ಸಲೀಮ ಸಂಗ್ರಾಂ., ನೀಲಕಂಠ ಬಡಿಗೇರ, ಸಣ್ಣ ನಿಂಗಣ್ಣ ನಾಯ್ಕೊಡಿ, ಮಾಹಾದೇವಪ್ಪ ಸಾಲಿಮನಿ, ಆರ್,ಚೆನ್ನಬಸ್ಸು, ಗೌಡಪ್ಪಗೌಡ ಆಲ್ದಾಳ, ಮರೆಪ್ಪ ಪ್ಯಾಟಿ, ಆಗಮಿಸಿದ್ದರು, , ನಗರ ಆಶ್ರೆಯ ಸಮಿತಿ ಅಧ್ಯಕ್ಷರಾದ ವಸಂತ ಸುರಪುರಕರ್,ಸಮಾಜದ ಮುಖಂಡರಾದ ಶಾಂತಪ್ಪ ಕಟ್ಟಿಮನಿ, ಶಂಕ್ರಪ್ಪ ಶಾಣೆನೋರ್, ಶರಣಪ್ಪ ಕ್ಯಾತನಾಳ. ಅಂಬ್ರೇಶ ಬಿಲ್ಲಾವ್, ವಿಜಯಕುಮಾರ ಎದರಮನಿ, ಭೀಮರಾಯ ಕಾಂಗ್ರೆಸ್ ಶಿವುಕುಮಾರ ದೊಡ್ಡಮನಿ, ಸೇರಿದಂತೆ ಅನೇಕ ಗಣ್ಯರು ಹಿರಿಯರು ವಿವಿಧ ಗ್ರಾಮಗಳಿಂದ ಆಗಮಿಸಿದ ಸಮಾಜದ ಮುಖಂಡರು ಕಾರ್ಯಕರ್ತರು ಭಾಗವಹಿಸಿದ್ದರು,ರುದ್ರಪ್ಪಹುಲಿಮನಿ ಪ್ರಾಸ್ತಾವಿಕವಾಗಿ ಮಾತನಾಡಿದರು, ವೆಂಕಟೇಶ ಆಲೂರ ಕಾರ್ಯಕ್ರಮ ನೀರೂಪಿಸಿದರು, ಪರಶುರಾಮ ಮಹಲರೋಜಾ ಸ್ವಾಗತಿಸಿದರು, ಕೊನೆಯಲ್ಲಿ ಜಿಲ್ಲಾ ಕಾಂಗ್ರೆಸ್ ವಕ್ತಾರ ಮಲ್ಲಪ್ಪ ಹುಳುಂಡಗೇರಿ ಸರ್ವರನ್ನು ವಂದಿಸಿದರು.



ಚಿಟಗುಪ್ಪ ತಾಲೂಕಿನ ತಾಳಮಡಗಿ ಗ್ರಾಮದ ಗ್ರಾಪಂ. ಕಚೇರಿಯಲ್ಲಿ ಭಗವಾನ್ ಗೌತಮ್ ಬುದ್ಧರ ಜಯಂತಿ ಕಾರ್ಯಕ್ರಮ ಅದ್ದೂರಿಯಾಗಿ ಜರುಗಿತು. ಪಿಡಿಒ ಅಮೃತರಾವ, ಪರಿಸರವಾದಿ ಶೈಲೇಂದ್ರ ಕಾವಡಿ ಸೇರಿದಂತೆ ಸಿಬ್ಬಂದಿಗಳು ಹಾಗೂ ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

## ತಾಳಿಕೋಟಿ ಪಟ್ಟಣಕ್ಕೆ ಲೋಕಾಯುಕ್ತ ಎಸ್ಪಿ ಟಿ.ಮಲ್ಲೇಶ ಭೇಟಿ



ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ: ವಿಜಯಪುರ ಲೋಕಾಯುಕ್ತ ಎಸ್ಪಿ ಟಿ.ಮಲ್ಲೇಶ ಇವರು ಸಾರ್ವಜನಿಕರ ಕೆಲವು ದೂರುಗಳ ಹಿನ್ನೆಲೆಯಲ್ಲಿ ಮಂಗಳವಾರ ಪಟ್ಟಣಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಅವರು ಪಟ್ಟಣದ ಗಡಿ ಸೋಮನಾಳ ರಸ್ತೆಯಲ್ಲಿರುವ ಹುಡ್ಕೋ ಕಾಲೋನಿಯ ನಿವಾಸಿಗಳಿಂದ ಅಲ್ಲಿ ವಿದ್ಯುತ್ ತೊಂದರೆ ಹಾಗೂ ರಸ್ತೆಯ ಎರಡೂ ಬದಿಯಲ್ಲಿ ಬೆಳೆದ ಮುಳ್ಳುಕಂಟಿಗಳಿಂದ ನಡೆದಾಡಲು ತೊಂದರೆಯಿದ್ದು ಇದನ್ನು ದೂರೀಕರಿಸುವಂತೆ ದೂರು ನೀಡಿದ್ದರು, ಇದರ ಕುರಿತು ಸ್ಥಳದಲ್ಲಿದ್ದ ಪುರಸಭೆ ಮುಖ್ಯಾಧಿಕಾರಿ ಮೋಹನ ಜಾಧವ ಇವರಿಗೆ ಕ್ರಮವಹಿಸಲು ಸೂಚನೆ ನೀಡಿದರು. ಮುಖ್ಯಾಧಿಕಾರಿಗಳು ಒಂದು ತಿಂಗಳ ಕಾಲಾವಕಾಶ ತೆಗೆದುಕೊಂಡು ಸಮಸ್ಯೆ ಪರಿಹಾರ ಮಾಡುವುದಾಗಿ ತಿಳಿಸಿದರು. ಅಲ್ಲಿಂದ ಲೋಕಾಯುಕ್ತರು ಅಂಬೇಡ್ಕರ್ ಸರ್ಕಲ್ ಹತ್ತಿರ ಇರುವ ಎಸ್ ಲಾಂಜ್ ಹೋಟೆಲ್ ಪಕ್ಕದ ರಸ್ತೆಯನ್ನು ವ್ಯಕ್ತಿಯೊಬ್ಬರು ಬಂದ್ ಮಾಡಿದ ಸಮಸ್ಯೆ ಕುರಿತು ಅಧಿಕಾರಿಗಳೊಂದಿಗೆ ಮಾತನಾಡಿ ಆದಷ್ಟು ಬೇಗ ಸಾರ್ವಜನಿಕರಿಗೆ ರಸ್ತೆಯ ಅನಕೂಲ ಮಾಡಿಕೊಡಬೇಕೆಂದು ತಿಳಿಸಿದರು. ನಂತರ ಅವರು ದೇವರ ಹಿಪ್ಪರಗಿ ಮಾರ್ಗದಲ್ಲಿರುವ ಜಾನಕಿ ಹಳ್ಳದ ಒತ್ತುವರಿ ದೂರಿನ ಕುರಿತು ಸ್ಥಳಕ್ಕೆ ಭೇಟಿ ನೀಡಿ ದೂರುದಾರ ಹಾಗೂ ಅಧಿಕಾರಿಗಳಿಂದ ಸಂಪೂರ್ಣ ಮಾಹಿತಿ ಪಡೆದುಕೊಂಡು ಆದಷ್ಟು ಬೇಗ ಈ ಕುರಿತು ಕ್ರಮವಹಿಸಲಾಗುವುದೆಂದು ತಿಳಿಸಿದರು. ಈ ಸಮಯದಲ್ಲಿ ಲೋಕಾಯುಕ್ತ ಡಿಎಸ್ಪಿ ಆನಂದ ಆಸ್ನೋಟಿಕರ, ಪುರಸಭೆ ಮುಖ್ಯಾಧಿಕಾರಿ ಮೋಹನ ಜಾಧವ,ಸಿದ್ದನಗೌಡ ಪಾಟೀಲ ನಾವದಗಿ, ಪುರಸಭೆ ಸದಸ್ಯ ಮಲ್ಲಿಕಾರ್ಜುನ್ ಪಟ್ಟಣಶೆಟ್ಟಿ ದೂರುದಾರ ಸಿರಸಕುಮಾರ ಹಜೇರಿ ಹಾಗೂ ಪುರಸಭೆ ಸಿಬ್ಬಂದಿಗಳು ಇದ್ದರು.

## ಆರೋಗ್ಯರಕ್ಷಣೆಯ ಸೇವೆಯಲ್ಲಿ ನರ್ಸಗಳ ಪಾತ್ರ ಅಗಾಧವಾಗಿದೆ:ಡಾ ರುದ್ರಗೌಡ ಪಾಟೀಲ್



ಮಲ್ಲಮ್ಮ ನುಡಿ ವಾರ್ತೆ

ಲಿಂಗಸಗೂರು:ಆರೋಗ್ಯ ಸೇವೆಯಲ್ಲಿ ವೈದ್ಯರಾದವರು ಚಿಕಿತ್ಸೆ ಸೂಚಿಸಿದರೆ ಅದನ್ನು ಸರಿಯಾಗಿ ರೋಗಿಗೆ ತಲುಪಿಸಿ ಆರೋಗ್ಯರಕ್ಷಣೆಯ ಸೇವೆಯಲ್ಲಿ ನರ್ಸಗಳ ಪಾತ್ರ ಅಗಾಧವಾಗಿದೆ ಎಂದು ಸಾರ್ವಜನಿಕ ಆಸ್ಪತ್ರೆಯ ಮುಖ್ಯವೈದ್ಯಾಧಿಕಾರಿ ಡಾ ರುದ್ರಗೌಡ ಪಾಟೀಲ್ ಹೇಳಿದರು

ಅವರು ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ವಿಶ್ವ ದಾದಿಯರ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡುತ್ತಾ ಜೀವನದಲ್ಲಿ ತಾಯಿ ಹಾಗೂ ನರ್ಸಗಳ ಸೇವೆ ಬೆಲೆಕಟ್ಟಲಾಗದು ನಮ್ಮ ಆಸ್ಪತ್ರೆಯಲ್ಲಿ ಉತ್ತಮ ನರ್ಸಗಳು ಇದ್ದು ಅವಿರತವಾಗಿ ಸೇವೆ ಸಲ್ಲಿಸುತ್ತಿದ್ದಾರೆ ಕೋವಿಡ್ ಸಂದರ್ಭದಲ್ಲಿ ಅವರ ಸೇವೆ ಅಗಾಧವಾಗಿತ್ತು ತಾಲೂಕಿನ ವಿವಿಧ ಗ್ರಾಮಗಳಲ್ಲಿ ವಾಂತಿಭೇದಿ ಕಾಣಿಸಿಕೊಂಡ ಸಂದರ್ಭದಲ್ಲಿಯು ಅವರು ಉತ್ತಮ ಸೇವೆ ಸಲ್ಲಿಸಿದ್ದಾರೆ ದಾದಿಯರ ದಿನದಂದು ಎಲ್ಲರೂ ಸೇರಿ ಉತ್ತಮ ಕಾರ್ಯಕ್ರಮ ರೂಪಿಸಿದ್ದು ತಮ್ಮ ಕೆಲಸಕ್ಕೆ ಸ್ಪೂರ್ತಿಯಾಗಲಿ ಎಂದು ಹಾರೈಸಿದರು

ಡಾ ಖಾಜಾಮೈನುದೀನ್ ಮಾತನಾಡುತ್ತಾ ಫ್ಲಾರೆನ್ಸ್‌ನೈಟಿಂಗಲ್ ಜನ್ಮದಿನವನ್ನು ದಾದಿಯರ ದಿನವೆಂದು ಆಚರಿಸಲಾಗುತ್ತಿದ್ದು ಸಾರ್ವಜನಿಕ ಆಸ್ಪತ್ರೆಯಲ್ಲಿರುವ ನರ್ಸಗಳ ಸೇವೆ ಅಗಾಧವಾಗಿದೆ ಎಂದರು

ನಂತರ ಡಾ ಪವನ ಮಾತನಾಡುತ್ತಾ ವಿಶ್ವದಲ್ಲಿ 2,8ಕೋಟಿ ನರ್ಸಗಳು ಇದ್ದಾರೆ ಆದರೆ ಜಗತ್ತಿನ ಜನಸಂಖ್ಯೆಗೆ ಹೋಲಿಕೆ ಮಾಡಿದರೆ ಇನ್ನು ಹೆಚ್ಚುಹೆಚ್ಚು ನರ್ಸಗಳು ಸೇವೆಗೆ ಬರಬೇಕಾದುದು ಅವಶ್ಯವಾಗಿದೆ ಎಂದರು

ನರ್ಸಗಳ ದಿನಾಚರಣೆ ನಿಮಿತ್ಯವಾಗಿ ದೀಪಬೆಳಗಿಸುವ ಮತ್ತು ಪ್ರತಿಜ್ಞಾವಿಧಿ ಸ್ವೀಕಾರ ಹಾಗೂ ದಿನಾಚರಣೆ ಅಂಗವಾಗಿ ರಂಗೋಲಿಸ್ಪರ್ಧೆ,ಖುರ್ಚಿಆಟ,ಹೀಗೆ ವಿವಿಧ ಆಟೋಟಗಳನ್ನು ಏರ್ಪಡಿಸಿ ವಿಜೇತರಿಗೆ ಬಹುಮಾನ ವಿತರಣೆ ಹಾಗೂ ಸೇವೆ ಸಲ್ಲಿಸಿದ ಹಲವಾರು ಹಿರಿಯದಾದಿಯರಿಗೆ ಸನ್ಮಾನಿಸಲಾಯಿತು

ಸುಮಾರು ಮುವತ್ತು ವರ್ಷಗಳಿಂದ ಸೇವೆ ಸಲ್ಲಿಸಿ ಸಾವಿರಾರು ಹೆರಿಗೆ ಮಾಡಿಸಿದ ನರ್ಸ ಅಂಜನಮ್ಮನವರಿಗೆ ಶಾಲುಹಾಕಿ ಸನ್ಮಾನಿಸಲಾಯಿತು,

# ಭಗವಾನ್ ಬುದ್ಧನ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ:



ಮಲ್ಲಮ್ಮ ನುಡಿ ವಾರ್ತೆ

ಶಹಾಪುರ: ಬೌದ್ಧ ಧರ್ಮದ ಸಂಸ್ಥಾಪಕ ಗೌತಮ ಬುದ್ಧ ಮಹಾನ್ ದಾರ್ಶನಿಕರು, ಅವರ ತತ್ವ ಆದರ್ಶಗಳು ಮತ್ತು ಬೋಧನೆಗಳು ಪ್ರತಿಯೊಬ್ಬರು ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಸದಾ ಅವರನ್ನು ಸ್ಮರಿಸಬೇಕು ಎಂದು ತಹಶೀಲ್ದಾರ ಉಮಕಾಂತ ಹಳ್ಳೆ ತಿಳಿಸಿದರು.

ಇದೇ ಪ್ರಥಮ ಬಾರಿಗೆ ಕರ್ನಾಟಕ ಸರ್ಕಾರದಿಂದ ಬುದ್ಧ ಜಯಂತಿ ಆಚರಣೆ ಅಂಗವಾಗಿ ತಾಲೂಕಾಡಳಿತದ ವತಿಯಿಂದ ತಹಶೀಲ ಕಚೇರಿಯಲ್ಲಿ ಸರಳವಾಗಿ ಭಗವಾನ್ ಬುದ್ಧರ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಿ, ಮೇಣದ ಬತ್ತಿಗಳನ್ನು ಹಚ್ಚುವ ಮೂಲಕ ಜಯಂತಿಗೆ ಚಾಲನೆ ನೀಡಿ ಮಾತನಾಡಿದ ಅವರು, ಸಮಾಜ ಸರಿಯಾದ ಮಾರ್ಗದಲ್ಲಿ ಸಾಗಲು ಬುದ್ಧಮಾರ್ಗ ಅತಿಮುಖ್ಯ ಎಂದರು.

ಹಿರಿಯ ದಲಿತ ಮುಖಂಡ ಶ್ರೀಶೈಲ ಹೊಸಮನಿ ಮಾತನಾಡಿ, ಗೌತಮ ಬುದ್ಧನು ಬುದ್ಧ ಪೂರ್ಣಿಮೆಯಂದು ಜ್ಞಾನೋದಯವನ್ನು ಪಡೆದು ಮಹಾನ ಜ್ಞಾನಿಯಾದರು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಹಾಯಕ ಖಜಾನೆ ಅಧಿಕಾರಿ ಡಾ. ಎಂ ಎಸ್ ಶಿರವಾಳ, ಭೂಮಾಪನ ಇಲಾಖೆ ಸಹಾಯಕ ನಿರ್ದೇಶಕ ನಂದಕುಮಾರ್ ಹಿಪ್ಪರಿಗೆ, ಆಹಾರ ಇಲಾಖೆಯ ಅಧಿಕಾರಿ ಜಂಬಯ್ಯ ಹಿರೇಮಠ, ಗೂಗಿ ನಾಡಕಚೇರಿಯ ಪ್ರವಾರಿ ಉಪತಹಸಿಲ್ದಾರ್ ಭೀಮ್ ರೆಡ್ಡಿ ಹೊಸಮನಿ, ದಲಿತ ಹಿರಿಯ ಮುಖಂಡ ನಾಗಣ್ಣ ಬಡಿಗೇರ್, ಮಲ್ಲಿಕಾರ್ಜುನ್ ಪೂಜಾರಿ, ಶಿವಪುತ್ರ ಜವಳಿ, ಶಿವಕುಮಾರ್ ತಳವಾರ್, ಭೀಮರಾಯ ಹೊಸಮನಿ ಸೇರಿದಂತೆ ಕಂದಾಯ ಇಲಾಖೆಯ ಸಿಬ್ಬಂದಿಗಳು ಭಾಗವಹಿಸಿದ್ದರು.

# ಮೇ 15 ರಿಂದ ಡಿ.ಇಎಲ್.ಇಡಿ/ಡಿ.ಪಿ.ಎಸ್.ಇ ಪ್ರಥಮ ಹಾಗೂ ದ್ವಿತೀಯ ವರ್ಷದ ಮುಖ್ಯ ಪರೀಕ್ಷೆಗಳು

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಮೇ.13-ಮೇ-2025ರ ಡಿ.ಇಎಲ್.ಇಡಿ/ಡಿ.ಪಿ.ಎಸ್.ಇ ಪ್ರಥಮ ಹಾಗೂ ದ್ವಿತೀಯ ವರ್ಷದ ಮುಖ್ಯ ಪರೀಕ್ಷೆಯು ಇದೇ ಮೇ 15 ರಿಂದ 27ರವರೆಗೆ ಕಲಬುರಗಿ ನಗರದ ಕೆಳಕಂಡ 3 ಪರೀಕ್ಷಾ ಕೇಂದ್ರಗಳಲ್ಲಿ ಜರುಗಲಿದೆ ಎಂದು ಕಲಬುರಗಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಉಪನಿರ್ದೇಶಕರು (ಅ)/ಪ್ರಾಂಶುಪಾಲರು ತಿಳಿಸಿದ್ದಾರೆ.

ಈ ಪರೀಕ್ಷೆಯು ಕಲಬುರಗಿ ನಗರದ ಸಂತ್ರಾಸ್‌ವಾಡಿಯ ಹುಮೇನ್ ಏಜ್ ಉರ್ದು ಪ್ರೌಢಶಾಲೆ, ಕಲಬುರಗಿ ಮಾಲಗತ್ತಿ ಕ್ರಾಸ್‌ನ ಇತೇಹಾದ್ ಚೌಕ್‌ನ ಆಯೀಷಾ ಸೈನ್ಸ್ ಅಂಡ್ ಕಾಮರ್ಸ್ ಪಿ.ಯು. ಕಾಲೇಜು ಹಾಗೂ ಕಲಬುರಗಿ ಮಾಲಗತ್ತಿ ಕ್ರಾಸ್‌ನ ಸಪ್ನಾ ಬೇಕರಿ ಸಮೀಪದ ಬೆಂಗಳೂರು ಇಂಟರ್‌ನ್ಯಾಷನಲ್ ಇಂಗ್ಲೀಷ್ ಮೀಡಿಯಂ ಸ್ಕೂಲ್‌ದಲ್ಲಿ ಜರುಗಲಿದೆ ಎಂದು ಅವರು ತಿಳಿಸಿದ್ದಾರೆ.

## ಉಚಿತ ಸಹಾಯವಾಣಿ ಆರಂಭ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಮೇ,13-ಬಳ್ಳಾರಿ ತಾಲ್ಲೂಕಿನ 25 ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಹಾಗೂ ಇತರೆ ಕುಂದು-ಕೊರತೆಗಳಿಗೆ ಸಂಬಂಧಿಸಿದಂತೆ ದೂರು ಸಲ್ಲಿಸಲು ಬಳ್ಳಾರಿ ತಾಲ್ಲೂಕು ಪಂಚಾಯತಿ ಕಾರ್ಯಾಲಯದಲ್ಲಿ ಉಚಿತ ಸಹಾಯವಾಣಿ ಸಂಖ್ಯೆ 08392-266695 ಪ್ರಾರಂಭಿಸಲಾಗಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಬಳ್ಳಾರಿ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ತಿಳಿಸಿದ್ದಾರೆ.

# ವಲಸೆ ಯಾಕ್ರಿ ನಿಮ್ಮೂರಲ್ಲೇ ಉದ್ಯೋಗ ಖಾತ್ರಿ : ಪಿಡಿಓ ಪ್ರಭುದಾಸ ಜಾಧವ




ಮಲ್ಲಮ್ಮ ನುಡಿ ವಾರ್ತೆ

ಕಮಲನಗರ:ಮೇ.13:ಅರ್ಹ ಫಲಾನುಭವಿಗಳು ನರೇಗಾ ಯೋಜನೆಯಡಿ ವೈಯಕ್ತಿಕ ಮತ್ತು ಸಮುದಾಯ ಕಾಮಗಾರಿಗಳ ಸದ್ಬಳಕೆ ಮಾಡಿಕೊಳ್ಳಿ ಪ್ರತಿಯೊಬ್ಬರೂ ಕಡ್ಡಾಯವಾಗಿ ನೂರು ದಿವಸ ಕೆಲಸ ಮಾಡಬೇಕು. ನೀವು ಇದ್ದ ಊರಲ್ಲಿ ನಿಮಗೆ ನೂರು ದಿನ ಕೆಲಸ ಖಾತ್ರಿ ಇದೆ ಎಂದು ಪಂಚಾಯತ ಅಭಿವೃದ್ಧಿ ಅಧಿಕಾರಿ ಪ್ರಭುದಾಸ ಹೇಳಿದರು.

ತಾಲೂಕಿನ ಬಳತ(ಬಿ) ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ನಡೆಯುತ್ತಿರುವ ನರೇಗಾ ಕಾಮಗಾರಿ ಸ್ಥಳದಲ್ಲಿ ಆಯೋಜನೆ ಮಾಡಿರುವ " ಕಾಯಕ ಮಾಸಾಚರಣೆ ಮತ್ತು ದುಡಿಯೋಣ ಬಾ "ಅಭಿಯಾನಗೆ ಚಾಲನೆ ನೀಡಿ ತಿಳಿಸಿದರು.

ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ಖಾತ್ರಿ ಯೋಜನೆ ಸದುಪಯೋಗ ಪಡೆದುಕೊಳ್ಳಬೇಕು. ಏಪ್ರೀಲ್ ತಿಂಗಳಿಂದ 349 ರೂ. ಇದ್ದ ಕೂಲಿ ಮೊತ್ತ 370 ರೂ. ಹೆಚ್ಚಿಸಲಾಗಿದೆ. ಕೂಲಿ ಕಾರ್ಮಿಕರು ನಿರಂತರವಾಗಿ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಕೆಲಸ ಮಾಡಿ ಉತ್ತಮ ಬದುಕು ಕಟ್ಟಿಕೊಳ್ಳಿ ಎಂದರು. ಹಾಗೂ ಎಲ್ಲ ಕೂಲಿಕಾರರಿಗೆ ಉಚಿತ ಆರೋಗ್ಯ ತಪಾಸಣೆಯನ್ನು ಏರ್ಪಡಿಸಲಾಗಿದೆ. ಎಲ್ಲರು ಇದರ ಸದುಪಯೋಗ ಪಡೆದುಕೊಳ್ಳಿ ಎಂದರು.

ಈ ಸಂದರ್ಭದಲ್ಲಿ ತಾಂತ್ರಿಕ ಸಂಯೋಜಕರಾದ ಅಮರ ಬಿರಾದಾರ, ತಾಂತ್ರಿಕ ಸಹಾಯಕರಾದ ರಾಘವೇಂದ್ರ, ತಾಲೂಕು ಐ ಇ ಸಿ ಸಂಯೋಜಕರಾದ ಸವಿತಾ ನಾಗೇಶ, ಡಿಇಓ ಸಂಜು, ಗ್ರಂಥಪಾಲಕರಾದ ವಿಠಲ, ಹಾಗೂ ಗ್ರಾಮ ಪಂಚಾಯತ ಸಿಬ್ಬಂದಿಗಳು, ಕೂಲಿಕಾರರು ಮತ್ತು ಇತರರು ಇದ್ದರು.

# ಅದ್ದೂರಿಯಾಗಿ ಜರುಗಿದ ಕವಲೂರಿನ ಶ್ರೀ ದುರ್ಗಾದೇವಿ ಮಹಾ ರಥೋತ್ಸವ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ :ಮೇ.13: ತಾಲ್ಲೂಕಿನ ಕವಲೂರು ಗ್ರಾಮದಲ್ಲಿ ದುರ್ಗಾದೇವಿ ದೇವಿ ಜಾತ್ರಾ ಮಹೋತ್ಸವ ಅಂಗವಾಗಿ ಭಾವೈಕ್ಯತೆ ಹಾಗೂ ರಾಷ್ಟ್ರಪ್ರೇಮ ಸಾರುವ ಮಹಾರಥೋತ್ಸವ ಸಹಸ್ರಾರು ಭಕ್ತರು ಮಧ್ಯೆ ಸೋಮವಾರ ಅದ್ದೂರಿಯಾಗಿ ನೆರವೇರಿತು.

ರಥೋತ್ಸವಕ್ಕೂ ಮೊದಲು ಧ್ವಜಾರೋಹಣವನ್ನು ಮೈನಹಳ್ಳಿ ಬಿಕನಳ್ಳಿಯ ಸಿದ್ದೇಶ್ವರ ಶಿವಾಚಾರ್ಯರು, ಅಳವಂಡಿಯ ಮರುಳಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಕುಕನೂರಿನ ಮಹಾದೇವ ಸ್ವಾಮೀಜಿ, ಗುಳೇದಗುಡ್ಡದ ಒಪ್ಪತೇಶ್ವರ ಸ್ವಾಮೀಜಿ, ಯಲಬುರ್ಗಾದ ಬಸವಲಿಂಗೇಶ್ವರ ಶಿವಾಚಾರ್ಯರು ನೇರವೇರಿಸಿ ಮಹಾರಥೋತ್ಸವಕ್ಕೆ ಚಾಲನೆ ನೀಡಿದರು.

ರಥೋತ್ಸವಕ್ಕೆ ಚಾಲನೆ ಸಿಗುತ್ತಿದ್ದಂತೆ, ಭಕ್ತರು ರಥೋತ್ಸವಕ್ಕೆ ಉತ್ತತ್ತಿ, ಬಾಳೆಹಣ್ಣು ಎಸೆದು ಭಕ್ತಿ ಸಮರ್ಪಿಸಿದರು. ರಥೋತ್ಸವದ ಮುಂದೆ ವಿವಿಧ ವಾದ್ಯ ಮೇಳಗಳು ಗಮನ ಸೆಳೆದವು. ರಥೋತ್ಸವದಲ್ಲಿ ಪೊಲೀಸ್ ಇಲಾಖೆಯ ವತಿಯಿಂದ ಬಿಗಿ ಬಂದೋಬಸ್ತ್ ಒದಗಿಸಲಾಗಿತ್ತು.

ಕಲಾವಿದ ಗವಿಸಿದ್ದಯ್ಯ ಹಳ್ಳಿಕೇರಿಮಠ ಅವರು ಜಾನಪದ ಹಾಡುವ ಮೂಲಕ ರಂಜಿಸಿದರು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಗೈದ ಸಾಧಕರನ್ನು ಸನ್ಮಾನಿಸಲಾಯಿತು. ಗ್ರಾ.ಪಂ ಅಧ್ಯಕ್ಷೆ ಮಲ್ಲವ್ವ, ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಬಸವರಾಜ ಕ್ಯಾವಟರ್, ಸಿಪಿಐ ಚಂದ್ರು ಉಪ್ಪಾರ, ಪಿಎ??? ಪ್ರಹ್ಲಾದ್ ನಾಯಕ, ಪಿಡಿಓ ಅನಿತಾ.ಕೆ, ಅಜಯಗೌಡ ಪಾಟೀಲ ಮೈನಹಳ್ಳಿ, ವೀರೇಶ ಸಜ್ಜನ, ಮರಿಶಾಂತವೀರಸ್ವಾಮಿ, ದುರ್ಗಾದೇವಿ ಸಮಿತಿಯವರು, ಗ್ರಾಮದ ಮುಖಂಡರು ಹಾಗೂ ಗ್ರಾಮಸ್ಥರು ಇದ್ದರು.

# ಸಿಬಿಎಸ್‌ಇ ಪರೀಕ್ಷೆ: ಚನ್ನಬಸವೇಶ್ವರ ಗುರುಕುಲ ಪಬ್ಲಿಕ್ ಶಾಲೆಗೆ ಪ್ರತಿಶತ ಫಲಿತಾಂಶ




ನಮ್ಮ ಪಬ್ಲಿಕ್ ಶಾಲೆಯಲ್ಲಿ ನೀಡಿರುವ ಐಐಟಿ, ನೀಟ್ ಫೌಂಡೇಶನ್ ತರಬೇತಿ ಮತ್ತು ಅತ್ಯಾಧುನಿಕ ಶೈಕ್ಷಣಿಕ ಪಾಠೋಪಕರಣಗಳನ್ನು ಬಳಸಿ ನೀಡಿರುವ ಗುಣಾತ್ಮಕ, ಪ್ರಯೋಗಾತ್ಮಕ ಶಿಕ್ಷಣದ ಪರಿಣಾಮ ನಮ್ಮ ಮೊದಲ ಬ್ಯಾಚ್ ನ ವಿದ್ಯಾರ್ಥಿಗಳು ಅತ್ಯುತ್ತಮ ಫಲಿತಾಂಶ ನೀಡಿದ್ದಾರೆ.

**ಡಾ. ಬಸವಲಿಂಗ ಪಟ್ಟದ್ದೇವರು, ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರು**

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಮೇ.13: ತಾಲ್ಲೂಕಿನ ಕರಡ್ಯಾಳದ ಶ್ರೀ ಚನ್ನಬಸವೇಶ್ವರ ಗುರುಕುಲ ಪಬ್ಲಿಕ್ ಶಾಲೆಗೆ ಪ್ರತಿಶತ ಫಲಿತಾಂಶ ಬಂದಿದ್ದು, ವಿದ್ಯಾರ್ಥಿನಿ ವೈಷ್ಣವಿ ಮಹೇಶ ಸಿಬಿಎಸ್‌ಇಯ ಹತ್ತನೇ ತರಗತಿಯ ಪರೀಕ್ಷೆಯಲ್ಲಿ 500ಕ್ಕೆ 470 ಅಂಕ ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾಳೆ.ಶಾಲೆಯ 38 ವಿದ್ಯಾರ್ಥಿಗಳು ಅಗ್ರಶ್ರೇಣಿಯಲ್ಲಿ ಪಾಸಾಗಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ ಎಂದು ಪ್ರಾಚಾರ್ಯ ಎನ್.ರಾಜು ತಿಳಿಸಿದ್ದಾರೆ.ಸಾಧಕ ವಿದ್ಯಾರ್ಥಿಗಳ ವಿವರ: ಗಣೇಶ ಬಸವರಾಜ 92.6 ಪ್ರತಿಶತ ಅಂಕ, ವೈಷ್ಣವಿ ರವೀಂದ್ರರೆಡ್ಡಿ 92.6, ಸ್ರುಜನ್ ನಾಗರೆಡ್ಡಿ 92.4, ದರ್ಶನ ದಿಲೀಪಕುಮಾರ 90, ಸೃಷ್ಟಿ ಕುಪೇಂದ್ರ 89.8, ತ್ರಿಶಾ ಕೃಷ್ಣಾರೆಡ್ಡಿ 89.8, ಕೃಷ್ಣಾ ಭೀಮರಾಯ 89.6, ಸಾಕ್ಷಿ ಲಿಂಮರಾಜ 89.6, ಶಿವಾ ನಿವಾರ್ತಿ 89.6, ಪ್ರಿಯಾಂಕಾ ಅಮರಕುಮಾರ ಸಿಂಗ್ 88.8, ಪಾರ್ಥ ಸತೀಶ 87.2, ಸಾನ್ವಿ ಸಂದೀಪ ನಿಟ್ಟೂರೆ 87.2, ಎಂ.ಡಿ.ಉಮರ್ ಅಬ್ದುಲ್ 86.6, ಸುಪ್ರೀತ್ ಸಂತೋಷ 86.4, ಸ್ವಪ್ನೀಲ್ ಸುನಿಲ್ 85.8, ಮಾಣಿಕರಾವ್ ಲಕ್ಷ್ಮಿಕಾಂತ 85.4, ರಾಜಶೇಖರ ಪರಮೇಶ್ವರ 85.4, ದೀಕ್ಷಾ ರವೀಂದ್ರ 85.2, ವರಣಕುಮಾರ ನಟರಾಜ 84.8, ದೀಕ್ಷಾ ಅವಿನಾಶ 84.2, ಶೈಲೇಶ ಮಹೇಶ 83.8, ವೇದಾಂತ ಕಿಶೋರ 83.8, ಸಾಯಿಕಿರಣ ಸಂಜುಕುಮಾರ 83.6, ಪ್ರಜ್ವಲ್ ಲಕ್ಷ್ಮಣರಾವ್ 83.4, ಸೈಯದ್ ಯೂಸುಫ್ ಅಲಿ ಬಂದಿಗಿಸಾಬ್ 83.4, ವೇದಾಂತ ದತ್ತಾತ್ರಿ 83.2, ಸಾಯಿಪ್ರತೀಕ್ ಶಿವಾನಂದ 82, ಸರ್ವಶ್ರೀ ಶಿವರಾಜ್ 81, ಸುಹಾಸ ಉಮೇಶ 80.6, ಶಶಾಂಕ ಸಿದ್ದಲಿಂಗ 80.2, ಪ್ರಜ್ವಲ್ ನಾಗಶೆಟ್ಟಿ 79.8, ಸಮೃದ್ಧಿ ಬಾಬಾಸಾಹೇಬ್ 78.4, ಭವಾನಿ ಶಶಿಧರ 78, ಸುಮಿತ್ ವಿಶ್ವನಾಥ 78, ನಾಗರಾಜ ಚಂದ್ರಶೇಖರ 77.6, ಆದಿತ್ಯಾ ವಿಲಾಸ 75.6, ಸೋಮನಾಥ ಪ್ರಕಾಶ 75.6 ಪ್ರತಿಶತ ಅಂಕ ಪಡೆದು ಮಹೋನ್ನತ ಸಾಧನೆ ಮಾಡಿದ್ದಾರೆ.ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ.ಬಸವಲಿಂಗ ಪಟ್ಟದ್ದೇವರು, ಹಿರೇಮಠದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ಕಾರ್ಯದರ್ಶಿ ಮಹಾಲಿಂಗಸ್ವಾಮೀಜಿ, ಆಡಳಿತಾಧಿಕಾರಿ ಮೋಹನರೆಡ್ಡಿ, ಪಿಯು ಕಾಲೇಜಿನ ಪ್ರಾಚಾರ್ಯ ಬಸವರಾಜ ಮೊಳಕೀರೆ, ಶಶಿಕುಮಾರ, ಪ್ರಶಾಂತರೆಡ್ಡಿ ಸೇರಿದಂತೆ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ.

# ಕಲ್ಲೂರ್ ಗ್ರಾಪಂ. ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ಪ್ರಕ್ರಿಯೆ ನೂತನ ಅಧ್ಯಕ್ಷೆಯಾಗಿ ಮಂಜುಳಾ ಅವಿರೋಧ ಆಯ್ಕೆ



ಮಲ್ಲಮ್ಮನುಡಿವಾರ್ತೆಹುಮನಾಬಾದ್ :ತಾಲೂಕಿನಕಲ್ಲೂರ್‌ಗ್ರಾಮಪಂಚಾಯತಿ ಅಧ್ಯಕ್ಷಸ್ಥಾನಕ್ಕೆಮಂಗಳವಾರಚುನಾವಣೆ ಪ್ರಕ್ರಿಯೆನಡೆದಿದ್ದು,ನೂತನಅಧ್ಯಕ್ಷರಾಗಿ ಮಂಜುಳಾದೊಡ್ಡಿಆಯ್ಕೆಯಾಗಿದ್ದಾರೆ.ಈ ಹಿಂದಿನ ಅಧ್ಯಕ್ಷ ಶಂಕರ ಪವಾರ ಅವರು ಸ್ವಇಚ್ಛೆಯಿಂದ ರಾಜೀನಾಮೆ ನೀಡಿದ ಹಿನ್ನಲೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆ ಪ್ರಕ್ರಿಯೆಗೆ ಸಂಬಂಧಿಸಿದಂತೆ 1 ನಾಮಪತ್ರ ಸಲ್ಲಿಕೆಯಾಗಿತ್ತು. ಹೀಗಾಗಿ ಮಂಜುಳಾ ದೊಡ್ಡಿಗೆ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣೆ ಅಧಿಕಾರಿ ದೀಪಿಕಾ ನಾಯ್ಕರ್ ತಿಳಿಸಿದರು. ಚುನಾವಣೆ ಫಲಿತಾಂಶ ಹೊರಬೀಳುತ್ತಿದ್ದಂತೆ ಬೆಂಬಲಿಗರು ನೂತನ ಅಧ್ಯಕ್ಷೆ ಮಂಜುಳಾ ದೊಡ್ಡಿಗೆ ಸನ್ಮಾನಿಸಿ, ಗೌರವಿಸುವ ಮೂಲಕ ಪಟಾಕಿ ಸಿಡಿಸಿ ಪರಸ್ಪರ ಸಿಹಿ ವಿನಿಮಯ ಮಾಡಿಕೊಂಡು ಸಂಭ್ರಮಿಸಿದ ಬಳಿಕ ಗ್ರಾಮದ ವಿವಿಧ ದೇವಸ್ಥಾನಗಳಿಗೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಗ್ರಾಪಂ. ಉಪಾಧ್ಯಕ್ಷೆ ಮಲ್ಲಮ್ಮ ಶೇಷಪ್ಪ, ಗ್ರಾಪಂ. ಸದಸ್ಯರಾದ ವೀರಭದ್ರಪ್ಪ ಪಾಟೀಲ್, ಶಂಕರ ಪವಾರ, ಪ್ರಿಯಾಂಕ ಚಂದ್ರಕಾಂತ, ಮಹಾನಂದ ಶರಣಪ್ಪ, ಅನಿಲ ಶ್ರೀಮಂತ, ಸಂಜುಕುಮಾರ ಸಂಬಣ್ಣ, ಪಾರ್ವತಿ ರಾಜಶೇಖರ, ರೇವಣಸಿದ್ದ ಮಾರುತಿ, ಅಮೃತ ತಿಪ್ಪಣ್ಣ, ಶಿವರಾಜ ಶರಣಪ್ಪ ತೇಜಮ್ಮ ಸಿದ್ರಾಮ, ಪಿಡಿಒ ಮಹಾದೇವರಾವ ದೇಶಪಾಂಡೆ, ಸಿಬ್ಬಂದಿಗಳಾದ ಮಹೇಶ ಡಾಡಗಿ, ಚಂದ್ರಕಾಂತ ನಿಂಬೂರೆ, ಪ್ರಭು ಸಿರಗೆಕರ್ ಇದ್ದರು.

# ಸಿದ್ಧಾರೂಢ ಕುಟುಂಬಸ್ಥರಿಗೆ ಮಾಜಿ ಸಚಿವ ಪಾಟೀಲ್ ಸಾಂತ್ವನ ಸಿದ್ಧಾರೂಢ ನ್ಯಾಯ ಕೊಡಿಸುವ ಭರವಸೆ



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್ : ತಾಲೂಕಿನ ಸಕ್ಕರಗಂಜ ವಾಡಿ ಗ್ರಾಮದಲ್ಲಿ ಕೆಲ ದಿನಗಳ ಹಿಂದೆ ಸಿದ್ದಾರೂಢ ಜಾಲೇಂದ್ರ ಬಾವಗಿ ಹತ್ಯಗಿಡಾದ ಹಿನ್ನಲೆ ಅವರ ಮನೆಗೆ ಮಾಜಿ ಸಚಿವ ರಾಜಶೇಖರ ಪಾಟೀಲ್ ಭೇಟಿ ನೀಡಿ ಕುಟುಂಸ್ಥರಿಗೆ ಸಾಂತ್ವನ ಹೇಳಿದರು.

ಸಿದ್ದಾರೂಢ ಬಾವಗಿ ಕುಟುಂಬ ಸದಸ್ಯರಿಗೆ ಧೈರ್ಯ ತುಂಬಿ, ಸಾಂತ್ವನ ಹೇಳುವ ಮೂಲಕ ಹತ್ಯೆಗಿಡು ಮಾಡಿದ ಆರೋಪಿಗಳು ಯಾರೇ ಇರಲಿ ಆದಷ್ಟು ಬೇಗ ಪತ್ತೆ ಹಚ್ಚಿ ಕಾನೂನು ಚೌಕಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ಪೊಲೀಸ್ ಇಲಾಖೆಗೆ ತಿಳಿಸುವ ಮೂಲಕ ನೊಂದ ಕುಟುಂಬಸ್ಥರಿಗೆ ನ್ಯಾಯ ವದಗಿಸಿಕೊಡುವ ಪ್ರಯತ್ನ ಮಾಡಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅಫ್ಸರಮಿಯ, ಪಿಎಲ್ಡಿ ಬ್ಯಾಂಕ್ ಅಧ್ಯಕ್ಷ ಮಲ್ಲಿಕಾರ್ಜುನ ಮಾಳಶಟ್ಟಿ, ಕೇಶವರಾವ ಮಹಾರಾಜ, ಶಿವಕುಮಾರ ಬೆಳಕೇರಾ, ಭದ್ರಪ್ಪ ಬಾವಗಿ, ವೈಜಪ್ಪ ಬಾವಗಿ ಸೇರಿ ಅನೇಕರಿದ್ದರು.

# ಕೋಚಿಂಗ್ ಸೆಂಟರ್ ಮುಚ್ಚುವ ಸುತ್ತೋಲೆ ತಡೆ ಹಿಡಿಯಲು ಆಗ್ರಹ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಮೇ. 13 : ಜಿಲ್ಲೆಯಲ್ಲಿ ಕೋಚಿಂಗ್ ಸೆಂಟರ್‌ಗಳನ್ನು ಶಾಶ್ವತವಾಗಿ ಮುಚ್ಚುವ ಸುತ್ತೋಲೆಯನ್ನು ತಡೆ ಹಿಡಿಯಬೇಕು ಎಂದು ಜಿಲ್ಲಾ ಕೋಚಿಂಗ್ ಸೆಂಟರ್ಸ್ ಮತ್ತು ಟ್ಯುಟೋರಿಯಲ್ಸ್ ಅಸೋಸಿಯೇಷನ್ ಆಗ್ರಹಿಸಿದೆ.

ಅಸೋಸಿಯೇಷನ್ ಪದಾಧಿಕಾರಿಗಳು ಹಾಗೂ ಸದಸ್ಯರು ನಗರದಲ್ಲಿ ಮಂಗಳವಾರ ನಿಯೋಗದಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಗಿರೀಶ್ ಬದೋಲೆ ಅವರನ್ನು ಭೇಟಿ ಮಾಡಿ ಈ ಕುರಿತು ಮನವಿ ಪತ್ರ ಸಲ್ಲಿಸಿದರು. ಜಿಲ್ಲೆಯ ಮಕ್ಕಳು ಮೂಲ ಶಿಕ್ಷಣದ ಕೊರತೆಯಿಂದ ಬಳಲುತ್ತಿದ್ದು, ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಪಾಲಕರು ಸ್ವ ಇಚ್ಛೆಯಿಂದ ಅವರನ್ನು ಕೋಚಿಂಗ್ ಸೆಂಟರ್‌ಗಳಲ್ಲಿ ದಾಖಲಿಸುತ್ತಿದ್ದಾರೆ. ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಕೋಚಿಂಗ್ ಸೆಂಟರ್‌ಗಳು ಮಕ್ಕಳ ಮೂಲ ಶಿಕ್ಷಣದ ಕೊರತೆ ನೀಗಿಸುವಲ್ಲಿ ಯಶಸ್ವಿಯಾಗಿವೆ ಎಂದು ಗಮನ ಸೆಳೆದರು.

ಜಿಲ್ಲಾ ಪಂಚಾಯಿತಿ ವತಿಯಿಂದ ಮೇ 6 ರಂದು ಕೋಚಿಂಗ್ ಸೆಂಟರ್‌ಗಳನ್ನು ಶಾಶ್ವತವಾಗಿ ಮುಚ್ಚಲು ಸುತ್ತೋಲೆ ಹೊರಡಿಸಿರುವುದರಿಂದ ಕೋಚಿಂಗ್ ಸೆಂಟರ್‌ಗಳಿಗೆ ಆಘಾತವಾಗಿದೆ ಎಂದು ತಿಳಿಸಿದರು.

ಬೀದರ್ ಮೊದಲಿನಿಂದಲೂ ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆಯಾಗಿದೆ. ಕೋಚಿಂಗ್ ಸೆಂಟರ್‌ಗಳಿಂದಾಗಿ ಜಿಲ್ಲೆಯ ಸಾವಿರಾರು ವಿದ್ಯಾರ್ಥಿಗಳು ಮೂಲ ಶಿಕ್ಷಣದ ಕೊರತೆಯಿಂದ ಹೊರಬರುತ್ತಿದ್ದಾರೆ. ಎಸ್‌ಎಸ್‌ಎಲ್‌ಸಿ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅತ್ಯುತ್ತಮ ಸಾಧನೆ ಮಾಡುತ್ತಿದ್ದಾರೆ ಎಂದು ಹೇಳಿದರು.

ಕೋಚಿಂಗ್ ಸೆಂಟರ್‌ಗಳು ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಿವೆ. ಜಿಲ್ಲೆಯ ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಅವಶ್ಯಕವಾಗಿವೆ. ಕಾರಣ, ಎಲ್ಲ ಕೋಚಿಂಗ್ ಸೆಂಟರ್‌ಗಳ ಮೂಲಸೌಕರ್ಯ ಗಮನಿಸಿ, ಶಾಲಾ ಅವಧಿ ಹೊರತುಪಡಿಸಿ, ಕೋಚಿಂಗ್ ಸೆಂಟರ್‌ಗಳನ್ನು ನಡೆಸಲು ಅನುಮತಿ ಕೊಡಬೇಕು ಎಂದು ಮನವಿ ಮಾಡಿದರು.

ಅಸೋಸಿಯೇಷನ್ ಮನವಿಗೆ ಸ್ಪಂದಿಸಿದ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅವರು, ಕೋಚಿಂಗ್ ಸೆಂಟರ್‌ಗಳನ್ನು ಅನುಮತಿ ಪಡೆದು, ನಿಯಮಾನುಸಾರ ನಡೆಸಬೇಕು. ಶಾಲಾ ಅವಧಿಗೆ ಮುನ್ನ ಹಾಗೂ ನಂತರ ನಡೆಸಬೇಕು ಎಂದು ತಿಳಿಸಿದರು ಎಂದು ಅಸೋಸಿಯೇಷನ್ ಅಧ್ಯಕ್ಷ ಮನೋಜಕುಮಾರ ಬುಕ್ಕಾ ಹೇಳಿದರು.

ಅಸೋಸಿಯೇಷನ್ ಗೌರವಾಧ್ಯಕ್ಷ ಮಲ್ಲಿಕಾರ್ಜುನ ಮೈನಾಳೆ, ಉಪಾಧ್ಯಕ್ಷ ಅನೀಶ್ ಪಾಟೀಲ, ಪ್ರಧಾನ ಕಾರ್ಯದರ್ಶಿ ಗೋಪಾಲ್ ಕುಲಕರ್ಣಿ, ಸದಸ್ಯರಾದ ಪ್ರದೀಪ್, ಮುಕೇಶ್, ಶಿವಾನಂದ, ದತ್ತಾತ್ರಿ ಅಲ್ಲಮಕೆರೆ, ಧನರಾಜ ವಿಶ್ವಕರ್ಮ, ಶಿವಕುಮಾರ ಎಸ್.ಬಿ, ಸಾಯಿಪ್ರಕಾಶ್, ಸುಭಾಷ್ ಹುಲಸೂರೆ, ಅಭಿಜೀತ್ ಕಾರಬಾರಿ, ಪ್ರದೀಪ್, ಅರವಿಂದ ಎಸ್. ಜಾಗಾವೆ, ಹಣಮಂತ ಪಾಟೀಲ, ಅರುಣ, ಸಿದ್ದು, ಪ್ರವೀಣ್, ಅಮರೇಶ್ವರ, ಸಂತೋಷ್, ಪ್ರದೀಪ್ ಬೇಂದ್ರೆ, ಕೈಲಾಶ ಬಿರಾದಾರ, ಪದ್ಮಾಕರ್, ಎಸ್.ಎಂ. ಕೃಷ್ಣ ಮೊದಲಾದವರು ಇದ್ದರು.

ಕೋಚಿಂಗ್ ಸೆಂಟರ್‌ಗಳಿಂದಾಗಿ ಜಿಲ್ಲೆಯ ಎಸ್‌ಎಸ್‌ಎಲ್‌ಸಿ, ಪಿಯುಸಿ ಫಲಿತಾಂಶದಲ್ಲಿ ಸುಧಾರಣೆಯಾಗಿದೆ. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಜಿಲ್ಲೆಯ ವಿದ್ಯಾರ್ಥಿಗಳು ಸಾಧನೆ ಮಾಡುತ್ತಿದ್ದಾರೆ.

**ಗೋಪಾಲ್ ಕುಲಕರ್ಣಿ**
**ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ**



# ನೀರಿನ ಮಿತ ಬಳಕೆ ಪ್ರತಿಯೊಬ್ಬರ ಜವಾಬ್ದಾರಿ : ಪೋಸ್ತಾರ್



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್ : ನಾಗರಿಕ ಸಮಾಜದ ಬೆಳವಣಿಗೆಗಾಗಿ ಕುಡಿಯುವ ನೀರಿನ ಮೂಲಗಳನ್ನು ಸಂರಕ್ಷಣೆ ಮಾಡುವುದು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದೆ ಎಂದು ಡಾ. ವಿಕಾಸ ಪೋಸ್ತಾರ ಹೇಳಿದರು.

ಪಟ್ಟಣದ ಕಲ್ಲೂರ ರಸ್ತೆಯ ಬಸವತೀರ್ಥ ವೀರಭದ್ರೇಶ್ವರ ದೇವಸ್ಥಾನ ಆವರಣದಲ್ಲಿ ಎಸ್ ಬಿಸಿಎಸ್ ಮತ್ತು ಎಸ್ ವಿ ಕಾಲೇಜಿನ ವತಿಯಿಂದ ಬುಧವಾರ ನಡೆದ ರಾಷ್ಟ್ರೀಯ ಸೇವಾ ಯೋಜನೆ ಶಿಬಿರ ಹಾಗೂ ಕುಡಿಯುವ ನೀರಿನ ಮೂಲಗಳ ಸಂರಕ್ಷಣೆ ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಜನಸಂಖ್ಯಾಪ್ರಮಾಣಜಾಸ್ತಿಯಾಗುತ್ತಿದ್ದಂತೆ ಮನುಷ್ಯನ ಅವಶ್ಯಕತೆ ಹೆಚ್ಚುತ್ತಿದ್ದು ನಗರೀಕರಣ ಹಾಗೂ ಕೃಷಿ ಚಟುವಟಿಕೆ ಜಾಸ್ತಿಯಾಗುತ್ತಿವೆ. ಇದರಿಂದ ನೀರಿನ ಅವಶ್ಯಕತೆ ಸಹ ಹೆಚ್ಚಾಗುತ್ತಿದೆ. ಆದ್ದರಿಂದ ಮಳೆ ನೀರನ್ನು ವೈಜ್ಞಾನಿಕವಾಗಿ ಬಳಸಿದಾಗ ಮಾತ್ರ ಸಮಸ್ಯೆ ನೀಗಲಿದೆ ಎಂದರು.

ರಾಷ್ಟ್ರೀಯ ಸೇವಾ ಯೋಜನೆ ಅಧಿಕಾರಿ ಪ್ರವೀಣ ಕಲಬುರ್ಗಿ ಮಾತನಾಡಿ, ಪರಿಸರದಲ್ಲಿನ ಗಿಡ ಮರಗಳನ್ನು ನಾಶ ಮಾಡುತ್ತಿರುವ ಹಿನ್ನಲೆ ನೀರಿನ ಮೂಲಗಳು ಕ್ಷೀಣಿಸುತ್ತಿವೆ. ಹೀಗಾಗಿ ಎಲ್ಲರೂ ಜಾಗೃತರಾಗಿ ಪರಿಸರದಲ್ಲಿ ಹೆಚ್ಚಿನ ಸಸಿಗಳನ್ನು ನೆಟ್ಟು ನೀರಿನ ಮೂಲ ಸಂರಕ್ಷಣೆ ಮಾಡಬೇಕು. ಜತೆಗೆ ವಿದ್ಯಾರ್ಥಿಗಳು ಕೂಡಾ ತಮ್ಮ ಮನೆಯ ಸುತ್ತಮುತ್ತಲು ನೀರಿನ ಮೂಲಗಳ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸುವ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ರವೀಂದ್ರನಾಥಪ್ಪ, ದೀಪಕ ಕಲಬುರ್ಗಿ, ಸಾಗಾರ ಸೇರಿ ವಿದ್ಯಾರ್ಥಿಗಳು ಇದ್ದರು.

# ಕದನ ವಿರಾಮ: ಸರ್ವ ಪಕ್ಷಗಳ ಸಭೆಗೆ ಮಲ್ಲಿಕಾರ್ಜುನ್ ಖರ್ಗೆ ಆಗ್ರಹ

ಕಲಬುರಗಿ,ಮೇ.13: ಭಾರತ ಮತ್ತು ಪಾಕಿಸ್ತಾನ ಕದನ ವಿರಾಮ ಘೋಷಣೆಯಾಗಲು ಇತರರ ಒತ್ತಡವಿದೆಯೇ ಅಥವಾ ಬೇರೆ ಕಾರಣಗಳಿವೆಯೇ ಎಂಬ ಸ್ಪಷ್ಟನೆ ನೀಡಲು ಪ್ರಧಾನಿ ಮೋದಿಯವರು ಸರ್ವ ಪಕ್ಷ ಸಭೆ ಕರೆಯಲಿ ಎಂದು ಎಐಸಿಸಿ ಅಧ್ಯಕ್ಷ ಹಾಗೂ ರಾಜ್ಯಸಭೆಯಲ್ಲಿನ ವಿರೋಧ ಪಕ್ಷದ ನಾಯಕ ಡಾ. ಮಲ್ಲಿಕಾರ್ಜುನ್ ಖರ್ಗೆ ಅವರು ಒತ್ತಾಯಿಸಿದರು.

ಮಂಗಳವಾರ ಬೆಳಿಗ್ಗೆ ತಮ್ಮ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಕದನ ವಿರಾಮಕ್ಕೆ ಪ್ರಯತ್ನ ಮಾಡಿರುವ ಟೆಲಿಫೋನ್ ಕರೆಗಳ ಮಾಹಿತಿಯೂ ಕೂಡ ನಮ್ಮ ಬಳಿ ಇದೆ. ಈ ನಿಟ್ಟಿನಲ್ಲಿ ಸರ್ವಪಕ್ಷ ಸಭೆ ಕರೆದು ಪ್ರಧಾನಿಯವರು ತಮ್ಮ ಸ್ಪಷ್ಟನೆ ನೀಡಲಿ, ಬಳಿಕ ನಾವು ನಮ್ಮ ಮಾಹಿತಿಯನ್ನು ಆಧರಿಸಿ ಅವರೊಂದಿಗೆ ಚರ್ಚಿಸುತ್ತೇವೆ. ಆಗ ನಿಜವಾದ ಮಾಹಿತಿ ದೇಶದ ಮುಂದೆ ಬರಲಿದೆ ಎಂದರು.

ಈ ನಿಟ್ಟಿನಲ್ಲಿ ಕಾಂಗ್ರೆಸ್ ಪಕ್ಷದ ಸಭೆಯು ದೆಹಲಿಯಲ್ಲಿ ನಡೆಯುತ್ತಿದ್ದು, ತಾವು ಅಲ್ಲಿಗೆ ತೆರಳುತ್ತಿರುವುದಾಗಿ ಹೇಳಿದ ಅವರು, ಕಾಂಗ್ರೆಸ್ ಪಕ್ಷದ ಸಭೆಯಲ್ಲೂ ಕೂಡ ಸರ್ವಪಕ್ಷಗಳ ಸಭೆ ಕರೆಯುವ ಕುರಿತು ಚರ್ಚೆ ನಡೆಯಲಿದೆ ಎಂದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.